ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಸಂಪುಟ 12 | ಸಂಚಿಕೆ 23 | ಜೂನ್ 4–10, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಹಿರಿಯ ಸಿಪಿಐ(ಎಂ) ನಾಯಕ

ಕಾಮ್ರೇಡ್ ಜಕ್ಕಾ ವೆಂಕಯ್ಯ ಲಾಲ್ ಸಲಾಂ!





‘ಮುದ್ರಾ’ ಮತ್ತು ‘ಜನಧನ’ ಬೊಗಳೆಗಳು



COBRAPOST OPERATION 136

ಹಿಂದುತ್ವ ಮತ್ತು ಮಾಧ್ಯಮಗಳ ‘ಸುವರ್ಣ’ಯುಗ






ಉಪ ಚುನಾವಣೆಗಳು : ಬಿಜೆಪಿಗೆ ಮತ್ತೆ ಮುಖಭಂಗ



ಸಾಲ ಮನ್ನಾ ಹೇಗೆ ಆಗಬೇಕು?



ಮತ್ತು ಚಿಲ್ಲರೆ ವ್ಯಾಪಾರಿಗಳು

ಕರ್ನಾಟಕ ವಿಧಾನ ಪರಿಷತ್
ಬೆಂಗಳೂರು ಪದವೀಧರ ಕ್ಷೇತ್ರದ ಚುನಾವಣೆ

ಎಡಪಕ್ಷಗಳ ಅಭ್ಯರ್ಥಿ

ಕೆ.ಪ್ರಕಾಶ್



ಮತದಾನದ ದಿನಾಂಕ 8 ಜೂನ್ 2018

10 ಲಕ್ಷ ಬ್ಯಾಂಕ್ ನೌಕರರ ಎರಡು ದಿನಗಳ ಐಕ್ಯ ಕಾರ್ಯಾಚರಣೆ
ಈಗಲೂ ಕಿವಿಗೊಡದಿದ್ದರೆ ಇನ್ನಷ್ಟು ತೀವ್ರ ಕಾರ್ಯಾಚರಣೆಯ ಎಚ್ಚರಿಕೆ

ಮೇ 30 ಮತ್ತು 31ರಂದು 10ಲಕ್ಷ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ದೇಶವ್ಯಾಪಿ ಮುಷ್ಕರ ನಡೆಸುವ ಮೂಲಕ ಕಾರ್ಪೊರೇಟ್ ಕುಳಗಳ ಬಾಕಿಸಾಲಗಳನ್ನು ವಸೂಲಿ ಮಾಡುವ ಬದಲು ಅದನ್ನು ಬ್ಯಾಂಕುಗಳ ಮೇಲೆಯೇ ವರ್ಗಾಯಿಸುವ ಹುನ್ನಾರದ ವಿರುದ್ಧ ಇಂಡಿಯನ್ ಬ್ಯಾಂಕರ್ಸ್ ಅಸೋಸಿಯೇಶನ್(ಐಬಿಎ)ಗೆ ಮತ್ತು ಅವರ ಮೂಲಕ ಮೋದಿ ಸರಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ನವಂಬರ್ 2017ರಿಂದ ಬಾಕಿಯಿರುವ ವೇತನ ಪರಿಷ್ಕರಣೆ ಕೇಳಿದಾಗ ಕೇವಲ 2% ಹೆಚ್ಚಳವನ್ನು ಸೂಚಿಸಿರುವುದರ ವಿರುದ್ಧ ಬ್ಯಾಂಕ್ ನೌಕರರು ಈ ಐಕ್ಯ ಕಾರ್ಯಾಚರಣೆಯ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಮಾಡಿದ್ದಾರೆ. ಬ್ಯಾಂಕ್ ನೌರರರ ಮತ್ತು ಅಧಿಕಾರಿಗಳ ಒಂಭತ್ತು ಸಂಘಟನೆಗಳ ಐಕ್ಯ ವೇದಿಕೆಯಾದ ಯುಎಫ್‌ಬಿಯು ಕರೆಯ ಮೇರೆಗೆ ಈ ಮುಷ್ಕರ ನಡೆದಿದೆ. ಇದರಲ್ಲಿ ಆಳುವ ಸಂಘ-ಪರಿವಾರಕ್ಕೆ ಸೇರಿದ ಎರಡು ಸಂಘಟನೆಗಳೂ ಭಾಗವಹಿಸಿರುವುದು ಗಮನಾರ್ಹ.

ಎಲ್ಲ ಸಾರ್ವಜನಿಕ ವಲಯದ ಬ್ಯಾಂಕುಗಳ ಮತ್ತು ಹೆಚ್ಚಿನ ಖಾಸಗಿ ವಲಯದ ಬ್ಯಾಂಕುಗಳ ನೌಕರರು, ಅಧಿಕಾರಿಗಳು ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ಮೊದಲ ದಿನ 85-90ಶೇಕಡಾ ಸಿಬ್ಬಂದಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರು. ಎರಡನೇ ದಿನ ಇದು 92%ಕ್ಕೇರಿತು. ಮೊದಲ ದಿನ 85ಸಾವಿರ ಬ್ಯಾಂಕ್ ಶಾಖೆಗಳು ಕೆಲಸ ಮಾಡಲಿಲ್ಲ, ಆದರೆ ತೆರೆದಿದ್ದವು, ಏಕೆಂದರೆ ಆ ಶಾಖೆಗಳ ಮುಖ್ಯಸ್ಥರು ಅವನ್ನು ತೆರೆದಿಟ್ಟಿದ್ದರು. ಆದರೆ ಎರಡನೇ ದಿನ 80 ಸಾವಿರ ಶಾಖೆಗಳು ಪೂರ್ಣವಾಗಿ ಮುಚ್ಚಿದವು, 5000 ಶಾಖೆಗಳು ಮಾತ್ರ ತೆರೆದಿದ್ದವು ಎಂದು ಅಖಿಲ ಭಾರತ ಬ್ಯಾಂಕ್ ನೌಕರರ ಪ್ರಧಾನ ಕಾರ್ಯದರ್ಶಿ ಸಿ.ಹೆಚ್. ವೆಂಕಟಾಚಲಂ ಹೇಳಿದ್ದಾರೆ.

ಸಂಬಳಗಳು ಕಾರ್ಯನಿರ್ವಹಣೆಗೆ ತಕ್ಕಂತೆ ಇರಬೇಕು ಎಂಬುದು ಐಬಿಎ ಮತ್ತು ಸರಕಾರದ ತರ್ಕ. ಸಾರ್ವಜನಿಕ ವಲಯದ ಬ್ಯಾಂಕುಗಳಾಗಲಿ, ಖಾಸಗಿ ಬ್ಯಾಂಕುಗಳಾಗಲಿ ನಮ್ಮ ದೇಶದಲ್ಲಿ ಲಾಭ ಉತ್ಪಾದಿಸುತ್ತಲೇ ಬಂದಿವೆ. ಕಳೆದ ಮೂರು ವರ್ಷಗಳಲ್ಲಿಯೂ ಉತ್ಪಾದಿಸಿವೆ. ಪ್ರಸಕ್ತ ಸರಕಾರ ಅಧಿಕಾರಕ್ಕೆ ಬಂದ ಮೇಲೂ ಬ್ಯಾಂಕ್ 'ನೌಕರರು 2014-15ರಲ್ಲಿ ರೂ.1,38,440 ಕೋಟಿ, 2015-16ರಲ್ಲಿ ರೂ.1.36,926 ಕೋಟಿ ಮತ್ತು 2015-17ರಲ್ಲಿ ರೂ.1,58, 982 ಕೋಟಿ ಲಾಭ ಉತ್ಪಾದಿಸಿದ್ದಾರೆ.

ಹಾಗಿದ್ದರೂ ಬ್ಯಾಂಕುಗಳು ಈ ಬಾರಿ ನಷ್ಟ ಘೋಷಿಸಿದ್ದರೆ ಅದಕ್ಕೆ ಆಳುವ ರಾಜಕಾರಣಿಗಳು ಮತ್ತು ಕಾರ್ಪೊರೇಟ್ ಕುಳಗಳ ಶಾಮೀಲು, ಹಾಗೂ ಅದಕ್ಕೆ ಬ್ಯಾಂಕಿನ ಉನ್ನತ ಆಡಳಿತಗಾರರ ನೆರವೇ ಕಾರಣ. ಇದನ್ನು ಪಂಜಾಬ್ ನ್ಯಾಶನಲ್ ಬ್ಯಾಂಕ್ ಹಗರಣ ಎತ್ತಿ ತೋರಿದೆ.

ಅದ್ದರಿಂದ ಎಂದಿನಂತೆ ತಮ್ಮ ದುಡಿಮೆಯ ಮೂಲಕ ಲಾಭ ಉತ್ಪಾದಿಸಿ ಕೊಟ್ಟಿರುವ ಸಿಬ್ಬಂದಿಗೆ ಅವರ ದುಡಿಮೆಯ ಪಾಲು ಕೊಡಬೇಕು, ಮತ್ತು ಒಟ್ಟಾರೆ ನಷ್ಟಗಳಿಗೆ ಕಾರಣರಾದ ಉನ್ನತ ಆಡಳಿತಗಾರರಿಗೆ ಸೂಕ್ತ ಶಿಕ್ಷೆ ವಿಧಿಸಬೇಕು ಎಂಬುದು ಈ ಮುಷ್ಕರದ ಮೂಲಕ ಬ್ಯಾಂಕ್ ನೌಕರರು ನೀಡಿರುವ ಎಚ್ಚರಿಕೆ.

2013-14 ರ ಹಣಕಾಸು ವರ್ಷ ಕೊನೆಗೊಂಡಾಗ ಮರುಪಾವತಿಯಾಗುವುದಿಲ್ಲ ಎಂದು ಪರಿಗಣಿಸಿದ ಸಾಲಗಳ ಮೊತ್ತ 2,29,278 ಕೋಟಿ ರೂ. ಇತ್ತು. ಡಿಸೆಂಬರ್ 31, 2017 ರ ವೇಳೆಗೆ ಅದು 7,70,280 ಕೋಟಿ ರೂ.ಗೇರಿದೆ, ಅಂದರೆ ಮೂರು ಪಟ್ಟಾಗಿದೆ. ಇದರಿಂದಾಗಿ ಕಳೆದ ಮೂರು ವರ್ಷಗಳ ಮೇಲೆ ಹೇಳಿದ ಲಾಭಗಳಿಗೆ ಅನುಕ್ರಮವಾಗಿ 1,00,900 ಕೋಟಿ, 1,54,918 ಕೋಟಿ ಮತ್ತು 1,70,370 ಕೋಟಿ ಕಾರ್ಪೊರೇಟ್ ಕುಳಗಳು ಹಿಂದುರಿಗಿಸದ ಸಾಲಗಳಿಗೆಂದು ಒದಗಿಸಲಾಗಿದೆ. ವಾಸ್ತವವಾಗಿ ನೌಕರರು, ಇತರ ಸಿಬ್ಬಂದಿಗೆ 1% ವೇತನ ಹೆಚ್ಚಳಕ್ಕೆ ಬೇಕಾಗುವುದು ಕೇವಲ 500 ಕೋಟಿ ರೂ. ಎಂದು ಬಿಇಎಫ್‌ಐ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಬಿಸ್ವಾಸ್ ಹೇಳುತ್ತಾರೆ.

ನೌಕರರು ಸರಕಾರ-ಐಬಿಎ ತಮ್ಮ 'ದೇಶಭಕ್ತ' ಸುಸ್ತಿ ಸಾಲಗಾರ ಕಾರ್ಪೊರೇಟ್‌ಗಳಿಗೆ, ಅಥವ ರಿಝರ್ವ್ ಬ್ಯಾಂಕ್ ಗುರುತಿಸಿರುವ 500 ಎನ್‌ಪಿಎ ಖಾತೆಗಳಿಗೆ ಅಥವ ಈಗ ಸಾಲ ಹಿಂದಿರುಗಿಸದ ಕಾರ್ಪೊರೇಟ್‌ಗಳಿಗೆ ಈ ಸರಕಾರ ಕೊಟ್ಟಿರುವ ಹೊಸ ಸೌಕರ್ಯವಾದ ಐಬಿಸಿ(ಪಾಪರ್ ಮತ್ತು ದಿವಾಳಿ ಸಂಹಿತೆ!) ಅಡಿಯಲ್ಲಿ 'ಪರಿಹಾರ'ಕ್ಕೆ ಒಳಗಾಗಿರುವ 12 ಖಾತೆಗಳಿಗೆ ಕೊಡಮಾಡುತ್ತಿರುವ ಬಕ್ಷೀಸುಗಳಿಗೆ ಸರಿಗಟ್ಟುವ ಹೆಚ್ಚಳವನ್ನೇನೂ ಕೇಳುತ್ತಿಲ್ಲ. ದೇಶಕ್ಕಾಗಿ ತಮ್ಮ ದುಡಿಮೆಯಿಂದ ಲಕ್ಷಾಂತರ ಕೋಟಿ ರೂ.ಗಳನ್ನು ಉತ್ಪಾದಿಸುವ ಸಿಬ್ಬಂದಿಗೆ ಈ ಐಬಿಸಿ ಅಡಿಯಲ್ಲಿ ಕೇವಲ ಒಂದು ಕಂಪನಿಯ , ಅಂದರೆ ಎಂಇಐಎಲ್‌ನ ಸುಸ್ತಿ ಸಾಲ 'ಪರಿಹಾರ' ಕ್ರಮವಾಗಿ ಬ್ಯಾಂಕುಗಳು ಅನುಭವಿಸಬೇಕಾದ 'ಚೌರ'(ಹೇರ್‌ಕಟ್)ದಷ್ಟು ಹಣದಿಂದ ಒಂದು ಉತ್ತಮ ವೇತನ ಪರಿಷ್ಕರಣೆ ಕೊಡಲು ಸಾಧ್ಯವಿದೆ ಎಂದು ಪ್ರಧೀಪ್ ಬಿಸ್ವಾಸ್ ಹೇಳುತ್ತಾರೆ.

ಅದೇನೇ ಇರಲಿ, ಯುಎಫ್‌ಬಿಯು ಅಡಿಯಲ್ಲಿ ಒಂದಾಗಿರುವ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ಒಂದು ನ್ಯಾಯಯುತ ವೇತನ ಪರಿಷ್ಕರಣೆಯನ್ನು ಪಡೆಯಲು ದೃಢನಿರ್ಧಾರ ಮಾಡಿದ್ದಾರೆ. ಈಗಲೂ ಐಬಿಎ ಇದನ್ನು ನಿರ್ಲಕ್ಷಿಸಿದರೆ, ಕೇಳಲು ನಿರಾಕರಿಸಿದರೆ ನೌಕರರು ಮತ್ತು ಅಧಿಕಾರಿಗಳು ಇನ್ನೂ ತೀವ್ರತರ ಕಾರ್ಯಾಚರಣೆಗಳಿಗೆ ಇಳಿಯಬೇಕಾಗುತ್ತದೆ ಎಂದು ಪ್ರದೀಪ್ ಬಿಸ್ವಾಸ್ ಬ್ಯಾಂಕ್ ಸಿಬ್ಬಂದಿಯ ಪರವಾಗಿ ಎಚ್ಚರಿಸಿದ್ದಾರೆ.





ಆಂಧ್ರಪ್ರದೇಶದ ಹಿರಿಯ ಕಮ್ಯುನಿಸ್ಟ್ ನೇತಾರ
ಜಕ್ಕಾ ವೆಂಕಯ್ಯ ನಿಧನ

ಆಂಧ್ರಪ್ರದೇಶದ ಹಿರಿಯ ಕಮ್ಯುನಿಸ್ಟ್ ಮುಖಂಡರಾಗಿರುವ ಜಕ್ಕಾ ವೆಂಕಯ್ಯ ಮೇ 29ರಂದು ನಿಧನರಾಗಿದ್ದಾರೆ. ಅವರು ಈ ಹಿಂದೆ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿದ್ದರು. ಅವರಿಗೆ 84 ವರ್ಷ.

ನೆಲ್ಲೂರು ಜಿಲ್ಲೆಯಲ್ಲಿ ಕೃಷಿ ಕೂಲಿಕಾರರ ಸಂಘಟನೆಯೊಂದಿಗೆ ಆರಂಭಿಸಿದ ಅವರು ಅಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದರು. 1970 ರ ದಶಕದಲ್ಲಿ ಕೃಷಿ ಕೂಲಿಕಾರರ ಹೋರಾಟಗಳಿಗೆ ಮತ್ತು 1980ರ ದಶಕದಲ್ಲಿ ಹಲವು ಭೂಮಿ ಹೋರಾಟಗಳಿಗೆ ಅವರು ನೇತೃತ್ವ ನೀಡಿದರು.

ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿಯಾಗಿ, ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರಾಗಿ ಮತ್ತು ಕೇಂದ್ರ ಸಮಿತಿ ಸದಸ್ಯರಾಗಿ ಅವರು ವಿವಿಧ ಹಂತಗಳಲ್ಲಿ ಪಕ್ಷ ಕಟ್ಟುವ ಜವಾಬ್ದಾರಿಯನ್ನು ನಿರ್ವಹಿಸಿದರು. ಎರಡು ಅವಧಿಗೆ ಅವರು ವಿಧಾನ ಸಭಾ ಸದಸ್ಯರಾಗಿಯೂ ಆಯ್ಕೆಗೊಂಡಿದ್ದರು.

ಅವರೊಬ್ಬ ಅಕಳಂಕ ಪ್ರಾಮಾಣಿಕತೆಯ ಮುಖಂಡರು ಮತ್ತು ಸಮರ್ಪಿತ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದೆ. ಅವರ ಪತ್ರಿ ಮತ್ತು ಮಕ್ಕಳಿಗೆ ಪಕ್ಷ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಎಐಕೆಎಸ್ ನಮನ

ಅಖಿಲ ಬಾರತ ಕಿಸಾನ್ ಸಭಾ ಕೂಡ ಜಕ್ಕಾ ವೆಂಕಯ್ಯನವರಿಗೆ ಶ್ರದ್ಧಾಂಜಲಿ ಅರ್ಪಿಸಿದೆ.

ಚಿಕ್ಕ ವಯಸ್ಸಿನಲ್ಲೇ ಅವರು ಪಿ. ಸುಂದರಯ್ಯ ಮತ್ತು ತೆಲ;ಂಗಾಣ ಸಶಸ್ತ್ರ ರೈತ ಹೋರಾಟದಿಂದ ಸ್ಫೂರ್ತಿ ಪಡೆದು ಕಮ್ಯುನಿಸ್ಟ್ ಆಂದೋಲನಕ್ಕೆ ಸೇರಿದವರು ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ನೆನಪಿಸಿಕೊಂಡಿದೆ. ಅವರು ಆಂದ್ರಪ್ರದೇಶ ಕೃಷಿ ಕೂಲಿಕಾರರ ಸಂಘದ ಉಪಾಧ್ಯಕ್ಷರು ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿದ್ದರು.

ತಮ್ಮ ಸರಳ ಜೀವನ ಶೈಲಿ, ಎಲ್ಲರೊಂದಿಗೆ ಬೆರೆಯುವ ಸ್ವಭಾವ, ಜನಗಳ ಪ್ರಶ್ನೆಗಳ ಆಮೂಲಾಗ್ರ ಅಧ್ಯಯನ ಮತ್ತು ಜನಗಳ ಹೋರಾಟಗಳಲ್ಲಿ ಮಧ್ಯಪ್ರವೇಶದಿಂದಾಗಿ ಅಪಾರ ಗೌರವಕ್ಕೆ ಪಾತ್ರರಾಗಿದ್ದವರು ಎಂದು ಎಐಕೆಎಸ್ ಹೇಳಿದೆ.

ಕೃಷಿ ಬಿಕ್ಕಟ್ಟನ್ನು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ
-ರಾಷ್ಟ್ರಪತಿಗಳಿಗೆ ಕಿಸಾನ್ ಸಂಘರ್ಷ ಸಮಿತಿ ಮನವಿ

ಕಳೆದ ವರ್ಷ ನವಂಬರ್ 20-21 ರಂದು ದಿಲ್ಲಿಯಲ್ಲಿ ನಡೆದ ಕಿಸಾನ್ ಮುಕ್ತಿ ಸಂಸದ್ ಮಹಾಸಭೆ ಅಂಗೀಕರಿಸಿದ ಮತ್ತು ದೇಶಾದ್ಯಂತ ಸಾರ್ವಜನಿಕ ಚರ್ಚೆಗಳ ಮೂಲಕ ಅಂತಿಮಗೊಳಿಸಿದ ರೈತರ ಸಾಲ ಹೊರೆಗಳು ಮತ್ತು ಕನಿಷ್ಟ ಬೆಂಬಲ ಬೆಲೆಗಳ ಪ್ರಶ್ನೆಗಳನ್ನು ನಿರ್ವಹಿಸುವ ಕುರಿತ ಎರಡು ಮಸೂದೆಗಳೊಂದಿಗೆ ಅಖಿಲ ಭಾರತ ಕಿಸಾನ್ ಸಂಘರ್ಷ ಸಮಿತಿ(ಎಐಕೆಎಸ್‌ಸಿಸಿ)ಯ ಮುಖಂಡರು ಮೇ 28ರಂದು ರಾಷ್ಟ್ರಪತಿಗಳನ್ನು ಭೇಟಿ ಮಾಡಿದರು. ದೇಶದ ಕೋಟ್ಯಂತರ ರೈತರನ್ನು ಬಾಧಿಸುವ ಕೃಷಿ ಬಿಕ್ಕಟ್ಟಿನ ಬಗ್ಗೆ ಚರ್ಚಿಸಲು ಒಂದು ವಿಶೇಷ ಸಂಸದ್ ಅಧಿವೇಶನವನ್ನು ಕರೆಯಬೇಕು, ಅದರಲ್ಲಿ ಈ ಎರಡು ಮಸೂದೆಗಳನ್ನು ಚರ್ಚಿಸಿ ಅಂಗೀಕರಿಸಬೇಕು ಎಂದು ಅವರು ಮನವಿ ಮಾಡಿಕೊಂಡರು. 21 ರಾಜಕೀಯ ಪಕ್ಷಗಳು ಈ ಮಸೂದೆಗಳಿಗೆ ಬೆಂಬಲ ಸೂಚಿಸಿವೆ ಎಂಬ ಸಂಗತಿಯನ್ನೂ ರೈತ ಮುಖಂಡರು ರಾಷ್ಟ್ರಪತಿಗಳ ಗಮನಕ್ಕೆ ತಂದರು. ರಾಷ್ಟ್ರಪತಿಗಳು ರೈತರ ಆಗ್ರಹಗಳ ಬಗ್ಗೆ ತನ್ನ ಬೇಬಲ ಸೂಚಿಸಿದರು ಎಂದು ವರದಿಯಾಗಿದೆ.

ಏನೇ ಅಗಲಿ, ಈ ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದು, ಮತ್ತು ಎಐಕೆಎಸ್‌ಸಿಸಿ ಸದಸ್ಯರುಗಳು ತಮ್ಮ ಸ್ಥಳೀಯ ಎಂಪಿಗಳು ಈ ಮಸೂದೆಗಳನ್ನು ಬೆಂಬಲಿಸುವಂತೆ ಒತ್ತಡ ಹಾಕಲಾಗುವುದು ಎಂದು 193 ರೈತ ಸಂಘಟನೆಗಳ ಈ ಐಕ್ಯವೇಧಿಕೆಯ ಮುಖಂಡರು ಹೇಳಿದ್ದಾರೆ.

ಜೂನ್ 5ಕ್ಕೆ ಮಧ್ಯಪ್ರದೇಶದ ಮಂದಸೌರ್‌ನಲ್ಲಿ ರೈತರ ಗೋಲೀಬಾರ್‌ಗೆ 6 ರೈತರು ಬಲಿಯಾಗಿ ಒಂದು ವರ್ಷವಾಗುತ್ತದೆ. ಆದ್ದರಿಂದ ಈ ಜೂನ್ 6ನ್ನು 'ಮಂದಸೌರ್ ಶಹೀದ್ ಕಿಸಾನ್ ಸ್ಮೃತಿ ದಿವಸ್' ಆಗಿ ಆಚರಿಸಬೇಕು ಎಂದೂ ಎಐಕೆಎಸ್‌ಸಿಸಿ ಕರೆ ನೀಡಿದೆ. ಇದಕ್ಕೆ ಪೂರ್ವಭಾವಿಯಾಗಿ ಜೂನ್ 4ರಂದು ಭೋಪಾಲ್‌ನಲ್ಲಿ ಒಂದು ಪಂಜಿನ ರ್‍ಯಾಲಿ, ಜೂನ್ 5ರಂದು ಬುಧ್ ಗ್ರಾಮದಲ್ಲಿ ಒಂದು ಸ್ಮಾರಕ ಸಭೆ ಮತ್ತು ಜೂಣ್ 6ರಂದು ಟಕ್ರವತ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದು. ಅಂದು ದೇಶದ ಇತರ ಎಲ್ಲ ಜಿಲ್ಲೆಗಳಲ್ಲಿ ಗೋಲೀಬಾರ್ ನಡೆಸಿದ ಅಧಿಕಾರಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆಗಳು ನಡೆಯುತ್ತವೆಎಂದು ಎಐಕೆಎಸ್‌ಸಿಸಿ ಹೇಳಿದೆ.

ತಮಿಳುನಾಡಿನ ತೂತುಕುಡಿಯಲ್ಲಿ ಸ್ಟೆರ್‌ಲೈಟ್ ಪರಿಸರ ಮಾಲಿನ್ಯದ ವಿರುದ್ಧ ಪ್ರತಿಭಟಿಸುತ್ತಿದ್ದ ಜನಗಳ ಮೇಲೆ ಗೋಲೀಬಾರ್ ಮತ್ತು ಉತ್ತರಪ್ರದೇಶ ಸರಕಾರ ಕಬ್ಬು ಬೆಳೆಗಾರರಿಗೆ ಸಲ್ಲಬೇಕಾದ ಬಾಕಿಯನ್ನು ಕೊಡಿಸುವಲ್ಲಿ ವಿಫಲವಾಗಿರುವುದನ್ನು, ಅದನ್ನು ಪ್ರತಿಭಟಿಸಿದಾಗ ಒಬ್ಬ ರೈತನ ಸಾವಿಗೆ ಕಾರಣವಾದದ್ದನ್ನು ಬಲವಾಗಿ ಖಂಡಿಸಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಭಾರೀ ಶುಲ್ಕ ಹೆಚ್ಚಳ- ಎಸ್‌ಎಫ್‌ಐ ಖಂಡನೆ

ಕಳೆದ ಒಂದು ದಶಕದಿಂದ ಪ್ರತಿವರ್ಷ ಸರಾಸರಿ 17% ಶುಲ್ಕ ಹೆಚ್ಚಳ ಮಾಡುತ್ತಿರುವ ಪಿಲಾನಿಯ ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಈ ವರ್ಷ ಮತ್ತೆ ಭಾರೀ ಹೆಚ್ಚಳವನ್ನು ವಿದ್ಯಾರ್ಥಿಗಳ ಮೇಲೆ ಹೇರಿದೆ. ಎಸ್‌ಎಫ್‌ಐ ನ ಕೇಂದ್ರೀಯ ಕಾರ್ಯಕಾರಿ ಸಮಿತಿ ಇದನ್ನು ಬಲವಾಗಿ ವಿರೋಧಿಸಿದೆ.

ಆದರೆ ಈ ರೀತಿ ಸತತ ಶುಲ್ಕ ಹೆಚ್ಚಳ ಮಡುತ್ತಿರುವುದು ಇದೊಂದೇ ಸಂಸ್ಥೆಯಲ್ಲ. ಭಾರೀ ಶುಲ್ಕ ಹೆಚ್ಚಳ ಈಗ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ, ಐಐಟಿ, ಟಿಐಎಸ್‌ಎಸ್, ಮತ್ತಿತರ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲೂ ಸಾಮಾನ್ಯ ಸಂಗತಿಯಾಗುತ್ತಿದೆ. ಇದು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ 'ಸಮಾನ ಅವಕಾಶ' ಕೊಡಿಸುವ ನವ-ಉದಾರವಾದಿ ಧೋರಣೆಯ ಭಾಗ ಎಂದು ಎಸ್‌ಎಫ್‌ಐ ಅಭಿಪ್ರಾಯ ಪಟ್ಟಿದೆ. ಇದನ್ನು ಶಿಕ್ಷಣಕ್ಕೆ ಬಜೆಟ್ ನೀಡಿಕೆಗಳನ್ನು ಕಡಿತ ಮಾಡುವ ಮೂಲಕ ಸರಕಾರಗಳು ಮಾಡುತ್ತಿವೆ ಎಂದಿರುವ ಅದು ಈ ಎಲ್ಲ ಶುಲ್ಕ ಏರಿಕೆಗಳನ್ನು ಹಿಂತೆಗೆದು ಕೊಳ್ಳಬೇಕು, ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಸಾರ್ವಜನಿಕ ನಿಯಂತ್ರಣಕ್ಕೆ ಒಳಪಡಿಸಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸಿದೆ, ಇಲ್ಲವಾದರೆ ಇದಕ್ಕಾಗಿ ದೇಶವ್ಯಾಪಿ ಚಳುವಳಿ ಆರಂಭಿಸುವುದಾಗಿ ಅದು ಎಚ್ಚರಿಸಿದೆ.

ಸಂಪಾದಕೀಯ

ಸಾಲಮನ್ನಾ ಹೇಗೆ ಮಾಡಬೇಕು?

ಮುಖ್ಯಮಂತ್ರಿಯಾಗಿ ಕುಮಾರಸ್ವಾಮಿ ಮತ್ತು ಉಪಮುಖ್ಯಮಂತ್ರಿಯಾಗಿ ಡಾ. ಪರಮೇಶ್ವರ ಅವರು ಅಧಿಕಾರ ವಹಿಸಿಕೊಂಡು ವಿಶ್ವಾಸ ಮತ ಗೆದ್ದು ಸುಮಾರು 10 ದಿನಗಳು ಸಚಿವ ಸಂಪುಟ ರಚನೆಯ ಬಗ್ಗೆ ಒಪ್ಪಂದಕ್ಕೆ ಬರಲು ಬೇಕಾಯಿತು ಎನ್ನುವುದೇ ಆತಂಕದ ವಿಷಯ. (ಪತ್ರಿಕೆ ಪ್ರಿಂಟಿಗೆ ಹೋಗುವ ಹೊತ್ತಿಗೆ ಅಂದರೆ ಜೂನ್ 1 ರಾತ್ರಿ) ಇನ್ನೂ ಕಾಂಗ್ರೆಸ್ ಮತ್ತು ಜೆಡಿ(ಎಸ್) ನಡುವೆ ಖಾತೆ ಹಂಚಿಕೆಯಾಗಿದೆಯೇ ವಿನಃ, ಖಾತೆಯ ಮಂತ್ರಿ ಯಾರು ಎಂದು ಇನ್ನೂ ನಿರ್ಧಾರವಾಗಿಲ್ಲ. ಇನ್ನೊಂದು ಸುತ್ತಿನ ಲಾಬಿ ಚೌಕಾಶಿ ನಡೆಯಲಿದೆ. ಈಗ ಬಂದ ಸುದ್ದಿಗಳ ಪ್ರಕಾರ ಮುಂದಿನ ಬುಧವಾರದ ಹೊತ್ತಿಗೆ ಸಂಪುಟ ರಚನೆ ಆಗಬಹುದು ಎಂಬ ನಿರೀಕ್ಷೆ ಇದೆ. ಅನಿರೀಕ್ಷಿತ ತೊಡಕುಗಳ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಎರಡು ಪಕ್ಷಗಳ ನಡುವೆ ಖಾತೆಯ ಹಂಚಿಕೆ ಸಹ ಕೇಂದ್ರ ನಾಯಕರ ಸತತ ಮಧ್ಯಪ್ರವೇಶದ ನಂತರವೇ ಸಾಧ್ಯವಾಯಿತು ಎಂಬುದು ಸಹ ಆತಂಕದ ವಿಷಯ. ಈ ನಡುವೆ ರಾಜರಾಜೇಶ್ವರಿನಗರದಲ್ಲಿ ಕಾಂಗ್ರೆಸಿನ ಭಾರೀ ವಿಜಯ ಮತ್ತು ದೇಶಾದ್ಯಂತ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಐಕ್ಯ ಹೋರಾಟದಿಂದ ಬಿಜೆಪಿಗೆ ಮುಖಭಂಗವಾಗುವ ಪರಾಭವ – ಇವುಗಳಿಂದಾಗಿ "ಅಪರೇಶನ್ ಕಮಲ"ದ ಭೀತಿ ಕಡಿಮೆಯಾಗಿರಬಹುದು. ಆದರೆ ಈವರೆಗಿನ ವಿದ್ಯಮಾನಗಳನ್ನು ನೋಡಿದರೆ, ಖಾತೆ ಹಂಚಿಕೆಯ ನಂತರ ಸರಕಾರದ ಭದ್ರತೆಗೆ ಹೊಸ ಸವಾಲುಗಳು ಇವೆ ಎಂಬುದನ್ನು ತಳ್ಳಿ ಹಾಕುವಂತಿಲ್ಲ.

ಸಚಿವ ಸಂಪುಟ ರಚನೆಯ ವೇಳಾಪಟ್ಟಿಯಾದರೂ ನಿಗದಿಯಾಗಿದ್ದರೂ, ಈ ವರೆಗೆ ಮೈತ್ರಿಕೂಟದ ಕನಿಷ್ಟ ಸಾಮಾನ್ಯ ಕಾರ್ಯಕ್ರಮ ಏನು ಎಂಬುದರ ಬಗ್ಗೆ ಯಾರೂ ಚಕಾರವೆತ್ತಿಲ್ಲ. ಕನಿಷ್ಟ ಸಾಮಾನ್ಯ ಕಾರ್ಯಕ್ರಮ ರೂಪಿಸಲು ಇನ್ನೂ ಕೆಲಸವಾಗಲಿ ವೇಳಾಪಟ್ಟಿಯಾಗಲಿ ನಿಗದಿತವಾಗಿಲ್ಲ. ಈ ನಡುವೆ ಸಾಲಮನ್ನಾದ ಪ್ರಶ್ನೆ ಮುನ್ನೆಲೆಗೆ ಬಂದಿದ್ದು, ಮುಖ್ಯಮಂತ್ರಿ ಕುಮಾರಸ್ವಾಮಿ ರೈತ ಸಂಘಟನೆಗಳ ಪ್ರತಿನಿಧಿಗಳ ಸಭೆ ಕರೆದಿದ್ದು ಸ್ವಾಗತಾರ್ಹವೇ. ಎರಡು ವಾರಗಳ ಸಮಯ ಕೇಳಿದ್ದೂ ತಪ್ಪೇನಲ್ಲ. ಆದರೆ ಸಾಲಮನ್ನಾದ ಬಗ್ಗೆ ಅವರೇ ಎತ್ತಿದ ಪ್ರಶ್ನೆಗಳು ಈ ಬಗ್ಗೆ ಸರಕಾರಕ್ಕೆ ಯಾವುದೇ ಧೋರಣೆಗಳ ಚೌಕಟ್ಟು ಇಲ್ಲ ಎಂಬುದು ಸ್ಪಷ್ಟವಾಗಿದೆ.

ಸಿದ್ಧರಾಮಯ್ಯ ಸರಕಾರವು ಹಿಂದೆ ಪ್ರಕಟಿಸಿದ್ದ ಸಹಕಾರಿ ಬ್ಯಾಂಕುಗಳಲ್ಲಿ ಜೂನ್ 20, 2017ರವರೆಗೆ ರೈತರು ಪಡೆದ ಒಟ್ಟು ಅಲ್ಪಾವಧಿ ಬೆಳೆ ಸಾಲದಲ್ಲಿ 50 ಸಾವಿರ ರೂಪಾಯಿಗಳ ಮನ್ನಾ ಘೋಷಣೆಯ ಹಾದಿಯಲ್ಲಿ ಸಹ ಈ ಸರಕಾರ ಹೋದರೆ, ಒಟ್ಟಾರೆ, ರಾಜ್ಯದ ಸಾಲ ಬಾಧಿತ ರೈತರ/ಗೇಣಿದಾರರ ಮತ್ತು ಕೂಲಿಕಾರರ ಆತ್ಮಹತ್ಯೆಗಳನ್ನು ತಡೆಯುವಲ್ಲಿ ಅಥವಾ ಅವರ ಸಮಸ್ಯೆ ಪರಿಹರಿಸುವಲ್ಲಿ ಅಷ್ಟೇನೂ ಸಹಕಾರಿಯಾಗುವುದಿಲ್ಲ. ಅದಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳ ಸಾಲಮನ್ನಾ ಸೇರಿಸಿದರೂ ಸಹ ಅದರ ಪರಿಣಾಮವೂ ಅಷ್ಟೇ.

ಸಹಕಾರಿ ಬ್ಯಾಂಕುಗಳು ಬಹುತೇಕ ಭೂಮಾಲಕ ಬಂಡವಾಳದಾರರ ಹಿಡಿತ ಮತ್ತು ಸೇವೆಯಲ್ಲಿರುವುದರಿಂದ ಸಾಲ ಬಾಧಿತರಲ್ಲದ ಮತ್ತು ರೈತರ ಸಾಲಬಾದೆಗೆ ಕಾರಣವಾದ ಇವರ ಸಾಲವನ್ನು ಮನ್ನಾ ಮಾಡುವುದರಿಂದ, ರಾಜ್ಯದ 65 ಲಕ್ಷ ರೈತರು ಮತ್ತು ಸುಮಾರು 75 ಲಕ್ಷದಷ್ಟಿರುವ ಕೂಲಿಕಾರರು ಗೇಣಿದಾರರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಈ ಸಾಲಮನ್ನಾದ ಪ್ರಯೋಜನವು ಕೇವಲ ಶೇ 15 ಜನರಷ್ಟು ಬಾಧಿತರಿಗೆ ಮಾತ್ರ ಭಾಗಶಃ ಸಹಕಾರಿಯಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಸಾಲಮನ್ನಾ ಸಹ ಇದೇ ಶೇ. 15 ಜನರಿಗೆ ಮಾತ್ರ ಪ್ರಯೋಜನವಾಗುವಂತಹುದು.

ಸಾಲ ಬಾಧಿತ ರೈತರ ಹಾಗೂ ಕೂಲಿಕಾರರ ಮತ್ತು ಗೇಣಿದಾರರ ಖಾಸಗಿ ಸಾಲವೂ ಸೇರಿದಂತೆ, ಸಹಕಾರಿ ಹಾಗೂ ಸಾರ್ವಜನಿಕ ಬ್ಯಾಂಕುಗಳ ಎಲ್ಲಾ ರೀತಿಯ ಸಾಲವನ್ನು, ಕೇರಳ ಸರಕಾರ ಋಣಮುಕ್ತ ಕಾಯ್ದೆಯನ್ನು ಜಾರಿಗೊಳಿಸಿದ ಮಾದರಿಯಲ್ಲಿ, ಕರ್ನಾಟಕದಲ್ಲೂ ಜಾರಿಗೊಳಿಸುವುದು ಮಾತ್ರವೇ, ಸಾಲದ ಬಾಧೆಯಿಂದ ಅವರನ್ನು ತಕ್ಷಣ ರಕ್ಷಿಸಲಿರುವ ಮಾರ್ಗವಾಗಿದೆ. ಖಾಸಗಿ ಸಾಲದ ಸಾಲಮನ್ನಾ ಮಾಡದೆ ಬಹುಸಂಖ್ಯಾತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಅಲ್ಲದೆ ರೈತರ ಆತ್ಮಹತ್ಯೆಯಾಗಲಿ, ಸಾಲಬಾಧೆಗೆ ಪರಿಹಾರವಾಗಲಿ ಬೆಳೆ ವಿಮೆ ಮತ್ತು ಲಾಭದಾಯಕ ಬೆಲೆಯ ಸಮಸ್ಯೆ ಬಗೆಹರಿಸದೆ ಸಾಧ್ಯವಿಲ್ಲ.

ಆದ್ದರಿಂದ ರಾಜ್ಯದ ರೈತರು, ಕೂಲಿಕಾರರ ಮತ್ತು ಗೇಣಿದಾರರ, ಕಸುಬುದಾರರು ಎಲ್ಲ ರೀತಿಯ ಸಾಲಮನ್ನಾಕ್ಕಾಗಿ, ಸಮರ್ಪಕ ಬೆಳೆವಿಮೆಗಾಗಿ, ಮತ್ತು ಡಾ. ಎಂ ಎಸ್ ಸ್ವಾಮಿನಾಥನ್ ಸಲಹೆಯಂತೆ ಉತ್ಪಾದನಾ ವೆಚ್ಚಕ್ಕೆ ಶೇ 50ರಷ್ಟು ಲಾಭಾಂಶ ಸೇರಿಸಿದಂತೆ ನಿಗದಿಸಲಾದ ಕನಿಷ್ಟ ಬೆಂಬಲ ಬೆಲೆಯ ಖಾತರಿಗಾಗಿ ರಾಜ್ಯ ಸರಕಾರ ಕ್ಷಿಪ್ರ ಕಾರ್ಯಕ್ರಮ ಕೈಗೊಳ್ಳಬೇಕು.

ಇಂತಹ ಸಮಗ್ರ ಸಾಲಮನ್ನಾವಾಗಲಿ, ಬೆಂಬಲ ಬೆಲೆಯಾಗಲಿ ಕೇಂದ್ರ ಸರಕಾರದ ಆರ್ಥಿಕ ಬೆಂಬಲವಿಲ್ಲದೆ ಕಷ್ಟಸಾಧ್ಯ. ನಿಜವಾಗಿಯೂ ಕೃಷಿಯಿಂದ ರೈತನನ್ನು ಓಡಿಸುವ ಕೇಂದ್ರ ಸರಕಾರದ ನೀತಿಗಳ ಜಾರಿಯಿಂದಾಗಿಯೇ ಈ ಸಮಸ್ಯೆ ಉಂಟಾಗಿರುವುದು. ಅದರ ಪರಿಹಾರಕ್ಕೆ ಆ ಸಮಸ್ಯೆ ಕಾರಣರಾದವರು ಅದರ ವೆಚ್ಚ ಭರಿಸೇಬೇಕು. 24 ಗಂಟೆಗಳ ಒಳಗೆ ಸಾಲಮನ್ನಾ ಮಾಡದಿದ್ದರೆ ರಾಜ್ಯ ಬಂದ್ ನ ನಾಟಕ ಮಾಡಿದ ಬಿಜೆಪಿ ಯಿಂದ ರಾಜ್ಯ ಸರಕಾರ ಮಾತ್ರವಲ್ಲ, ರೈತರು ಜನತೆ ಈ ಬಗ್ಗೆ ಅವರ ಧೋರಣೆ ಏನು ಎಂದು ಕೇಳಬೇಕಾಗಿದೆ. ಒತ್ತಡ ಹಾಕಬೇಕಾಗಿದೆ.

ಬಡವರ ಮೇಲೆ ತೆರಿಗೆ, ಶ್ರೀಮಂತರಿಗೆ ಲಾಲನೆ-ಪಾಲನೆ-ಇದು ಮೋದಿ ಮಂತ್ರ: ಸೀತಾರಾಮ್ ಯೆಚುರಿ

ಜೂನ್ 1 ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾಕಾರಟ್ ವಿವಿಧ ರಂಗಗಳಲ್ಲಿ ಮೋದಿ ಸರಕಾರದ ವಿಫಲತೆಗಳನ್ನು ವಿವರಿಸುವ ನಾಲ್ಕು ಕಿರುಪುಸ್ತಕಗಳನ್ನು ಬಿಡುಗಡೆ ಮಾಡಿದರು. ಮೋದಿ ಸರಕಾರ ಒಂದು ಲೂಟಿ ಮತ್ತು ಸುಳ್ಳುಗಳ ವ್ಯವಸ್ಥೆ ಮತ್ತು ಅದರ ನಾಲ್ಕು ವರ್ಷಗಳು ಕಣ್ಣೀರಿನಿಂದ ತುಂಬಿವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಈ ಸಂದರ್ಭದಲ್ಲಿ ಹೇಳಿದರು.

ಮೋದಿ ಸರಕಾರ ತನ್ನ ನಾಲ್ಕನೇ ವರ್ಷ ಪೂರೈಸಿದನ್ನು ಆಚರಿಸುತ್ತಿರುವಾಗ ಕಾಣುವ ಏಕೈಕ ಸಂಗತಿಯೆಂದರೆ ಅದು 2014ರಲ್ಲಿ ಜನತೆಗೆ ನೀಡಿದ ಎಲ್ಲ ಆಶ್ವಾಸನೆಗಳಿಂದಲೂ ಹಿಂದೆ ಸರಿದಿರುವುದು. ಎಂದು ಯೆಚುರಿಯವರು ಹೇಳಿದರು.

ಯುವಜನರಿಗೆ ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳ, ಅಥವ ರೈತರಿಗೆ ಹೆಚ್ಚಿನ ಬೆಂಬಲ ಬೆಲೆಗಳ ಆಶ್ವಾಸನೆಗಳು ಹುಸಿಯಾಗಿವೆ, ಈ ಸರಕಾರ ಜಿಡಿಪಿ ಮಾಹಿತಿಗಳಲ್ಲಿ ಕೈಯಾಡಿಸಲು ಪ್ರಯತ್ನಿಸಿತು, ಆದರೆ ಆರ್ಥಿಕ ದುರ್ಗತಿಯನ್ನು ಮರೆಮಾಚಲು ಅದಕ್ಕೆ ಸಾಧ್ಯವಾಗಿಲ್ಲ.

ಬಡವರ ಮೇಲೆ ತೆರಿಗೆ, ಶ್ರೀಮಂತರಿಗೆ ಲಾಲನೆ–ಪಾಲನೆ –ಇದು ಮೋದಿ ಮಂತ್ರ.

ಇತ್ತೀಚಿನ ಚುನಾವಣೆಗಳಲ್ಲಿ ಬಿಜೆಪಿಯ ಸೋಲಿನ ಬಗ್ಗೆ ಪತ್ರಕರ್ತರು ಕೇಳಿದಾಗ, ಈ ಕೇಸರಿ ಪಕ್ಷದ ಮತಗಳಿಕೆ ಪ್ರಮಾಣ ಇಳಿದಿದೆ, ಪ್ರತಿಪಕ್ಷಗಳು ಜನತೆ ಬಯಸಿದಂತೆ ಒಟ್ಟುಗೂಡುತ್ತಿವೆ ಎಂದರು.

"ಭಾರತವೇ ಒಂದು ಭವ್ಯ ಕೂಟ . ಮತ್ತು ಇದು ಕೇವಲ ಪ್ರತಿಪಕ್ಷಗಳ ಐಕ್ಯತೆ ಮಾತ್ರವೇ ಅಲ್ಲ, ಜನಗಳ ಐಕ್ಯತೆ ಪಕ್ಷಗಳನ್ನು ಒಟ್ಟುಗೂಡುವಂತೆ ಮಾಡುತ್ತಿದೆ" ಎಂದು ಯೆಚುರಿ ಹೇಳಿದರು.

ಇದಕ್ಕೆ ಮೊದಲು, ಮೇ 31ರಂದು ಉಪಚುನಾವಣೆಗಳ ಫಲಿತಾಂಶಗಳ ಬಗ್ಗೆ ಪ್ರತಿಕ್ರಿಯಿಸುತ್ತ ಬಿಜೆಪಿ ತನ್ನ ಕೋಮುವಾದಿ ಮತ್ತು ದ್ವೇಷ ರಾಜಕಾರಣದ ಪ್ರಯೋಗಾಲಯವಾಗಿದ್ದ ಕೈರಾನವನ್ನು ಕಳಕೊಂಡಿರುವುದು ಜನತೆ ಆಳುವ ಪಕ್ಷದ ಆಳ್ವಿಕೆಯನ್ನು, ಭಾರತದ ಐಕ್ಯತೆ ಮತ್ತು ಸಮಗ್ರತೆಯ ಧ್ವಂಸವನ್ನು ಒಪ್ಪುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತೋರಿದೆ ಎಂದು ಯೆಚುರಿ ಹೇಳಿದ್ದರು.



ಕೋಮುವಾದಿ ಮತ್ತು ದ್ವೇಷ ರಾಜಕಾರಣದ ಪ್ರಯೋಗಾಲಯದಲ್ಲೇ ಬಿಜೆಪಿ ಸೋಲು ಮಹತ್ವಪೂರ್ಣ

ಮೇ 28ರಂದು ನಾಗಾಲ್ಯಾಂಡಿನಿಂದ ಹಿಡಿದು ಕೇರಳದ ವರೆಗೆ 11 ರಾಜ್ಯಗಳಲ್ಲಿ ನಾಲ್ಕು ಲೋಕಸಭಾ ಕ್ಷೇತ್ರಗಳು ಮತ್ತು ಹನ್ನೊಂದು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಗಳಲ್ಲಿ ಬಿಜೆಪಿಗೆ ಮಹಾರಾಷ್ಟ್ರದಲ್ಲಿ ಒಂದು ಲೋಕಸಭಾ ಕ್ಷೇತ್ರ ಮತ್ತು ಒಂದು ಉತ್ತರಾಖಂಡದಲ್ಲಿ ಒಂದು ವಿಧಾನಸಭಾ ಕ್ಷೇತ್ರವನ್ನು ಮಾತ್ರ ಗೆದ್ದುಕೊಳ್ಳುವುದು ಸಾಧ್ಯವಾಗಿದೆ. ಅದರ ಮಿತ್ರಪಕ್ಷವಾದ ಎನ್‌ಡಿಪಿಪಿ ನಾಗಾಲ್ಯಾಂಡಿನಲ್ಲಿ ಒಂದು ಲೋಕಸಭಾ ಕ್ಷೇತ್ರದಲ್ಲಿ ಗೆದ್ದಿದೆ. ಉಳಿದ ಎಲ್ಲೆಡೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಪರಾಭವ ಉಂಡಿವೆ.

ಪ್ರತಿಷ್ಠಿತ ಕ್ಷೇತ್ರಗಳಾದ ಉತ್ತರಪ್ರದೇಶದ ಕೈರಾನ ಲೋಕಸಭಾ ಕ್ಷೇತ್ರವನ್ನು ಆರ್‌ಎಲ್‌ಡಿ , ಮಹಾರಾಷ್ಟ್ರದ ಭಂಡಾರ–ಗೊಂಡಿಯಾ ಲೋಕಸಭಾ ಕ್ಷೇತ್ರವನ್ನು ಎನ್‌ಸಿಪಿ, ಉತ್ತರಪ್ರದೇಶದ ನೂರ್ಪುರ್ ವಿಧಾನಸಭಾ ಕ್ಷೇತ್ರವನ್ನು ಸಮಾಜವಾದಿ ಪಕ್ಷ ಬಿಜೆಪಿಯಿಂದ ಮತ್ತು ಬಿಹಾರದಲ್ಲಿ ಜೋಕಿಹಾಟ್ ವಿಧಾಸಭಾ ಕ್ಷೇತ್ರವನ್ನು ಆರ್‌ಜೆಡಿ ಪಕ್ಷ ಈಗ ಬಿಜೆಪಿಯ ಮಿತ್ರಕ್ಷವಾಗಿರುವ ಜೆಡಿ(ಯು)ನಿಂದ ಕಸಿದುಕೊಂಡಿರುವುದು ಗಮನಾರ್ಹ. ಪಂಜಾಬಿನಲ್ಲಿ ಅದರ ಮಿತ್ರಪಕ್ಷವಾದ ಅಕಾಲಿ ದಳ ಕೂಡ ತನ್ನ ಸ್ಥಾನವನ್ನು ಕಾಂಗ್ರೆಸಿಗೆ ಕಳಕೊಂಡಿದೆ.

ಕೈರಾನದಲ್ಲಿ ಬಿಜೆಪಿಯ ಭಾರೀ ಸೋಲು ಬಹಳ ಮಹತ್ವದ್ದು ಎಂದು ಯೆಚುರಿ ಹೇಳಿದರು.

ಬಿಜೆಪಿ ಸಾಮಾಜಿಕ ನೆಲೆ ಕಳಕೊಳ್ಳುತ್ತಿದೆ

ಉಪಚುನಾವಣೆಗಳ ಈ ಸೋಲಿನಿಂದ ಆರೆಸ್ಸೆಸ್–ಬಿಜೆಪಿ 2019ರ ಸಾರ್ವತ್ರಿಕ ಚುನಾವಣೆಗಳ ಮೊದಲು ಕೋಮು ಉದ್ವಿಗ್ನತೆಗಳನ್ನು ಹರಡಿ ಮತ್ತು ಧಾರ್ಮಿಕ ಸಮುದಾಯಗಳ ನಡುವೆ ವಿಭಜನೆ ಸೃಷ್ಟಿಸಿ 'ಹಿಂದುತ್ವ ವೋಟ್ ಬ್ಯಾಂಕ್'ನ್ನು ಕ್ರೋಡೀಕರಿಸಲು ಮುಂದಾಗುತ್ತದೆ ಎಂದು ಎಚ್ಚರಿಸಿದ ಯೆಚುರಿಯವರು ಕೋಮುವಾದಿ ವಿಭಜನೆ ಅದರ ಬತ್ತಳಿಕೆಯಲ್ಲಿರುವ ಏಕೈಕ ಅಸ್ತ್ರ ತಾನೇ ಎಂದು ಹೇಳಿದರು. ಅವರು ಅದನ್ನು ಪ್ರಯೋಗಿಸುತ್ತಾರೆ, ಆದರೆ ಈಗ ಜನ ಅದಕ್ಕೆ ಬಲಿ ಬೀಳುವುದಿಲ್ಲ ಎಂದರು.

ಬಿಜೆಪಿ ತನ್ನ ಈ ಸೋಲಿಗೆ ಪ್ರತಿಪಕ್ಷಗಳ ಐಕ್ಯತೆ ಬಹುದೊಡ್ಡ ಕಾರಣ ಎಂದು ಬಿಂಬಿಸಲು ಪ್ರಯತ್ನಿಸುತ್ತದಾದರೂ, ಆಳುವ ಪಕ್ಷ ತನ್ನ ಸಾಮಾಜಿಕ ನೆಲೆಯನ್ನು ಕಳಕೊಳ್ಳುತ್ತಿರುವುದೇ ವಾಸ್ತವ ಕಾರಣ ಎಂದು ಯೆಚುರಿ ವಿಶ್ಲೇಷಿಸಿದರು. ಮತಗಳಿಕೆಯ ಪ್ರಮಾಣವನ್ನು ನೋಡಿದರೆ ಬಿಜೆಪಿಯ ಮತಗಳಿಕೆ ಪ್ರಮಾಣದಲ್ಲಿ ಗಮನಾರ್ಹ ಇಳಿಕೆಯಾಗಿರುವುದು ಕಾಣಬರುತ್ತದೆ ಎಂದು ಅವರು ಹೇಳಿದರು.

ತಾಜಾ ಪೋಷಕಾಂಶ ಕಸಿದ ಕೇಂದ್ರ ಸರ್ಕಾರದ ಕ್ರಮ ವಿರೋಧಿಸಿ ಜುಲೈ 10 ರಂದು ಅಂಗನವಾಡಿ ನೌಕರರ ದೇಶವ್ಯಾಪಿ ಮುಷ್ಕರಕ್ಕೆ ಕರೆ

ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) ನಿರ್ದೇಶನಾಲಯವು ಮೇ 23 ರಂದು ಒಂದು ಆದೇಶ ಹೊರಡಿಸಿ ಪೂರಕ ಪೋಷಕಾಂಶ ಪೂರೈಕೆಯಲ್ಲಿ ನೇರ ನಗದು ವರ್ಗಾವಣೆ (ಡಿಬಿಟಿ) ವಿಧಾನವನ್ನು ತರಬೇಕೆಂದು ಆದೇಶ ಹೊರಡಿಸಿದೆ. ಬಿಹಾರ ಸರ್ಕಾರವು ಇದನ್ನು ಆಗಲೇ ಜಾರಿಗೊಳಿಸಲು ಮುಂದಾಗಿ ಒಂದು ವಾರದೊಳಗೆ ಎಕ್ಸಿಸ್ ಬ್ಯಾಂಕಿನಲ್ಲಿ ಮಕ್ಕಳ ಖಾತೆಯನ್ನು ಶೂನ್ಯ ಬ್ಯಾಲೆನ್ಸ್ ನಲ್ಲಿ ತೆರೆಯಬೇಕೆಂದು ಆದೇಶಿಸಿದೆ. ಐಸಿಡಿಎಸ್ ಬಜೆಟ್ಟಿನಲ್ಲಿ ಮೊದಲು ಕೊಡಲಾಗುತ್ತಿದ್ದ 60% ಹಂಚಿಕೆಯನ್ನು ಕಡಿತಗೊಳಿಸಿ 25%ಗೆ ಇಳಿಸಿದ್ದಾರೆ. ಮೋದಿ ಸರ್ಕಾರ ತನ್ನ ಆಡಳಿತದ ನಾಲ್ಕನೇ ವರ್ಷದಲ್ಲಿ ಅಂಗನವಾಡಿ ನೌಕರರನ್ನು ಮತ್ತು ಫಲಾನುಭವಿಗಳನ್ನು ಇನ್ನಷ್ಟು ಸಂಕಷ್ಟಕ್ಕೆ ಗುರಿ ಮಾಡಲು ಆ ಆದೇಶ ನೀಡಿದೆ. ಇದನ್ನು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು ಸಂಯೋಜಿತ) ಬಲವಾಗಿ ವಿರೋಧಿಸಿದೆ. ಈ ಆದೇಶವನ್ನು ಸಂಬಂಧಪಟ್ಟ ಸರ್ಕಾರಗಳು ಕೂಡಲೇ ಹಿಂತೆಗೆಯಬೇಕೆಂದು ಆಗ್ರಹಿಸಿದೆ. ಮಾತ್ರವಲ್ಲ ನೇರ ನಗದು ವರ್ಗಾವಣೆಯು ಸ್ಪಷ್ಟವಾಗಿ ಆಹಾರ ಭದ್ರತಾ ಕಾನೂನಿಗೆ ವಿರುದ್ಧವಾದುದು ಹಾಗೂ ಈ ಆದೇಶಾನುಸಾರ ಬ್ಯಾಂಕ್ ಖಾತೆ ತೆರೆಯುವುದು/ ಈ ಸ್ಕೀಂನೊಂದಿಗೆ ಜೋಡಿಸುವ ಕೆಲಸವನ್ನು ಬಹಿಷ್ಕರಿಸಬೇಕೆಂದು ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಶನ್ (ಐಫಾ) ಕರೆ ನೀಡಿದೆ.

ಸರ್ಕಾರದ ಇತ್ತೀಚಿನ ನಿರ್ಧಾರದಂತೆ, ಮೊದಲನೇದಾಗಿ 0–3 ವರ್ಷದ ಮಕ್ಕಳಿಗೆ ಈಗಾಗಲೇ ಇರುವ ಟೇಕ್ ಹೋಂ ರೇಷನ್ ಬದಲಿಗೆ ಫಲಾನುಭವಿಗಳಿಗೆ ನೇರ ಸೌಲಭ್ಯ ವರ್ಗಾವಣೆ ಮತ್ತು ಷರತ್ತು ಬದ್ಧ ನಗದು ವರ್ಗಾವಣೆ (ಇದು ತಿಂಗಳಿಗೆ ಅತ್ಯಂತ ನಿಕೃಷ್ಟ ಮೊತ್ತ 158 ರೂ. ಗಳಷ್ಟು) ಮಾಡುವುದು, ಎರಡನೇದಾಗಿ 3–6 ವರ್ಷದೊಳಗಿನ ಮಕ್ಕಳಿಗೆ ಬೇಯಿಸಿದ ತಾಜಾ ಆಹಾರದ ಬದಲಿಗೆ ಪೋಷಕಾಂಶಯುಕ್ತ ಪ್ಯಾಕೆಜ್ ಆಹಾರವನ್ನು ಫಲಾನುಭವಿಗಳಿಗೆ ಅಂಚೆ ಮೂಲಕ ಕಳಿಸಿಕೊಡುವಂಥ ಕ್ರಮಗಳೆಲ್ಲವೂ ಐಸಿಡಿಎಸ್ ಯೋಜನೆಯನ್ನು ಸಾವಿನ ದವಡೆಗೆ ನೂಕಿವೆ. ಆಧಾರ ಜೋಡಣೆ ಕಡ್ಡಾಯ ಮಾಡುವ ಮೂಲಕ ಯಾರಿಗೆಲ್ಲ ಆಹಾರದ ಅಗತ್ಯತೆ ಹೆಚ್ಚಿಗೆ ಇತ್ತೋ ಅವರನ್ನೇ ಒಳಗೊಳ್ಳದೇ ವಂಚಿಸುತ್ತಿದೆ ಈ ಕೇಂದ್ರ ಸರ್ಕಾರ. ಪೌಷ್ಟಿಕ ಆಹಾರ ಕುರಿತು ಸರ್ಕಾರದ ಸಮಿತಿಗಳ ಶಿಫಾರಸ್ಸುಗಳಿಗೆ, ಆಹಾರ ಹಕ್ಕು ಕಾಯ್ದೆಗೆ, ಐಸಿಡಿಎಸ್ ಕುರಿತು ಸುಪ್ರಿಂ ಕೋರ್ಟ ನೀಡಿರುವ ನಿರ್ದೇಶನಕ್ಕೆ ಮತ್ತು ರಾಷ್ಟ್ರೀಯ ಪೋಷಕಾಂಶ ಕಾರ್ಯತಂತ್ರಕ್ಕೆ ಈ ಕ್ರಮವು ಸಂಪೂರ್ಣವಾಗಿ ವಿರುದ್ಧವಾಗಿದೆ. ಅಲ್ಲದೇ ಐಸಿಡಿಎಸ್ ಅಡಿಯಲ್ಲಿರುವ ವಿವಿಧ ಘಟಕಗಳಿಗೆ 60% ರಿಂದ 25%ಕ್ಕೆ ಹಣಕಾಸು ಇಳಿಸಿರುವ ಕೇಂದ್ರ ಸರ್ಕಾರದ ನಿರ್ಧಾರ ಆಘಾತವನ್ನುಂಟು ಮಾಡಿದೆ. ಇದು ಈಗಾಗಲೇ ಕೇಂದ್ರ ಸರ್ಕಾರ ಹಣಕಾಸು ಕಡಿತ ಮಾಡಿದುದರ ದುಷ್ಪರಿಣಾಮದಿಂದ ಬಳಲುತ್ತಿರುವ ಐಸಿಡಿಎಸ್‌ನ್ನು ಇನ್ನಷ್ಟು ಹೆಚ್ಚು ನಿಷ್ಕ್ರಿಯಗೊಳಿಸುತ್ತಿದೆ. ದಶಕಗಳ ಕಾಲದ ಸಾಧನೆಯನ್ನು ಸಮಾಧಿ ಮಾಡುತ್ತಿದೆ. ಇದರಲ್ಲಿ ದುಡಿಯುತ್ತಿರುವ 26 ಲಕ್ಷ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಜೀವನಾಧಾರವನ್ನೇ ನಾಶ ಮಾಡುತ್ತಿದೆ.

ಸರ್ಕಾರದ ಈ ತೀರ್ಮಾನ ಮಾನ್ಯ ಸುಪ್ರಿಂ ಕೋರ್ಟಿನ ನಿರ್ದೇಶನಕ್ಕೂ ವಿರುದ್ಧವಾಗಿದೆ. ನೇರ ನಗದು ವರ್ಗಾವಣೆ ಜಾರಿಗೆ ಬಂದಿರುವ ಇತರ ರಂಗಗಳಲ್ಲಿ ಅದು ಫಲಾನುಭವಿಗಳಿಗೆ ಸರಿಯಾಗಿ ಪ್ರಯೋಜನವನ್ನು ತಲುಪಿಸುವಲ್ಲಿ ವಿಫಲವಾಗಿದೆ ಎಂಬುದನ್ನು ಈಗಾಗಲೇ ಹಲವರು ಗಮನಿಸಿದ್ದಾರೆ. ನಮ್ಮ ದೇಶದಲ್ಲಿ ಆತಂಕಕಾರಿ ಆಯಾಮ ಪಡೆದಿರುವ ಪೌಷ್ಟಿಕಾಂಶ ಕೊರತೆಯನ್ನು ನೀಗಿಸುವ ಪ್ರಯತ್ನವನ್ನು ಮತ್ತು ಮಕ್ಕಳ ಅಭಿವೃದ್ಧಿ ಕುರಿತಂತೆ ಒಂದು ಸಮಗ್ರ ನಿಲುವನ್ನು ಕೂಡ ಈ ಆದೇಶಗಳು ಬುಡಮೇಲು ಮಾಡುತ್ತವೆ. ಇದು 8 ಕೋಟಿಗೂ ಹೆಚ್ಚು ಮಕ್ಕಳನ್ನು 2 ಕೋಟಿಯಷ್ಟು ಗರ್ಭಿಣಿ ಸ್ತ್ರೀಯರನ್ನು ಬಾಧಿಸುವ ಈ ಕ್ರಮಕ್ಕೆ ಪರಿಣಿತರು ಮತ್ತು ಹಲವು ಆರ್ಥಿಕ ತಜ್ಞರೂ ಸೇರಿದಂತೆ ಎಲ್ಲೆಡೆಯಿಂದ ವಿರೋಧ ಬಂದಿದೆ. ಐಸಿಡಿಎಸ್ ನ್ನು ನಿರ್ಮೂಲನೆ ಮಾಡುವ ಇಂಥ ಪ್ರಯತ್ನಗಳಿಂದ ಅದನ್ನು ರಕ್ಷಿಸಲು ಐಫಾ ಸಂಘಟನೆಯು ನಿರಂತರ ಹೋರಾಟಕ್ಕೆ ಕರೆಕೊಡುತ್ತದೆ. ಮೊದಲ ಹಂತದಲ್ಲಿ ಪ್ರಧಾನ ಮಂತ್ರಿಗಳಿಗೆ ಸಾರ್ವಜನಿಕರು ಹಾಗೂ ಫಲಾನುಭವಿಗಳಿಂದ ಸಹಿಸಂಗ್ರಹಿಸಿ ಕಳಿಸುವುದು ಹಾಗೂ ಎರಡನೇ ಹಂತದಲ್ಲಿ ಜುಲೈ 10 ರಂದು ದೇಶವ್ಯಾಪಿ ಅಂಗನವಾಡಿ ನೌಕರರ ಬೃಹತ್ ಮುಷ್ಕರಕ್ಕೆ ಮತ್ತು ಮೂರನೇ ಹಂತದಲ್ಲಿ ಜನ್ ಏಕತಾ ಜನಾಧಿಕಾರ್ ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ಸಾರ್ವತ್ರಿಕ ಮುಷ್ಕರದಲ್ಲೂ ಪಾಲ್ಗೊಳ್ಳಬೇಕೆಂದು ಸಿಐಟಿಯು ಸಂಯೋಜಿತ ಅಂಗನವಾಡಿ ನೌಕರರ ಸಂಘ ಕಾರ್ಮಿಕ ಸಮುದಾಯಕ್ಕೆ ಕರೆನೀಡಿದೆ.

'ರೆಡ್ ಸ್ಟಾರ್' ಮಾದಾಲ ರಂಗಾರಾವ್ ಇನ್ನಿಲ್ಲ..!



ಶೋಷಣೆಯ, ದಬ್ಬಾಳಿಕೆಗಳ ವಿರುದ್ಧ ಪೀಡಿತ ಜನರು ಐಕ್ಯವಾಗಿ ನಡೆಸಿದ ಕಮ್ಯೂನಿಸ್ಟ್ ಹೋರಾಟಗಳಾಧಾರಿತ ಕಥೆಗಳನ್ನು ಮಾದಾಲ ರಂಗಾರಾವ್ ರವರೇ ಸ್ವತಃ ನಾಯಕ ನಟನ ಪಾತ್ರವಹಿಸುತ್ತಿದ್ದರು. ಕಮ್ಯೂನಿಸ್ಟ್ ಹೋರಾಟದ ಚರಿತ್ರೆಯನ್ನು ಸಿನಿಮಾ ಪರದೆಗೆ ತಂದು, ಬೆಳ್ಳಿ ತೆರೆಯ ಮೂಲಕ ಕಮ್ಯೂನಿಸ್ಟ್ ಬಾಲಜಾಲವನ್ನು ತೆಲುಗು ಪ್ರಜೆಗಳ ಮನೆಮನಗಳನ್ನು ಮುಟ್ಟಿಸಿದವರು. ಈ ಮೂಲಕ ತೆಲುಗು ಸಿನಿ ರಂಗದಲ್ಲಿ ರೆಡ್ ಸ್ಟಾರ್ ಬಿರುದು ಪಡೆದು ತನ್ನದೇ ಆದ ಛಾಪು ಮೂಡಿಸಿದ್ದಾರೆ. ಇವರು ಸಿನಿರಂಗದ ಪ್ರತಿಷ್ಠಿತ ನಂದಿ ಅವಾರ್ಡ್ ಸಹ ಗಳಿಸಿದ್ದರು.

ವಿದ್ಯಾರ್ಥಿ ದೆಸೆಯಿಂದಲೇ ಎಡಪಂಥಿಯ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದ ಮಾದಾಲ ರಂಗಾರಾವ್ ರವರು ಐಕ್ಯ ಆಂಧ್ರ ಪ್ರದೇಶದ ಸಾಂಸ್ಕೃತಿಕ ಸಂಘಟನೆಯಾದ ಪ್ರಜಾನಾಟ್ಯ ಮಂಡಳಿಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು, ತನ್ನ ಕ್ರಾಂತಿಕಾರಿ ಹಾಡು, ರಚನೆ, ನಟನೆ ಜನಾಕರ್ಷಣೆಯನ್ನು ಗಳಿಸಿದ್ದರು.

ಇದರಿಂದ 1980 ರಲ್ಲಿ ಮಾದಾಲ ರಂಗಾರಾವ್ ಮೊದಲಿಗೆ "ಯುವತರಂ ಕದಿಲಿಂದಿ" ಎನ್ನುವ ಸಿನಿಮಾದಲ್ಲಿ ನಟಿಸಿದರು. ಆ ನಂತರ ಬೆಳ್ಳಿ ತೆರೆಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಪ್ರತಿಬಿಂಬಿಸುವ, ಕಮ್ಯೂನಿಸ್ಟ್ ಭಾವಜಾಲದ ಸಿನಿಮಾಗಳಲ್ಲಿ ಸ್ವತಃ ನಟಿಸಿ, ನಿರ್ಮಾಣದಲ್ಲಿ ತೊಡಗಿದರು. ಇವರ ಇಂತಹ ಪ್ರಮುಖ ಸಿನಿಮಾಗಳು – ಚೇರ್ ಮೇನ್ ಚಲ್ಲಮಯ್ಯ, ಎರ್ರ ಮಲ್ಲೇಲ್ಲು(ಕೆಂಪು ಮಲ್ಲಿಗೆ), ಮರೋ ಕುರುಕ್ಷೇತ್ರಂ, ನವೋದಯಂ, ಎರ್ರ ಸೂರ್ಯಡು, ತೊಲಿಪದ್ದು, ಜನ ಮನಂ, ಎರ್ರ ಪಾವುರಾಲು(ಕೆಂಪು ಪಾರಿವಾಳಗಳು) ಭಾರತನಾರಿ, ಪ್ರಜಾಶಕ್ತಿ, ಸ್ವರಾಜ್ಯಂ, ಎರ್ರ ಮಟ್ಟಿ(ಕೆಂಪು ಮಣ್ಣು) ಮಹಾ ಪ್ರಸ್ತಾನಂ, ಮುಂತಾದ ನೂರಾರು ಚಿತ್ರಗಳಲ್ಲಿ ನಟಿಸಿದರು ಮತ್ತು ನಿರ್ಮಿಸಿದ್ದಾರೆ. ಜೊತೆಗೆ ನವತರಂ ಎನ್ನುವ ಸಿನಿಮಾ ಪ್ರೋಡಕ್ಷನ್ ತೆರೆದು ಸಿನಿರಂಗದ ಜನಪರಗೊಳಿಸಲು ಶ್ರಮಿಸಿದರು.

ಇವರ ಸಿನಿಮಾ ಕೃಷಿ ಆಂಧ್ರ, ತೆಲಂಗಾಣ ಭಾಗದಲ್ಲಿ ಕಮ್ಯೂನಿಸ್ಟ್ ಜನಾಂದೋಲನಗಳಿಗೆ ನವ ಇಂಧನದ ಶಕ್ತಿಯಾಗಿತ್ತು. ಸಿನಿ ರಂಗದಲ್ಲಿ ಪ್ರಸಿದ್ಧರಾದ ತಕ್ಷಣ ಹಣ ಗಳಿಕೆಯ ಗೀಳಿಗಿಳಿಯುವ ಈ ವಿಷಮ ಸಂದರ್ಭದಲ್ಲಿಯೂ ಕಾಮ್ರೇಡ್ ಮಾದಾಲ ರಂಗಾರಾವ್ ತಾನು ನಂಬಿದ ಕಮ್ಯೂನಿಸ್ಟ್ ಸಿದ್ಧಾಂತವನ್ನು ಸಿನಿ ಸಾಂಸ್ಕೃತಿಕ ರಂಗದ ಮೂಲಕ ಜನತೆಗೆ ತಲುಪಿಸುಲು ಬದ್ಧತೆಯಿಂದ ದುಡಿದಿದ್ದು ಸ್ಪೂರ್ತಿಯುತವಾದದ್ದು.

ಕಮ್ಯೂನಿಸ್ಟ್ ಪೂರ್ಣಾವಾವಧಿ ಕಾರ್ಯಕರ್ತರು ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾಗ ಕಾಂ. ಮಾದಾಲ ರವರು ಸಿನಿಮಾ ನಟನೆಯಿಂದ ಗಳಿಸಿದ ಹಣವನ್ನು ಚಳುವಳಿಗಳ ಬೆಳವಣಿಗೆಗೆ ಸಮರ್ಪಿಸಿದವರು.

ಇಂತಹ ಮಹಾನ್ ಚೇತನ ಕಾಮ್ರೇಡ್ ಮಾದಾಲ ರಂಗಾರಾವ್ ರವರ ಅಗಲಿಕೆ ಜನಪರ ಸಾಂಸ್ಕೃತಿಕ ಲೋಕಕ್ಕೆ, ಚಳುವಳಿಗಳಿಗೆ ತುಂಬಲಾರದ ನಷ್ಟವಾಗಿದೆ.

ಮೋದಿ ಭಕ್ತನ ಕೋಮಾ

(ವ್ಯಾಟ್ಸಪ್ ಗ್ರೂಪ್ ನಲ್ಲಿ ಹರಿದಾಡುತ್ತಿರುವ ಒಂದು ಕತೆ)

2014 ರ ಮಾರ್ಚ್ 16 ರಂದು ಬಿಜೆಪಿ ಚುನಾವಣೆಯಲ್ಲಿ ಬಹುಮತ ಪಡೆದಾಗ ಮೋದಿ ಅಭಿಮಾನಿಯೊಬ್ಬನಿಗೆ ಅದೆಷ್ಟು ಸಂತೋಷವಾಯಿತೆಂದರೆ ಆತ ಕೋಮಾ ಸ್ಥಿತಿಗೆ ಜಾರಿದ.

ನಾಲ್ಕು ವರ್ಷದ ನಂತರ ಆತನಿಗೆ ಕೋಮಾ ಸ್ಥಿತಿಯಿಂದ ಎಚ್ಚರವಾಯಿತು. ಮೋದಿ ಪ್ರಧಾನ ಮಂತ್ರಿ ಆಗಿರುವುದರಿಂದ ದೇಶದಲ್ಲಿ ದೊಡ್ಡ ಬದಲಾವಣೆಗಳಾಗಿವೆ ಎಂದು ನಂಬಿದ ಆತ ವೈದ್ಯರನ್ನು ಹಲವು ಪ್ರಶ್ನೆಗಳನ್ನು ಕೇಳಿದ.

ಭ್ರಷ್ಟಾಚಾರ ಮುಕ್ತ ಭಾರತದಲ್ಲಿ ಈಗ ವಾಸಿಸುತ್ತಿರುವುದರ ಬಗ್ಗೆ ನಿಮಗೆ ಹೇಗನಿಸುತ್ತದೆ?

ರಾಬರ್ಟ್ ವದ್ರಾ ಯಾವ ಜೈಲಿಯಲ್ಲಿದ್ದಾನೆ?

ರಾಹುಲ್ ಗಾಂಧಿ ಮತ್ತು ಸೋನಿಯಾ ಈಗ ಜೈಲಿನಲ್ಲಿದ್ದಾರೋ ಅಥವಾ ಇಟಲಿಗೆ ಓಡಿಹೋಗಿದ್ದಾರಾ?

ಈಗ ಲಕ್ನೋಗೆ ವಿಮಾನದಲ್ಲಿ ಹೋದರೆ ವಾಸಿಯೋ ಅಥವಾ ಬುಲ್ಲೆಟ್ ಟ್ರೈನ್ ನಲ್ಲಿ ಹೋದರೆ ಸರಿಯೋ?

ಸ್ವಿಸ್ ಬ್ಯಾಂಕುಗಳಿಂದ ಎಷ್ಟು ಕಪ್ಪು ಹಣವನ್ನು ವಾಪಸ್ ತರಲಾಗಿದೆ?

ಈಗ 35 ರೂಪಾಯಿಗಳಿಗೆ ಒಂದು ಡಾಲರ್ ಸಿಗುತ್ತಿದೆಯಾ?

ಮೋದಿಜಿ ಅವರು ಅಡಿಗೆ ಅನಿಲ, ತರಕಾರಿ, ಟೊಮಾಟೋ, ಈರುಳ್ಳಿ ಮತ್ತು ಆಲೂಗಡ್ಡೆಗಳ ಬೆಲೆ ಕಡಿಮೆ ಮಾಡಿರುವುದರಿಂದ ಭಾರತೀಯರು ಸಂತೋಷವಾಗಿರಬೇಕಲ್ಲವೆ?

ಆರ್ಟಿಕಲ್ 370 ಅನ್ನು ರದ್ದು ಮಾಡಿದ ನಂತರ ಏನಾಯಿತು?

ಮೋದಿಗೆ ಹೆದರಿದ ಪಾಕಿಸ್ತಾನ ಭಾರತಕ್ಕೆ ದಾವೂದನನ್ನು ಹಿಂದಿರುಗಿಸಿದ ನಂತರ ಆತನ ಪಾಡೇನಾಯಿತು?

ಕಾಂಗ್ರೆಸ್ ಸರ್ಕಾರ ರೈತರಿಂದ ಕಿತ್ತುಕೊಂಡಿದ್ದ ಭೂಮಿಯನ್ನು ವಾಪಸ್ ಪಡೆದಿದ್ದಕ್ಕಾಗಿ ಅವರೂ ಸಂತೋಷವಾಗಿರಬೇಕಲ್ಲವೇ?

ಈ ಎಲ್ಲ ಪ್ರಶ್ನೆಗಳನ್ನು ಕೇಳಿದ ವೈದ್ಯ ಈಗ ಕೋಮಾ ಸ್ಥಿತಿಗೆ ಜಾರಿದ್ದಾರೆ. ಮತ್ತು ಮೋದಿ ಅಭಿಮಾನಿಯನ್ನು ಹುಚ್ಚಾಸ್ಪತ್ರೆಗೆ ಸೇರಿಸಲಾಗಿದೆ!

ನಮ್ಮ ಚುರು-ಟ್ವೀಟ್

"ಕೈರಾನಾ ಬಿಜೆಪಿಯನ್ನು ಹುಗಿದು ಹಾಕಿ ಬಿಡುತ್ತದೆ"

– ತಬಸ್ಸುಂ ಹಸನ್ (ಕೈರಾನಾ ಗೆದ್ದ ಅಭ್ಯರ್ಥಿ)

ಇದು ಮುಸ್ಲಿಂ, ಮಹಿಳೆ, ಉತ್ತರ ಪ್ರದೇಶದಲ್ಲಿ,
ಕೈರಾನಾದಲ್ಲೇ ಆಯಿತಲ್ಲ.
ನಾನು ಭಾರತದ ಅಭಿಮಾನಿ

– ಸಸಿಧರನ್ ಪಳೂರ್


Sasidharan Pazhoor
@inquestioner

"Kairana will bury BJP" -- Tabassum Hasan (Winner of Kairana)

It had to be a Muslim. It had to be a woman. It had to be in UP. It had to be in Kairana.

I love India.

31/05/18, 11:11 AM

“ಸೂರ್ಯನಂತೆ ಪ್ರಕಾಶಿಸಲು ಸಾಧ್ಯವಿಲ್ಲದಿದ್ದರೂ, ಮಿಣುಕು ಹುಳುವಾಗಿ ಕೆಲಸ ಮಾಡೋಣ”: ನ್ಯಾ. ದಾಸ್

(ಧಾರವಾಡದಲ್ಲಿ ಮೇ ಸಾಹಿತ್ಯಮೇಳ-2018ರ “ಬಹುತ್ವ ಭಾರತ” ಸಮಾವೇಶದಲ್ಲಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಮಾತುಗಳು)

ನಮ್ಮದು ಬಹಳ ದೊಡ್ಡ ದೇಶ ಇದಕ್ಕೆ ಬಹಳ ದೊಡ್ಡ ಇತಿಹಾಸವೂ ಇದೆ. ಈ ದೇಶಕ್ಕೆ ಆಹಾರ, ವ್ಯಾಪಾರ ಮತ್ತು ಫಲವತ್ತಾದ ಭೂಮಿ ಇದೆ, ಕಲೆ ಸಂಸ್ಕೃತಿಯಿದೆ ಎಂದು ವಿದೇಶಿಗರು ಬಂದರು, ವಿಶ್ವವಿದ್ಯಾಲಗಳಿವೆ. ಜ್ಞಾನಾರ್ಜನೆಗಾಗಿ ಬಂದರು. ಲೂಟಿ ಮಾಡಲೂ ಸಹ ಬಹಳಷ್ಟು ವಿದೇಶಿಗರು ಬೇರೆ ಬೇರೆ ಸಂಸ್ಕೃತಿಯ ಬೇರೆ ಭಾಷಾ ಕುಟುಂಬಗಳಿಂದ ಜನ ನಮ್ಮ ದೇಶಕ್ಕೆ ಬಂದರು. ಅದರಲ್ಲಿ ಬಹುಪಾಲು ಜನ ಇಲ್ಲೆಯೇ ಉಳಿದರು. ಅವರು ಬೇರೆ ಬೇರೆ ಆಗಿ ಬದುಕಲಿಲ್ಲ. ಒಂದೇ ಕಡೆ ಬದುಕಿದರು ಮತ್ತು ಪ್ರತ್ಯೇಕವಾಗಿ ಉಳಿದಿಲ್ಲ, ಹಲವಾರು ಸಂಕರಗಳು ಆಗಿವೆ. ಎಷ್ಟಾಗಿದೆ ಎಂದರೆ ನಮ್ಮ ದೇಶದಲ್ಲಿ ಪ್ಯೂರ್ ರೇಸ್ ಅನ್ನುವುದೇ ಇಲ್ಲ. ಇದು ಈ ದೇಶದ ಗುಣ.

ಈ ದೇಶದಲ್ಲಿ 4,600 ಜಾತಿಗಳಿವೆ. ಇಸ್ಲಾಂನಲ್ಲಿ ಭಾರತವನ್ನು ಬಿಟ್ಟು ಬೇರೆ ಕಡೆ ಎರಡೇ ಜಾತಿಗಳಿದ್ದರೆ ಇಲ್ಲಿ 200 ಇವೆ. ಮತ್ತು ಕ್ರೈಸ್ತರಲ್ಲಿ ಹೊರಗಡೆ 2 ಇದ್ದರೆ ನಮ್ಮ ದೇಶದಲ್ಲಿ 400 ಜಾತಿ“ ಇವೆ. ನೂರಾರು ಭಾಷೆಗಳು ಅನೇಕ ಧರ್ಮ, ಸಂಸ್ಕೃತಿಗಳಿವೆ. ಇವರೆಲ್ಲ ಶಾಂತಿಯಿಂದ ಸೌಹಾರ್ದದಿಂದ ಬದುಕುತ್ತಿದ್ದರು. ಇದೇ ಬಹುತ್ವದ ಸಂಕೇತ.



ನಮ್ಮ ಸಂಸ್ಕೃತಿ, ಆಹಾರ, ಉಡುಪು, ಸಂಪ್ರದಾಯ, ಭಾಷೆ ಎಲ್ಲವೂ ಬದಲಾಗುತ್ತಲೇ ಇರುತ್ತದೆ. ಇದು ಪ್ರಜಾಪ್ರಭುತ್ವದ ದೇಶ ಕಲಿಸುತ್ತದೆ. ಇದರಿಂದಲೇ ಬಹುತ್ವದ ದೇಶದಲ್ಲಿ ಕಷ್ಟ ಸುಖ, ಹೋರಾಟಗಳಲ್ಲಿ ಒಬ್ಬರಿಗೊಬ್ಬರು ಹೆಗಲಿಗೆ ಹೆಗಲಾಗಿ ಸಹಾಯ ಮಾಡಿದ್ದಾರೆ. ನಮ್ಮ ದೇಶದ ಸ್ವಾತಂತ್ರ್ಯ ಹೋರಾಟ ಬೇರೆ ದೇಶದ ರೀತಿ ಕೇವಲ ರಾಜಕೀಯ ಹೋರಾಟವಾಗಿರಲಿಲ್ಲ. ರಾಜಕೀಯ ಹೋರಾಟದ ಜೊತೆಜೊತೆಗೆ ಆರ್ಥಿಕ, ಸಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟವಾಗಿರುವುದು ಒಂದು ವಿಶೇಷವಾಗಿದೆ. ಸ್ವಾತಂತ್ರ್ಯ ಬಂದಾಗ ಹಲವಾರು ಪ್ರಶ್ನೆಗಳು ಬಂದವು ಇದು ಹಿಂದೂ ರಾಷ್ಟ್ರವಾಗಬೇಕೆ ಅನ್ನುವುದು ಒಂದು. ಆದರೆ ಇದನ್ನು ಹಾಗೆ ಮಾಡಲು ಬಿಡದೆ, ಇದು ಒಂದು ಧರ್ಮದ ಹೋರಾಟವಲ್ಲ, ಹಾಗಾಗಿ ಇದು ಜಾತ್ಯಾತೀತ ರಾಷ್ಟ್ರವಾಗಬೇಕು ಎಂದು ಈ ದೇಶ ಕಟ್ಟಲಾಗಿದೆ.

ಕೇವಲ ಮೆರಿಟ್ ಮೇಲೆ ಈ ದೇಶ ನಿರ್ಮಿಸಲು ಸಾಧ್ಯವಿಲ್ಲ ಎಂದು ಸಾಮಾಜಿಕ ನ್ಯಾಯದ ರಾಷ್ಟ್ರವನ್ನಾಗಿ ನಿರ್ಮಿಸಲಾಯಿತು. ಮತ್ತು ಈ ದೇಶವನ್ನು ಗಣರಾಜ್ಯವನ್ನಾಗಿ ಮಾಡಲಾಯಿತು. ಎಲ್ಲಾ ಸ್ವತಂತ್ರ ದೇಶವು ಗಣರಾಜ್ಯವಲ್ಲ. ಆದರೆ ಎಲ್ಲಾ ಗಣರಾಜ್ಯ ದೇಶವು ಸ್ವತಂತ್ರ ದೇಶ. ಸಂವಿಧಾನದಲ್ಲಿ 51 (ಎ) ಅನುಚ್ಛೇದದಲ್ಲಿ ಬಹುತ್ವವನ್ನು ಕಾಪಾಡುವುದು ಮೂಲಭೂತ ಕರ್ತವ್ಯ ಎಂದು ಹೇಳುತ್ತದೆ. ಮತ್ತು ಸರ್ಕಾರಕ್ಕೆ ಒಂದು ಧರ್ಮ ಇರಬಾರದು ಮತ್ತು ಧರ್ಮ ಜಾತಿಯ ಹೆಸರಿನಲ್ಲಿ ತಾರತಮ್ಯ ಮಾಡಬಾರದು ಎಂದೂ ಹೇಳುತ್ತದೆ.

ಈ ದೇಶವು ಎಂದೂ ಒಂದು ರಾಜಕೀಯ ಆಡಳಿತಕ್ಕೆ ಒಳಪಟ್ಟಿರಲಿಲ್ಲ. ಆದರೆ ಈಗ ಒಂದು ದೇಶ, ಬಾವುಟ, ಒಂದು ರಾಷ್ಟ್ರಗೀತೆಯನ್ನು ಹೊಂದಿ, ಬಹುತ್ವವನ್ನು ಉಳಿಸಿಕೊಂಡೇ ಒಂದಾಗಿದೆ. ಇದು ಸ್ವಾತಂತ್ರ್ಯ ನಂತರದಲ್ಲಿ ಈ ದೇಶದ ಒಂದು ಸಾಧನೆ.

ಇದೆಲ್ಲವೂ ಸಂವಿಧಾನದಿಂದ ಸಾಧ್ಯವಾಗಿದೆ. ಹಾಗಾಗಿ ನಾವು ಈ ಸಂವಿಧಾನವನ್ನು ಉಳಿಸಿಕೊಳ್ಳಬೇಕು. ಉಳಿಸಿಕೊಳ್ಳಬೇಕು ಎಂದರೆ ಹೇಗೆ? ಇದಕ್ಕೆ ಹಲವಾರು ಸವಾಲುಗಳಿವೆ. ನಾವು ಮುಕ್ತ ಮನಸ್ಸಿನಿಂದ, ಧೈರ್ಯವಾಗಿ ಮಾತನಾಡಬೇಕು.

ಪಾರ್ಲಿಮೆಂಟರಿ ರಾಜಕೀಯಕ್ಕೆ ಹೊರತಾಗಿ ಪರ್ಯಾಯ ರಾಜಕೀಯದ ಬಗ್ಗೆ ಚರ್ಚೆ ಶುರುವಾಗಬೇಕು. ಈಗಿರುವ ಪಾರ್ಲಿಮೆಂಟ್ ನಲ್ಲಿ ಅತ್ಯಾಚಾರಕ್ಕೆ ಒಳಗಾದ ಮಹಿಳೆ ಪರ, ಆತ್ಮಹತ್ಯೆ ಮಾಡಿಕೊಂಡ ರೈತರ ಪರ, ಶೋಷಿತರ ಪರ ಮಾತನಾಡುವವರು ಪಾರ್ಲಿಮೆಂಟ್ ನಲ್ಲಿ ಯಾರು ಇಲ್ಲ. ಅಂಬೇಡ್ಕರ್ ಅಂದೇ ಹೇಳಿದ್ದರು, ಸಂವಿಧಾನ ಎಷ್ಟೇ ಅದ್ಭುತವಾಗಿದ್ದರೂ ಅದನ್ನು ಜಾರಿ ಮಾಡುವವರು ಒಳ್ಳೆಯವರು ಇಲ್ಲದಿದ್ದರೆ ಸಂವಿಧಾನವೂ ಕೂಡ ಕೆಟ್ಟ ಸಂವಿಧಾನ ಆಗಬಹುದು.

ಸಂವಿಧಾನ ಬದಲು ಮಾಡ್ತೀವಿ, ವಿಮರ್ಶೆ ಮಾಡ್ತೀವಿ, ಮೀಸಲಾತಿ ಬೇಡ, ಸಂವಿಧಾನ ತಿದ್ದುಪಡಿ ಮಾಡಿ ಜಿ.ಎಸ್.ಟಿ ತರುತ್ತಾರೆ, ನೋಟ್ ಬ್ಯಾನ್ ಮಾಡಿ ರಿಸರ್ವ್ ಬ್ಯಾಂಕ್ ನ ಸ್ಥಾನವನ್ನು ಕೆಳಗೆ ಇಳಿಸಿದ್ದಾರೆ. ಇದೆಲ್ಲವನ್ನು ನೋಡುತ್ತಿದ್ದರೆ ನಿಮಗೆ ಗೊತ್ತಾಗಬೇಕು ಅಪಾಯ ಎಲ್ಲಿದೆ ಎಂದು.

ಅದಕ್ಕಾಗಿ ನಮಗೆಲ್ಲ ಒಂದು ಜವಾಬ್ದಾರಿಯಿದೆ. ನನಗೂ ಇದೆ. ಆದ್ದರಿಂದ ಇಲ್ಲಿಗೆ ಬಂದಿದ್ದೇನೆ. ನಾವು ಸೂರ್ಯನಂತೆ ಪ್ರಕಾಶಿಸಲು ಸಾಧ್ಯವಿಲ್ಲದೆ ಇದ್ದರೂ, ಮಿಣುಕು ಹುಳುವಾಗಿ ಕೆಲಸ ಮಾಡಲು ಸಾಧ್ಯವಿದೆ ಮತ್ತು ಅಂತಹ ಕೆಲಸವಾದರೂ ಮಾಡೋಣ.



ಸರಕಾರದ ಹೊಣೆ ರೈತ, ಕಾರ್ಮಿಕ, ನೌಕರರ ಬಗ್ಗೆ ಇರಬೇಕು: ವರಲಕ್ಷ್ಮಿ

ಸರಕಾರದ ಹೊಣೆ ರೈತರ ಬಗ್ಗೆ ಮಾತ್ರವಲ್ಲ, ಈ ರಾಜ್ಯದ, ದೇಶದ ಸಂಪತ್ತನ್ನು ಉತ್ಪಾದಿಸುವವನು ಕಾರ್ಮಿಕ, ಅನ್ನವನ್ನು ನೀಡುವವನು ರೈತ, ಸೇವೆಯನ್ನು ನೀಡುವವನು ನೌಕರ. ಈ ಮೂರು ವಿಭಾಗಗಳು ಇವತ್ತು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರೆಲ್ಲರ ಸಮಸ್ಯೆ ಬಗೆಹರಿಸುವ ಹೊಣೆ ಹೊಸ ಸರಕಾರದ ಮೇಲಿದೆ ಎಂದು ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿ ಅವರು ಹೇಳಿದರು.

ಕರ್ನಾಟಕ ಬಂಡಾಯ ಸಾಹಿತ್ಯ ಸಂಘಟನೆಯು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ‘ಹೊಸ ಸರ್ಕಾರದ ಹೊಣೆ’ ಚಿಂತನಗೋಷ್ಠಿಯಲ್ಲಿ ಅವರು ಮಾತನಾಡುತ್ತಿದ್ದರು. ರಾಜ್ಯಸಭಾ ಸದಸ್ಯ ಡಾ. ಎಲ್.ಹನುಮಂತಯ್ಯ, ಚಿಂತಕ ಡಾ. ಜಿ.ರಾಮಕೃಷ್ಣ, ಸಾಹಿತಿ ಚಂದ್ರಶೇಖರ ಪಾಟೀಲ, ಪ್ರಜಾವಾಣಿ ವರದಿಗಾರರಾದ ಎನ್ ಎ ಎಂ ಇಸ್ಮಾಯಿಲ್ ಸಹ ಭಾಗಿಯಾಗಿದ್ದರು.

ಬೆಲೆ ಏರಿಕೆ, ಅಗತ್ಯವಸ್ತುಗಳ ಹತ್ತೋಟಿ, ಮುಂಗಡನೀತಿ, ಉದಾರೀಕರಣ ನೀತಿಯ ಭಾಗವಾಗಿ ಲಾಬಿಗಳಿಗೆ ಮತ್ತಷ್ಟು ಲಾಭವಾಗುವಂತೆ, ಸರಕಾರದ ಅನುದಾನ ಉಳಿಸಲು ಅತಿಥಿ, ಆದರ್ಶ, ಅರೆಗುತ್ತಿಗೆ, ಹೊರಗುತ್ತಿಗೆ ಹೀಗೆ ಇನ್ನು ಮುಂತಾದ ಹೆಸರುಗಳಲ್ಲಿ ಲಕ್ಷಾಂತರ ವಿದ್ಯಾವಂತ ಯುವಕ ಯುವತಿಯರನ್ನು ದುಡಿಸಿಕೊಳ್ಳಲಾಗುತ್ತಿದೆ. ಇವುಗಳನ್ನು ನಿಯಂತ್ರಿಸಬೇಕು. ರೈತರ ಸಾಲ ಮನ್ನಾಕ್ಕಿಂತ ನಿಜವಾದ ರೈತನಿಗೆ ಸುಲಭ ದರದಲ್ಲಿ ಸಾಲ ನೀಡಬೇಕು ಎಂದರು.

ಜನಪರ ದೃಷ್ಟಿಯಿಂದ ಈ ರಾಜ್ಯ ಸರಕಾರ ಮುಖ್ಯವಾಗಿ ಮಹದಾಯಿ, ನೇತ್ರಾವತಿ ಮುಂತಾದ ಸಮಸ್ಯೆಗಳನ್ನು ಪರಿಹರಿಸಲು ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಬರಗಾಲ, ವಲಸೆ ಹೋಗುವುದನ್ನು ತಡೆಗಟ್ಟಲು ನರೇಗಾ ಯೋಜನೆ ಕಾರ್ಯಕ್ರಮಗಳ ಜಾರಿ ಅಗತ್ಯವಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಣ ತಿರ್ಮಾನಗಳನ್ನು ತೆಗೆದುಕೊಳ್ಳಬೇಕು. ವೇತನ ಹೆಚ್ಚಳ ಆಗಬೇಕು

ಅಹಂ, ಮುಜುಗರ, ಪ್ರತಿಷ್ಠೆ ಎಲ್ಲರೂ ಬದಿಗಿಟ್ಟರೆ, ಸರ್ಕಾರ ಸುಭದ್ರವಾಗಿರುತ್ತದೆ ಎಂದು ಅವರು ಹೇಳಿದರು.

ಚಿಂತಕ ಡಾ. ಜಿ.ರಾಮಕೃಷ್ಣ, ‘ಚುನಾವಣೆ ವೇಳೆ ಪ್ರಧಾನಿ ರಾಜ್ಯದ ಮುಖ್ಯಮಂತ್ರಿಯ ನಿಯತ್ತನ್ನು ಮುಧೋಳ ನಾಯಿಗೆ ಹೋಲಿಸಿದರು. ಆ ಮೂಲಕ ಇಡೀ ರಾಜ್ಯಕ್ಕೇ ಅಪಮಾನ ಮಾಡಿದರು. ಆದರೂ, ಯಾರೂ ಅದನ್ನು ಪ್ರಶ್ನಿಸಲಿಲ್ಲ. ಇದು ರಾಜಕಾರಣಿಗಳ ಬೌದ್ಧಿಕ ಅಧೋಗತಿಯನ್ನು ಸೂಚಿಸುತ್ತದೆ’ ಎಂದರು. ಮೊದಲು ರಾಜ್ಯಪಾಲರನ್ನು ರಾಜ್ಯದಿಂದ ಹೊರದಬ್ಬಬೇಕು. ‘ನೀಟ್’ ಮೂಲಕ ರಾಜ್ಯದ ಪಾಲಿನ ವೈದ್ಯಕೀಯ ಸೀಟುಗಳನ್ನು ಕಿತ್ತುಕೊಳ್ಳುವುದಕ್ಕೆ ಮತ್ತು ಹಿಂದಿ ಹೇರಿಕೆಗೆ ಕಡಿವಾಣ ಹಾಕಬೇಕು’ ಎಂದು ಅವರು ಆಗ್ರಹಿಸಿದರು.

ಡಾ.ಎಲ್. ಹನುಮಂತಯ್ಯ ಅವರು ಮಾತನಾಡುತ್ತಾ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಪರಸ್ಪರ ಚರ್ಚೆ ನಡೆಸಿ, ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತಂದಾಗ ಮಾತ್ರ ಸಮ್ಮಿಶ್ರ ಸರ್ಕಾರ ಅರ್ಥಪೂರ್ಣವಾಗುತ್ತದೆ’ ಎಂದು ಅಭಿಪ್ರಾಯಪಟ್ಟರು. ‘ಸಮ್ಮಿಶ್ರ ಸರ್ಕಾರವು ಸಂಪುಟ ರಚನೆ ವಿಚಾರದಲ್ಲಿ ಅವಸರದ ನಿರ್ಧಾರ ತೆಗೆದುಕೊಳ್ಳುವುದು ಬೇಡ. ಹಾಗೆ ಮಾಡಿದರೆ ಸರ್ಕಾರ ಅಲ್ಪಾಯುಷಿಯಾಗುತ್ತದೆ. ಖಾತೆ ಹಂಚಿಕೆ ಬಗ್ಗೆ ಯೋಚಿಸಿ ತೀರ್ಮಾನ ತೆಗೆದುಕೊಳ್ಳಬೇಕು. ಜನಪರ ಕಾರ್ಯಕ್ರಮಗಳನ್ನು ರೂಪಿಸಲು ಎರಡೂ ಪಕ್ಷಗಳ ಮುಖಂಡರನ್ನು ಒಳಗೊಂಡ ತಜ್ಞರ ಸಮಿತಿ ರಚಿಸಬೇಕು. ಕೆಲಸ ಸರಿ ಹೋಗದಿದ್ದಾಗ, ಕಿವಿ ಹಿಂಡಿ ಬುದ್ಧಿ ಹೇಳಲು ಸಮನ್ವಯ ಸಮಿತಿಯನ್ನೂ ರಚಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಸಾಹಿತಿ ಚಂದ್ರಶೇಖರ ಪಾಟೀಲ ಅವರು “21 ರಾಜ್ಯಗಳಲ್ಲಿ ಓಡಾಡಿ ಈ ಬಾರಿ ದಕ್ಷಿಣ ಭಾರತದ ಹೆಬ್ಬಾಗಿಲಿಗೆ ಬಂದ ಬಿಜೆಪಿಯ ಅಶ್ವಮೇಧ ಕುದುರೆ, ಸಮೃದ್ಧ ನಾಡಿನ ಹಸಿರು ಹುಲ್ಲಿಗೆ ಬಾಯಿ ಹಾಕಿತು. ಈಗ ಹೊಟ್ಟೆ ಕೆಡಿಸಿಕೊಂಡು ವಾಪಸ್ ಹೋಗಿದೆ. ಒಂದು ವೇಳೆ ಹೆಬ್ಬಾಗಿಲು ಪ್ರವೇಶಿಸಲು ಬಿಟ್ಟರೆ, ಆ ಕುದುರೆ ಇಡೀ ರಾಜ್ಯವನ್ನು ಆಕ್ರಮಿಸಿಬಿಡುತ್ತದೆ’ ಎಂದು ಹೇಳಿದರು.

“ಬೆಂಗಳೂರು ಪದವೀಧರ ಕ್ಷೇತ್ರ: ವಿಧಾನ ಪರಿಷತ್ ಚುನಾವಣೆ-2018

ಮತದಾರರಿಗೆ ಪ್ರಕಾಶ್ ಕೆ. ಅವರ ಮನವಿ

ನಮ್ಮ ದೇಶದ ಕೆಲವೇ ರಾಜ್ಯಗಳಲ್ಲಿ ‘ವಿಧಾನ ಪರಿಷತ್’ ಅಸ್ತಿತ್ವದಲ್ಲಿದೆ. ಕರ್ನಾಟಕ ಅಂತಹ ರಾಜ್ಯಗಳ ಪೈಕಿ ಒಂದಾಗಿದೆ.. ‘ವಿಧಾನ ಪರಿಷತ್’ ಎನ್ನುವುದು ವಿಧಾನ ಸಭೆಯ ಜೊತೆಗೆ ರಾಜ್ಯದ ನೀತಿ, ನಿರೂಪಣಾ ಹಾಗೂ ಶಾಸನ ರಚನೆಯಂತಹ ಅತ್ಯಂತ ಮಹತ್ವದ ಅಧಿಕಾರ ಹೊಂದಿರುವ ಸಂವಿಧಾನ ಬದ್ಧವಾದ ಸಂಸ್ಥೆಯಾಗಿದೆ. ಆ ಕಾರಣದಿಂದಾಗಿಯೇ ಈ ಮಹತ್ವದ ಸಂವಿಧಾನಿಕ ಸಂಸ್ಥೆಗೆ ಸಮಾಜದ ವಿವಿಧ ಕ್ಷೇತ್ರದಿಂದ, ವಿಭಿನ್ನವಾದ ಹಿನ್ನೆಲೆಗಳ ಪ್ರಾತಿನಿಧಿತ್ವವನ್ನು ಹೊಂದಿ ಶಾಸಕಾಂಗದ ಘನತೆವೆತ್ತ ಸಂಸ್ಥೆಯಾಗಿ ಬೆಳೆದಿದೆ.

ಇಂತಹ ವಿಧಾನ ಪರಿಷತ್‌ಗೆ ವಿವಿಧ ಕ್ಷೇತ್ರಗಳಂತೆ **‘ಬೆಂಗಳೂರು ಪದವೀಧರ ಕ್ಷೇತ್ರ’**ದಿಂದಲೂ ಹಲವಾರು ವರ್ಷಗಳಿಂದ ‘ಪ್ರತಿನಿಧಿಗಳು’ ಆಯ್ಕೆಯಾಗುತ್ತಾ ಬಂದಿದ್ದಾರೆ. ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳನ್ನೊಳಗೊಂಡ ‘ಬೆಂಗಳೂರು ಪದವೀಧರ ಕ್ಷೇತ್ರವು ಹತ್ತಾರು ಸಮಸ್ಯೆಗಳ ಅಗರವೆಂದರೆ ತಪ್ಪಲ್ಲ. ಮುಖ್ಯವಾಗಿ ಪ್ರತಿವರ್ಷ ಸಾವಿರಾರು ಪದವಿಧರ ಯುವಜನರು ಒಂದಡೆಯಾದರೆ, ಪದವಿ ಪಡೆದಿರುವ ಸಾವಿರಾರು ಯುವಜನರು ನಿರುದ್ಯೋಗಿಗಳಾಗಿ, ಅರೆ ಉದ್ಯೋಗಿಗಳಾಗಿ, ಅತಿಥಿ, ಗುತ್ತಿಗೆ, ಗೌರವ ಮೊದಲಾದ ಹೆಸರಿನಲ್ಲಿ ದುಡಿಯುತ್ತಿದ್ದರೂ, ಖಾಯಂಗೊಳ್ಳದೆ ಅತಂತ್ರ ಬದುಕು ಸಾಗಿಸುತ್ತಿದ್ದಾರೆ. ನಮ್ಮನ್ನು ಆಳುವ ಸರಕಾರಗಳು ಜಾರಿ ಮಾಡಿದ ಉದಾರೀಕರಣ ನೀತಿಗಳು ಅವಿಭಜಿತ ಬೆಂಗಳೂರು ನಗರ ಹಾಗೂ ಗ್ರಾಮೀಣ ಪ್ರದೇಶದ ಬದುಕಿನ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮವನ್ನೇ ಬೀರಿವೆ. ಕೃಷಿ ಕ್ಷೇತ್ರದ ಈ ಬಿಕ್ಕಟ್ಟಿಗೆ ಸಿಲುಕಿ ನಿರುದ್ಯೋಗದಿಂದ ಯುವಜನರು ಕೆಲಸಕ್ಕಾಗಿ ನಗರಕ್ಕೆ ವಲಸೆ ಬರುತ್ತಿದ್ದಾರೆ. ವಿವಿಧ ಯೋಜನೆಗಳಿಗಾಗಿ ಇದ್ದ ಅಲ್ಪ ಸ್ವಲ್ಪ ಕೃಷಿ ಭೂಮಿ ಕಳೆದುಕೊಂಡ ರೈತ ಕುಟುಂಬಗಳ ಯುವಜನರು ‘ಅರೆಬರೆ ಉದ್ಯೋಗ’ಗಳನ್ನ ಆಶ್ರಯಿಸಬೇಕಾಗಿದೆ. ಇಂತಹ ಎಲ್ಲ ಕಾರಣಗಳಿಂದ ಈ ಯುವಜನರು ‘ಸಾಂಸ್ಕೃತಿಕ, ಆರ್ಥಿಕ ಪಲ್ಲಟ’ಗಳಿಗೆ ಬಲಿಯಾಗುತ್ತಿದ್ದಾರೆ.

ಈ ಸನ್ನಿವೇಶದಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ಸಾಮಾಜಿಕ ಬದಲಾವಣೆಯ ಹೋರಾಟದಲ್ಲಿ ತೊಡಗಿಸಿಕೊಂಡ ನಾನು **‘ಬೆಂಗಳೂರು ಪದವೀಧರ ಕ್ಷೇತ್ರ’** ದಿಂದ ವಿಧಾನ ಪರಿಷತ್‌ಗೆ ನಡೆಯುವ **‘ದ್ವೈವಾರ್ಷಿಕ’** ಚುನಾವಣೆಯಲ್ಲಿ ಎಡಪಕ್ಷಗಳ, ಪ್ರಗತಿಪರರ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ **ಪ್ರಕಾಶ್ ಕೆ. ಅವರು ತಮಗೆ ‘ಪ್ರಥಮ ಪ್ರಾಶಸ್ತ್ಯ’ ಮತ ನೀಡಬೇಕೆಂದು ಕೋರಿದ್ದಾರೆ.**

ಜೂನ್ 8 ರಂದು ನಡೆಯುವ ಈ ಚುನಾವಣೆಯಲ್ಲಿ ಮತದಾನ ಮಾಡುವಾಗ ‘ಚುನಾವಣಾ ಅಧಿಕಾರಿಗಳು ನೀಡುವ ಪೆನ್ನಿನಿಂದಲೇ **ಪ್ರಕಾಶ್ ಕೆ. ಎನ್ನುವ ಹೆಸರಿನ ಮುಂದೆ 1 ಎಂದು ಬರೆಯುವ ಮೂಲಕ ‘ಪ್ರಥಮ ಪ್ರಾಶಸ್ತ್ಯ’ ಮತ ನೀಡಬೇಕೆಂದು ಕೋರಿದ್ದಾರೆ.**

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ತೂತುಕೂಡಿ ಕೊಲೆಗಳಿಗೆ ಸ್ಪಂದಿಸದ ಸಂವೇದನಾ-ಶೂನ್ಯತೆ



ಬಂಡವಾಳಶಾಹಿಯು ಮನುಷ್ಯರ ಅಂತಃಕರಣವನ್ನು ನಾಶಮಾಡಿ ಮನುಷ್ಯ ಸಹಜ ಭಾವನೆಗಳನ್ನು, ಪ್ರತಿಕ್ರಿಯೆಗಳನ್ನು ಕೊಂದುಹಾಕುತ್ತದೆ ಎಂದು ಕಾರ್ಲ್‌ಮಾರ್ಕ್ಸ್ ಕರಾರುವಾಕ್ಕಾಗಿ ಹೇಳಿದ್ದ. ಮಾರ್ಕ್ಸ್‌ನನ್ನು ಕೇವಲ ವರ್ಗ ಹೋರಾಟದ ಸಮರ್ಥಕನೆಂದು ನೋಡುವವರಿಗೆ ಅವನ ಚಿಂತನೆಯು ಯೂರೋಪಿನ ಮಾನವತಾವಾದಿ ಪರಂಪರೆ ಹಾಗೂ ಸಾಹಿತ್ಯಗಳ ಜೊತೆಗೆ ಆಳವಾದ ಸಂಬಂಧವನ್ನು ಹೊಂದಿದ್ದು ಮುಖ್ಯವೆನಿಸುವುದಿಲ್ಲ. ಗ್ರೀಕ್ ನಾಟಕಗಳು, ಶೇಕ್ಸ್‌ಪಿಯರ್, ಫ್ರೆಂಚ್ ಕಾದಂಬರಿಕಾರ ಬಾಲ್ಜಾಕ್ (Balzac) ಗ್ರೀಕ್ ಮಹಾಕವಿ ಹೋಮರ್ ಇವರೆಲ್ಲರು ಮಾರ್ಕ್ಸ್‌ನ ಸಂವೇದನೆಯ ಭಾಗವಾಗಿದ್ದರು. ಆದ್ದರಿಂದಲೇ ಬಂಡವಾಳಶಾಹಿಯು ಒಂದು ಕಡೆ ಜಮೀನ್ದಾರಿ ವ್ಯವಸ್ಥೆಯನ್ನು, ಧರ್ಮ ಹಾಗೂ ಪುರೋಹಿತಶಾಹಿಯ ಹಿಡಿತವನ್ನು ಭಗ್ನಗೊಳಿಸಿ ಸಾಮಾಜಿಕ ಚಲನೆಯನ್ನು ಉಂಟುಮಾಡುವ ಚಾರಿತ್ರಿಕ ಕೆಲಸವನ್ನು ಮಾಡುತ್ತದೆಯಾದರೆ ಇನ್ನೊಂದೆಡೆ ಮನುಷ್ಯರನ್ನು ತಮ್ಮ ಶ್ರಮ, ಸಾಮಾಜಿಕ ಸಂಬಂಧಗಳು ಹಾಗೂ ಮನುಷ್ಯ ಸಹಜ ಭಾವನೆಗಳಿಂದ ವಿಮುಖಗೊಳಿಸುತ್ತದೆ. ಮಾರ್ಕ್ಸ್‌ನ ಈ ಒಳನೋಟವು ಹೊಸ ವಸಾಹತುಶಾಹಿಯ ಇಂದಿನ ಸಂದರ್ಭದಲ್ಲಿ (ಅದನ್ನು ನಾವು ಜಾಗತೀಕರಣವೆನ್ನುವ ಎಲ್ಲರನ್ನು ಮುದಗೊಳಿಸುವ ಹೆಸರಿನಿಂದ ಕರೆಯುತ್ತೇವೆ!) ಎಂದಿಗಿಂತಲೂ ಹೆಚ್ಚು ಅರ್ಥಪೂರ್ಣವಾಗಿದೆ. ನಮ್ಮ ಮಧ್ಯಮವರ್ಗದ "ಮಜಾ ಸಂಸ್ಕೃತಿಯ" ತೆವಲುಗಳು, ಮಾಧ್ಯಮಗಳ ಅನೈತಿಕವಾದ ಎಲ್ಲವನ್ನೂ ಚಿಲ್ಲರೆಗೊಳಿಸುವ ರೋಚಕತೆ ಹಾಗೂ ದಿನದಿನಕ್ಕೂ ಅಶ್ಲೀಲವಾಗುತ್ತಿರುವ ರಾಜಕೀಯ-ಇವುಗಳಿಂದಾಗಿ ನಮ್ಮೆದುರಿಗೇ ನಡೆಯುವ ಭೀಕರ ಹಿಂಸೆಯ ಘಟನೆಗಳಿಗೆ ನಾವು ಸ್ಪಂದಿಸುವುದೇ ಇಲ್ಲ.

ಇತ್ತೀಚೆಗೆ ತಮಿಳುನಾಡಿನ ತೂತುಕುಡಿ ನಲ್ಲಿ ಪರಿಸರವನ್ನು ನಾಶಮಾಡುತ್ತ, ಮಾಲಿನ್ಯದಿಂದ ಜನರನ್ನು ಕೊಲ್ಲುತ್ತಿರುವ Sterlite ಫ್ಯಾಕ್ಟರಿಯನ್ನು ನಿಲ್ಲಿಸಿ ಎಂದು ಪ್ರತಿಭಟಿಸುತ್ತಿದ್ದ ಸಾವಿರಾರು ಜನ ನಾಗರಿಕರ ಮೇಲೆ ಸರಕಾರವು ಗೋಲೀಬಾರ್ ಮಾಡಿ 19 ಜನರನ್ನು ಕೊಲೆಮಾಡಿದೆ. ಈವರೆಗೂ ಸತ್ತವರ ಸಂಖ್ಯೆ ಖಚಿತವಾಗಿ ಗೊತ್ತಿಲ್ಲ. ನೂರಾರು ಜನರನ್ನು ಬಂಧಿಸಿ ಅವರು ಎಲ್ಲಿದ್ದಾರೆ ಎನ್ನುವ ಮಾಹಿತಿಯನ್ನೂ ಸರಕಾರವು ಕೊಡುತ್ತಿಲ್ಲ. ಇದು ಆಧುನಿಕ ಭಾರತದಲ್ಲಿ ಪ್ರಭುತ್ವಗಳು ಮಾಡುತ್ತಲೇ ಬಂದಿರುವ ಭೀಕರ ಹಿಂಸೆಯ ಇನ್ನೊಂದು ಉದಾಹರಣೆ. ಕೋಮುಗಲಭೆ ಹಾಗೂ ಉಗ್ರವಾದಗಳಿಗಿಂತ ನಮ್ಮ ಸರಕಾರಗಳೇ ಹೆಚ್ಚು ಕೊಲೆಗಳನ್ನು ಮಾಡಿವೆ. ಪ್ರಾಯಶಃ ಇನ್ನಾವುದೇ ನಾಗರಿಕ ಸಮಾಜದಲ್ಲಿ ತೂತುಕುಡಿಯ ಈ ಕೊಲೆಗಳು ಕ್ರೋಧ, ತಲ್ಲಣ ಹಾಗೂ ದುಃಖವನ್ನು ಹುಟ್ಟಿಸುತ್ತಿದ್ದವು. ಪ್ರಬಲವಾದ ಪ್ರತಿಭಟನೆಯನ್ನು ಹುಟ್ಟಿಸುತ್ತಿದ್ದವು. ಆದರೆ ಹೆಚ್ಚಾಗಿ ಎಡಪಕ್ಷಗಳನ್ನು ಕೆಲವು ಸಂಘಟನೆಗಳನ್ನು ಬಿಟ್ಟರೆ ನಮ್ಮ ನಾಗರಿಕ ಸಮುದಾಯವು ಮನುಷ್ಯ ಸಹಜವಾದ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ. ಕರ್ನಾಟಕದಲ್ಲಿ ಬಿಡಿ, ಇಲ್ಲಿ ರಾಜಕೀಯದ ಓ.ಸಿ. (O.C.- Opening and Closing) ಆಟದಲ್ಲಿಯೇ ಎಲ್ಲರೂ ಮುಳುಗಿದ್ದಾರೆ. ಚುನಾವಣೆಯಲ್ಲಿ ಆಯ್ಕೆಯಾಗಿರುವ ಕುರಿಗಳನ್ನು ವಿವಿಧ ಪಕ್ಷದ ಕುರುಬರು ರೆಸಾರ್ಟ್‌ಗಳಲ್ಲಿ ಮೇವು ಹಾಕಿ ಕಾಯುತ್ತಿದ್ದರು. ಈ ಕುರಿಗಳು ಸದನದಲ್ಲಿ 'ಬ್ಯಾ' ಅಂದು ತಮ್ಮ ಸಂಖ್ಯೆಯನ್ನು ಸಾಬೀತು ಮಾಡುವುದಕ್ಕಾಗಿ ಕೋಟಿಗಟ್ಟಲೆ ಹರಾಮಿ ದುಡ್ಡನ್ನು ಕೊಡಲಿ ಎಂದು ಕಾಯುತ್ತಿದ್ದವು. ಇವು ಯಾರ ಹೊಲಗಳಲ್ಲಿ ಗೊಬ್ಬರ ಹಾಕುತ್ತವೆ ಎನ್ನುವ ರೋಚಕ ರಹಸ್ಯಗಳನ್ನು ನಮ್ಮ ಮಾಧ್ಯಮಗಳು ಪ್ರತಿಕ್ಷಣಕ್ಕೆ ವರದಿ ಮಾಡುತ್ತಿದ್ದವು. ಇವರೆಲ್ಲ ದೇಶಕಟ್ಟುವ ಗುರುತರ ಕೆಲಸದಲ್ಲಿ ಹೀಗೆ ಛಣಾಥಿ ಆಗಿರುವಾಗ ಕಾರ್ಮಿಕರ ಹೆಣಗಳ ಬಗ್ಗೆ ಮಾತನಾಡಿ ಅವರನ್ನು ಡಿಸ್ಟರ್ಬ್ ಮಾಡುವವರು ಯಾರು? ಇನ್ನು ನಮ್ಮ ಶಿಕ್ಷಿತ ಮಧ್ಯಮ ವರ್ಗಗಳೋ. ಅವರು ಕಾರ್ಮಿಕರು, ಶ್ರಮಜೀವಿಗಳು, ಈ ಭೂಮಿಯಿಂದ ಡೈನಾಸಾರ್‌ಗಳ ಜೊತೆಗೇ ಕಣ್ಮರೆಯಾಗಿ ಹೋದರು ಎಂದು ಪ್ರಾಮಾಣಿಕವಾಗಿ ನಂಬಿದ್ದಾರೆ. ಅದರಲ್ಲಿ ಕೆಲವರು "ಪ್ರಜ್ಞಾವಂತ ನಾಗರೀಕರು" ಪ್ರತಿಭಟನಾಕಾರರು ಹಿಂಸೆಯಲ್ಲಿ ತೊಡಗಿದ್ದರಿಂದಲೇ ಹೀಗೆಲ್ಲಾ ಆಯಿತು ಎಂದು ಪತ್ರಿಕೆಗಳ ಸಂಪಾದಕರಿಗೆ ಗಾಢವಾದ ವಿಷಾದದಿಂದ ಪತ್ರ ಬರೆಯುತ್ತಿದ್ದಾರೆ. ತಮಿಳುನಾಡಿನ ಎಲ್ಲಾ ರಾಜಕೀಯ ಪಕ್ಷಗಳ ಕಂದಮ್ಮಗಳು ತಮ್ಮನ್ನು ತಬ್ಬಲಿಯನ್ನಾಗಿಸಿ ತೀರಿಹೋದ 'ಅಮ್ಮ'ನ ಕೊನೆಯ ಧ್ವನಿಮುದ್ರಿಕೆಯನ್ನು ಕೇಳುತ್ತಾ ಎಪ್ಪೋ ಎಪ್ಪೋ ಎಂದು ಹಲಬುತ್ತ ಅಳುತ್ತಿದ್ದಾರೆ. ಹೀಗಿರುವಾಗ ಕೇವಲ 19 ಜುಜುಬಿ ಹೆಣಗಳ ಬಗ್ಗೆ ಚಿಂತಿಸುವರು ಯಾರು? ದಿನಕ್ಕೊಂದು ಸುಳ್ಳು ಹಾಗೂ ಭ್ರಮೆಗಳನ್ನು ಎಗ್ಗಿಲ್ಲದೇ ಹಂಚುತ್ತಿರುವ ರಾಷ್ಟ್ರನಾಯಕರ ಅದ್ಭುತ ಭಾಷಣಗಳನ್ನು ಕೇಳುವುದರಲ್ಲೇ ಸ್ವರ್ಗ ಸುಖವಿದೆಯೆಂದು ತೇಲುಗಣ್ಣು ಮೇಲುಗಣ್ಣು ಮಾಡಿಕೊಂಡಿರುವ ನಮ್ಮ ಸಾಮಾನ್ಯ ಪ್ರಜೆಗಳು ಕೇವಲ 19 ಹೆಣಗಳ ಬಗೆಗಿನ ನೀರಸವಾದ ವರದಿಗಳನ್ನು ಓದಬೇಕೆ? ಅದರಲ್ಲೂ ಅತ್ತೆ ಸೊಸೆಯರ ಭೀಕರ ಮಹಾಯುದ್ಧಗಳು, ಅಪರಾಧ ಹಾಗೂ ಹಾದರಗಳಂಥ ರುಚಿಕರವಾದ ಮನರಂಜನೆಯನ್ನು ಎರಡು ಕೈಯಿಂದಲೂ 24*7 ನಮ್ಮ ಧಾರಾವಾಹಿಗಳು ಬಡಿಸುತ್ತಿರುವಾಗ ಒಂದಿಷ್ಟು ಸಾವುಗಳ ಬಗ್ಗೆ ಮಾತನಾಡಲು ಅವರಿಗೆ ಪುರುಸೊತ್ತೆಲ್ಲಿದೆ?

ಅಷ್ಟಕ್ಕೂ ಇದೇನೂ ಹೊಸದಲ್ಲ. ಕೂಡಂಕುಲಂ ನಲ್ಲಿ ಅಣುಸ್ಥಾವರವು ಬೇಡವೆಂದು ಸಮುದ್ರದಲ್ಲಿಯೇ ನಿಂತು ನೂರಾರು ಜನ ಪ್ರತಿಭಟಿಸಿದ್ದರೂ "ದೇಶದ ಅಭಿವೃದ್ಧಿಗಾಗಿ" ಆ ಯೋಜನೆಯನ್ನು ಮುಂದುವರೆಸಲಾಯಿತು. ಈಗ ಈ ಕೊಲೆಗಳ ಬಗ್ಗೆ ಅಲ್ಲಲ್ಲಿ ಪ್ರತಿಭಟನೆ ನಡೆಯುತ್ತಿರುವಾಗಲೇ ವೇದಾಂತ ಕಂಪನಿಯು ತನ್ನ ಲಂಡನ್ ಕಚೇರಿಯಿಂದ Sterilite ಫ್ಯಾಕ್ಟರಿಯನ್ನು ಬಂದು ಮಾಡುವ ಪ್ರಸ್ತಾವವೇ ಇಲ್ಲ; ಬದಲಾಗಿ ಅದನ್ನು ವಿಸ್ತರಿಸುತ್ತೇವೆ ಎಂದು ಅಧಿಕೃತ ಹೇಳಿಕೆಯನ್ನು ಕೊಟ್ಟಿದೆ. ಏಕೆಂದರೆ ಆ ಕಂಪನಿಗೆ ಸತ್ಯವು ಗೊತ್ತಿದೆ. ಪ್ರತಿಭಟನೆಗಳ ಕಾವು ತಣ್ಣಗಾದ ಮೇಲೆ ನಮ್ಮ ಸರಕಾರಗಳು ಗೋಲೀಬಾರ್‌ನಲ್ಲಿ ಉರುಳಿದವರ ಶವಗಳ ಮೇಲೆಯೇ ಫ್ಯಾಕ್ಟರಿಯ ವಿಸ್ತರಣೆಗೆ ಅವಕಾಶ ಮಾಡಿಕೊಡುತ್ತೇವೆ. ಈಗಾಗಲೇ ಬಿ.ಜೆ.ಪಿ. ವಕ್ತಾರರು "ಇತ್ತೀಚೆಗೆ ಕಾರ್ಮಿಕ ಸಂಘಟನೆಗಳು ಉದ್ಯೋಗ ವಿರೋಧಿಗಳಾಗುತ್ತಿವೆ. ಇದು ರಾಷ್ಟ್ರದ ಅಭಿವೃದ್ಧಿಗೆ ಒಳ್ಳೆಯದಲ್ಲ"ವೆಂದು ಹೇಳಿದ್ದಾರೆ.

ಕರ್ನಾಟಕದ ಗಾರ್ಮೆಂಟ್ ಕೆಲಸಗಾರರು ತಮ್ಮ ನ್ಯಾಯಬದ್ಧ ಬೇಡಿಕೆಗಳಿಗಾಗಿ ಬೀದಿಗಿಳಿದಾಗ ಅವರನ್ನು ತನ್ನ ಪೋಲೀಸರ ಮೂಲಕ ಸರಕಾರವು ಥಳಿಸಿತು. ಅನೇಕ ವರ್ಷಗಳಿಂದ ಸತತವಾಗಿ ಹೋರಾಡುತ್ತಿರುವ ನರಗುಂದ-ನವಲಗುಂದದ ರೈತ ಹೆಣ್ಣುಮಕ್ಕಳ ತೊಡೆಗಳ ಮೇಲೆ ಬಾಸುಂಡೆ ಬರುವಂತೆ ಥಳಿಸಲಾಯಿತು. ಅನುಮಾನವೇ ಬೇಡ. ಮಾರ್ಕ್ಸ್ ಬಂಡವಾಳಶಾಹಿಯು ತನ್ನ ಬೆಳವಣಿಗೆಯ ಹಂತದಲ್ಲಿ ಒಬ್ಬ ದರೋಡೆಕೋರನ ಹಾಗೆ ಹಿಂಸ್ರ ಪಶುವಿನ ಹಾಗೆ ವರ್ತಿಸುತ್ತದೆ ಎಂದು ವಿವರಿಸಿದ್ದ. ಅದಕ್ಕೆ ಒಂದು ಚಿಕ್ಕ ಜೋಡಣೆಯೆಂದರೆ ಅದು ತನ್ನ ಎಲ್ಲಾ ಹಂತಗಳಲ್ಲೂ, ವಿಶೇಷವಾಗಿ ಹೊಸ ರೂಪವನ್ನು ಪಡೆಯುವ ಸ್ಥಿತಿಯಲ್ಲಿ ಹಾಗಿರುತ್ತದೆ. ಕ್ರೂರವಾಗಿರುತ್ತದೆ. ಈಗ ಭಾರತದಲ್ಲಿ ಆಗುತ್ತಿರುವುದು ಅದೇ. ಬಂಡವಾಳಶಾಹಿ ಬನಿಯಾಗಳ ಪರಮಸ್ನೇಹಿಯಾದ ಪಕ್ಷವೇ ಕೇಂದ್ರದಲ್ಲಿ ಅಧಿಕಾರದಲ್ಲಿರುವುದರಿಂದಾಗಿ ಕ್ರಮೇಣವಾಗಿ ಕಾರ್ಮಿಕ ವಿರೋಧಿ ಕಾನೂನುಗಳು, ಪರಿಸರ ವಿರೋಧಿ ಯೋಜನೆಗಳು ಮತ್ತು ಅಂತರ್‌ರಾಷ್ಟ್ರೀಯ ಕಂಪನಿಗಳಿಗಾಗಿ ರೈತರ ಜಮೀನುಗಳನ್ನು ಖರೀದಿ ಮಾಡಲು ಅವಕಾಶ ಮಾಡಿಕೊಡುವ ಕಾನೂನುಗಳು ಜಾರಿಗೆ ಬರುತ್ತಿವೆ. ಇತ್ತೀಚೆಗೆ Walmart ಸಂಸ್ಥೆಯು Flipkart ಸಂಸ್ಥೆಯಲ್ಲಿ ಬಂಡವಾಳ ಹೂಡಿದ್ದನ್ನು (take over ಮಾಡಿದ್ದು) ಭಾರತದ ವರ್ತಕರು Walmart ಕಂಪನಿಯು ಈ ಕಾಲದ East India Company ಎಂದು ಹೇಳಿ ಪ್ರತಿಭಟಿಸುವಂತೆ ಮಾಡಿವೆ. ಇವೆಲ್ಲವುಗಳ ಮುಂದುವರಿಕೆಯಾಗಿ ಕಾರ್ಮಿಕರ ಹಾಗೂ ನಾಗರಿಕರ ಪ್ರತಿಭಟನೆಗಳನ್ನು ಹಿಂಸೆಯ ಮೂಲಕ ಹತ್ತಿಕ್ಕುವ ಘಟನೆಗಳು ಹೆಚ್ಚಾಗುತ್ತಾ ಹೋಗುತ್ತವೆ. ಅಲ್ಲದೆ ಬಲಪಂಥೀಯ ಸಂಘಟನೆಗಳು ಇಂಥ "ದೇಶದ್ರೋಹಿ" ಅಭಿವೃದ್ಧಿ ವಿರೋಧಿ ಕಾರ್ಮಿಕರನ್ನು ಸದೆಬಡಿಯಲು ಸನ್ನದ್ಧರಾಗಿದ್ದಾರೆ. ಈ ಸಂಕಷ್ಟದ ದಿನಗಳಲ್ಲಿ ಪರಿಹಾರವಿರುವುದು ಜನಹೋರಾಟಗಳ ಮೂಲಕ ನಡೆಯುವ ಪ್ರತಿಭಟನೆಗಳಲ್ಲಿ. ಆದರೆ ಕಣ್ಣೆದುರಿನ ವಾಸ್ತವಗಳನ್ನು ಅರ್ಥಮಾಡಿಕೊಳ್ಳದೆಯೇ ಭ್ರಮೆಯಲ್ಲಿ ಬದುಕುವ ಮಂಪರಿನಲ್ಲಿ ನಮ್ಮ ಎಲ್ಲಾ ವರ್ಗಗಳಿವೆ. ಜರ್ಮನಿಯ ನಾಝಿ ಪಕ್ಷ ಹಾಗೂ ಇಟಲಿಯ ಫ್ಯಾಸಿಸ್ಟ್ ಪಕ್ಷಗಳು ಬಂಡವಾಳಶಾಹಿ ಉದ್ಯಮಿಗಳ ಪರಮ ಮಿತ್ರರಾಗಿದ್ದವು ಹಾಗೂ ಈ ವರ್ಗಗಳಿಂದಲೇ ಎಲ್ಲಾ ಬಗೆಯ ಬೆಂಬಲಗಳನ್ನು ಪಡೆದವು ಎನ್ನುವುದು ಚರಿತ್ರೆಯ ಸತ್ಯವಾಗಿದೆ.

ಕೊನೆಯ ಟಿಪ್ಪಣಿ :

ಈ ಲೇಖನವನ್ನು ಬರೆದು ಮುಗಿಸುತ್ತಿದ್ದಂತೆಯೆ ತಮಿಳುನಾಡಿನ ಸರ್ಕಾರವು Sterilite ಫ್ಯಾಕ್ಟರಿಯನ್ನು ಶಾಶ್ವತವಾಗಿ ಬಂದು ಮಾಡಲಾಗಿದೆಯೆಂದು ತಿಳಿಸಿದೆಯೆಂಬ ವಾರ್ತೆಯು ಬಂದಿದೆ. 22 ವರ್ಷಗಳ ನಂತರ, ಸುಧೀರ್ಘ ಹೋರಾಟದ ನಂತರ. ಆದರೆ ಇಂಥ ವಿದ್ಯಮಾನಗಳಿಗೆ ನಾವು ಸ್ಪಂದಿಸುವುದಿಲ್ಲವೆಂದು ಲೇಖನದಲ್ಲಿ ಹೇಳಿದ್ದು ಸರಿಯಾಗಿಯೇ ಇದೆ. ●

ಇನ್ನು ನಮ್ಮ ಶಿಕ್ಷಿತ ಮಧ್ಯಮ ವರ್ಗಗಳೋ. ಅವರು ಕಾರ್ಮಿಕರು, ಶ್ರಮಜೀವಿಗಳು, ಈ ಭೂಮಿಯಿಂದ ಡೈನಾಸಾರ್‌ಗಳ ಜೊತೆಗೇ ಕಣ್ಮರೆಯಾಗಿ ಹೋದರು ಎಂದು ಪ್ರಾಮಾಣಿಕವಾಗಿ ನಂಬಿದ್ದಾರೆ. ಅದರಲ್ಲಿ ಕೆಲವರು "ಪ್ರಜ್ಞಾವಂತ ನಾಗರೀಕರು" ಪ್ರತಿಭಟನಾಕಾರರು ಹಿಂಸೆಯಲ್ಲಿ ತೊಡಗಿದ್ದರಿಂದಲೇ ಹೀಗೆಲ್ಲಾ ಆಯಿತು ಎಂದು ಪತ್ರಿಕೆಗಳ ಸಂಪಾದಕರಿಗೆ ಗಾಢವಾದ ವಿಷಾದದಿಂದ ಪತ್ರ ಬರೆಯುತ್ತಿದ್ದಾರೆ. ತಮಿಳುನಾಡಿನ ಎಲ್ಲಾ ರಾಜಕೀಯ ಪಕ್ಷಗಳ ಕಂದಮ್ಮಗಳು ತಮ್ಮನ್ನು ತಬ್ಬಲಿಯನ್ನಾಗಿಸಿ ತೀರಿಹೋದ 'ಅಮ್ಮ'ನ ಕೊನೆಯ ಧ್ವನಿಮುದ್ರಿಕೆಯನ್ನು ಕೇಳುತ್ತಾ ಎಪ್ಪೋ ಎಪ್ಪೋ ಎಂದು ಹಲಬುತ್ತ ಅಳುತ್ತಿದ್ದಾರೆ. ಹೀಗಿರುವಾಗ ಕೇವಲ 19 ಜುಜುಬಿ ಹೆಣಗಳ ಬಗ್ಗೆ ಚಿಂತಿಸುವರು ಯಾರು? ದಿನಕ್ಕೊಂದು ಸುಳ್ಳು ಹಾಗೂ ಭ್ರಮೆಗಳನ್ನು ಎಗ್ಗಿಲ್ಲದೇ ಹಂಚುತ್ತಿರುವ ರಾಷ್ಟ್ರನಾಯಕರ ಅದ್ಭುತ ಭಾಷಣಗಳನ್ನು ಕೇಳುವುದರಲ್ಲೇ ಸ್ವರ್ಗ ಸುಖವಿದೆಯೆಂದು ತೇಲುಗಣ್ಣು ಮೇಲುಗಣ್ಣು ಮಾಡಿಕೊಂಡಿರುವ ನಮ್ಮ ಸಾಮಾನ್ಯ ಪ್ರಜೆಗಳು ಕೇವಲ 19 ಹೆಣಗಳ ಬಗೆಗಿನ ನೀರಸವಾದ ವರದಿಗಳನ್ನು ಓದಬೇಕೆ? ಅದರಲ್ಲೂ ಅತ್ತೆ ಸೊಸೆಯರ ಭೀಕರ ಮಹಾಯುದ್ಧಗಳು, ಅಪರಾಧ ಹಾಗೂ ಹಾದರಗಳಂಥ ರುಚಿಕರವಾದ ಮನರಂಜನೆಯನ್ನು ಎರಡು ಕೈಯಿಂದಲೂ 24*7 ನಮ್ಮ ಧಾರಾವಾಹಿಗಳು ಬಡಿಸುತ್ತಿರುವಾಗ ಒಂದಿಷ್ಟು ಸಾವುಗಳ ಬಗ್ಗೆ ಮಾತನಾಡಲು ಅವರಿಗೆ ಪುರುಸೊತ್ತೆಲ್ಲಿದೆ?



ಕಾರ್ಪೊರೇಟ್ ಮಾಧ್ಯಮಗಳನ್ನು ಬೆತ್ತಲುಗೊಳಿಸಿದ ಕುಟುಕು ಕಾರ್ಯಾಚರಣೆ





ಲಾಭದ ಧಾವಂತವಷ್ಟೇ ಕಾರ್ಪೊರೇಟ್ ಮಾಧ್ಯಮಗಳ ಏಕೈಕ ಗುರಿಯಾಗಿದೆ ಹಾಗೂ ಹಣ ಮಾಡಿಕೊಳ್ಳುವುದೇ ಸಂಪಾದಕೀಯ ಹೂರಣವನ್ನು ನಿರ್ಧರಿಸುವ ಮಾನದಂಡವಾಗುತ್ತಿದೆ. ನಿಜ, ಇದು ನವ-ಉದಾರವಾದಿ ಯುಗದಲ್ಲಿ ಕಾರ್ಪೊರೇಟ್ ಮಾಧ್ಯಮಗಳ ಗುಣ ಎಂಬುದು ಸುಸ್ಪಷ್ಟವೇ ಆಗಿದ್ದರೂ, ಮಾಧ್ಯಮಗಳ ಉನ್ನತ ಅಧಿಕಾರಿಗಳು ಮತ್ತು ಮಾಲಿಕರು ಬಿಜೆಪಿ-ಆರ್‌ಎಸ್‌ಎಸ್ ಕೂಟಕ್ಕೆ ತೋರುತ್ತಿರುವ ಬಹಿರಂಗ ನಂಟನ್ನು ಬಯಲುಗೊಳಿಸಿರುವುದು ಕೋಬ್ರಾಪೋಸ್ಟ್‌ನ ಮಾರುವೇಷದ ಕಾರ್ಯಾಚರಣೆಯ ಮಹತ್ವದ ಅಂಶವಾಗಿದೆ.–

ಪ್ರಕಾಶ ಕಾರಟ್

ಕೋಬ್ರಾಪೋಸ್ಟ್ ನಡೆಸಿದ ಕುಟುಕು ಕಾರ್ಯಾಚರಣೆಯು ಮುದ್ರಣ ಹಾಗೂ ಇಲೆಕ್ಟ್ರಾನಿಕ್ (ಟಿವಿ) ಸೇರಿದಂತೆ ಮಾಧ್ಯಮದ ಬಹುತೇಕ ಭಾಗ ಯಾವ ರೀತಿಯಲ್ಲಿ ಕೊಳೆತು ನಾರುತ್ತಿದೆ ಎನ್ನುವುದನ್ನು ಬಯಲಿಗೆ ತಂದಿದೆ.

ಟೈಮ್ಸ್ ಆಫ್ ಇಂಡಿಯಾ, ಝೀ ಟಿವಿ, ಇಂಡಿಯಾ ಟುಡೆ, ಹಿಂದೂಸ್ತಾನ್ ಟೈಮ್ಸ್, ಎಬಿಪಿ ನ್ಯೂಸ್, ಜಾಗರಣ್ ಗ್ರೂಪ್‌ನಂಥ ದೊಡ್ಡ ಸಂಸ್ಥೆಗಳು ಸೇರಿದಂತೆ 25 ಮಾಧ್ಯಮ ಸಂಸ್ಥೆಗಳ ಅಸಲಿಯತ್ತನ್ನು ಕೋಬ್ರಾಪೋಸ್ಟ್ ಬಯಲಗೊಳಿಸಿದೆ.

ಸಂಘ ಪರಿವಾರಕ್ಕೆ ಸೇರಿದ ಒಂದು ಸಂಘಟನೆಗೆ ಸೇರಿದ ಆಚಾರ್ಯ ತಾನು ಎಂದು ಮಾರುವೇಷ ಹಾಕಿಕೊಂಡು ಕೋಬ್ರಾಪೋಸ್ಟ್‌ನ ಒಬ್ಬ ವರದಿಗಾರ ಈ ಕುಟುಕು ಕಾರ್ಯಾಚರಣೆ ನಡೆಸಿದ್ದಾರೆ. ಹಿಂದೂತ್ವ ಅಜೆಂಡಾವನ್ನು ಮುಂದೊತ್ತಲಿಕ್ಕಾಗಿ ಹಾಗೂ ಅಂತಿಮವಾಗಿ ಕೋಮುವಾದಿ ಧ್ರುವೀಕರಣ ಮಾಡಲಿಕ್ಕಾಗಿ ಜಾಹೀರಾತಕೀಯ(ಅಂದರೆ ಸಂಪಾದಕೀಯದ ಮುಸುಕು ಹಾಕಿದ ಜಾಹಿರಾತು) ಪ್ರಸಾರಕ್ಕಾಗಿ ನೂರಾರು ಕೋಟಿ ರೂಪಾಯಿಗಳನ್ನು ನೀಡುವ ಪ್ರಸ್ತಾವ ಮುಂದಿಟ್ಟು ಈ ಆಚಾರ್ಯ ಸುದ್ದಿಸಂಸ್ಥೆಗಳ ಮಾಲಿಕರು ಹಾಗೂ ಪ್ರಮುಖ ಕಾರ್ಯನಿರ್ವಾಹಕರನ್ನು ಸಂಪರ್ಕಿಸಿದ್ದ.

ಈ ಪ್ರಸ್ತಾವವನ್ನು ಒಪ್ಪಿಕೊಳ್ಳಲು ಈ ಮಾಧ್ಯಮ ಸಂಸ್ಥೆಗಳು ತೋರಿದ ಧಾವಂತ ಎಷ್ಟಿತ್ತೆಂದರೆ ಕಾಸಿಗಾಗಿ ಸುದ್ದಿ ಹಾಗೂ ಅಪಪ್ರಚಾರ ಆಂದೋಲನ ನಡೆಸಲು ಕಾರ್ಪೊರೇಟ್ ಮಾಧ್ಯಮಗಳು ಎಲ್ಲಾ ನೈತಿಕತೆ ಮತ್ತು ಪತ್ರಿಕಾ ಸಮಗ್ರಚಿತ್ತಕ್ಕೆ ಎಳ್ಳು-ನೀರು ಬಿಡಲು ಸಿದ್ಧವಿದೆ ಎಂಬುದನ್ನು ಅದು ತೋರಿಸಿಕೊಟ್ಟಿತು. ತನ್ನ ಚಂದಾದಾರರ ಮಾಹಿತಿಯನ್ನು ಸರಕಾರಕ್ಕೆ ಒದಗಿಸಬೇಕೆಂದು ಸರಕಾರ ತಾಕೀತು ಮಾಡಿತ್ತು ಎಂಬ ಅಂಶವನ್ನೂ ಪೇಟಿಎಮ್‌ನ ಒಬ್ಬ ಉನ್ನತ ಅಧಿಕಾರಿ ಬಹಿರಂಗ ಪಡಿಸಿರುವುದೂ ಈ ಕಾರ್ಯಾಚರಣೆಯ ಇನ್ನೊಂದು ಅಂಶವಾಗಿದೆ.

ಈ ಎಲ್ಲಾ ಬೆಳವಣಿಗೆಗಳ ಬಗ್ಗೆ ಟಿಪ್ಪಣಿ ಮಾಡಿರುವ ಖ್ಯಾತ ವಿಶ್ಲೇಷಕ ಭಾನು ಪ್ರತಾಪ್ ಮೆಹ್ತಾ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಹೀಗೆ ಬರೆದಿದ್ದಾರೆ: "ಕೆಲವು ಪ್ರಮುಖ ಮಾಧ್ಯಮ ಸಂಸ್ಥೆಗಳು ಇತ್ತೀಚಿನ ಕೆಲವು ವರ್ಷಗಳಲ್ಲಿ ನೀಚತನ, ಮತಾಂಧತೆ, ಬೇಜವಾಬ್ದಾರಿತನ ಮತ್ತು ಅಧಿಕಾರಕ್ಕೆ ಶರಣಾಗತಿಯ ವಿಷಮಯ ಸಂಗಮದಂತಾಗಿವೆ. ಕಾರ್ಪೊರೇಟ್ ಮಾಧ್ಯಮಗಳಲ್ಲಿ ವ್ಯಾಪಾರ-ವ್ಯವಹಾರ ಮತ್ತು ಸಂಪಾದಕೀಯ ಹಿತಗಳ ನಡುವಿನ ಗೆರೆ ತೀರಾ ತೆಳುವಾಗಿದ್ದು ಸಂಪಾದಕೀಯ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟು ರಾಜಿ ಮಾಡಿಕೊಳ್ಳಲಾಗಿದೆ. ಲಾಭದ ಧಾವಂತವಷ್ಟೇ ಕಾರ್ಪೊರೇಟ್ ಮಾಧ್ಯಮಗಳ ಏಕೈಕ ಗುರಿಯಾಗಿದೆ ಹಾಗೂ ಹಣ ಮಾಡಿಕೊಳ್ಳುವುದೇ ಸಂಪಾದಕೀಯ ಹೂರಣವನ್ನು ನಿರ್ಧರಿಸುವ ಮಾನದಂಡವಾಗುತ್ತಿದೆ".

ನವ-ಉದಾರವಾದಿ ಯುಗದಲ್ಲಿ ಕಾರ್ಪೊರೇಟ್ ಮಾಧ್ಯಮಗಳ ಈ ಗುಣ ಸುಸ್ಪಷ್ಟವೇ ಆಗಿದ್ದರೂ, ಮಾಧ್ಯಮಗಳ ಉನ್ನತ ಅಧಿಕಾರಿಗಳು ಮತ್ತು ಮಾಲಿಕರು ಬಿಜೆಪಿ-ಆರ್‌ಎಸ್‌ಎಸ್ ಕೂಟಕ್ಕೆ ತೋರುತ್ತಿರುವ ಬಹಿರಂಗ ನಂಟನ್ನು ಬಯಲುಗೊಳಿಸಿರುವುದು ಕೋಬ್ರಾಪೋಸ್ಟ್‌ನ ಮಾರುವೇಷದ ಕಾರ್ಯಾಚರಣೆಯ ಮಹತ್ವದ ಅಂಶವಾಗಿದೆ.

ಮೋದಿ ಆಡಳಿತದ ಉದಯ ದೊಡ್ಡ ವ್ಯಾಪಾರಸ್ಥರು ಮತ್ತು ಹಿಂದೂತ್ವದ ಬೆಸುಗೆಯ ಆರಂಭದ ಸೂಚನೆ ಎಂಬುದಾಗಿ ಸಿಪಿಐ (ಎಂ) ವ್ಯಾಖ್ಯಾನಿಸಿತ್ತು. ಅದು ಈಗ ಮುಖ್ಯವಾಹಿನಿ ಮಾಧ್ಯಮದಲ್ಲಿ ಪ್ರತಿಫಲನಗೊಂಡಿದೆ.

ಪ್ರಭುತ್ವದ ಮಧ್ಯಪ್ರವೇಶದಿಂದ ಈ ಮಾಧ್ಯಮ ದುರುಪಯೋಗವನ್ನು ತಡೆಗಟ್ಟಬಹುದು ಎಂದು ನಿರೀಕ್ಷಿಸುವುದು ನಿಷ್ಫಲ. ಯಾಕೆಂದರೆ ಈಗ ಆಡಳಿತದಲ್ಲಿರುವುದು ಕಾರ್ಪೊರೇಟ್ ಶಕ್ತಿ ಮತ್ತು ಹಿಂದೂತ್ವಕ್ಕೆ ಸಂಪೂರ್ಣ ಬೆಂಬಲ ಕೊಡುವಂಥ ಸರಕಾರವಾಗಿದೆ.

ಸ್ವತಂತ್ರ ಪತ್ರಿಕೋದ್ಯಮ ಹಾಗೂ ಮಾಧ್ಯಮ ಸಮಚಿತ್ತವನ್ನು ಎತ್ತಿಹಿಡಿಯುವ ಮಾಧ್ಯಮ ಸಂಸ್ಥೆಗಳೂ ಇವೆ. ಅವುಗಳನ್ನು ಬೆಂಬಲಿಸಬೇಕು ಹಾಗೂ ಅವುಗಳನ್ನು ಬಲಪಡಿಸಬೇಕು. ಮಾಧ್ಯಮ ಮಾಲಿಕರು ಹಾಗೂ ಕಾರ್ಪೊರೇಟ್‌ಗಳ ಭ್ರಷ್ಟಾಚಾರ ಮತ್ತು ಅನೈತಿಕ ಆಚರಣೆಗಳ ಹೊರತಾಗಿಯೂ ಸತ್ಯವನ್ನು ಹೊರತರಲು, ವಾಸ್ತವಗಳನ್ನು ವರದಿ ಮಾಡಲು ಮತ್ತು ಸ್ವತಂತ್ರ ತೀರ್ಮಾನಗಳನ್ನು ಚಲಾಯಿಸಲು ಬದ್ಧರಾಗಿರುವ ದೊಡ್ಡ ಸಂಖ್ಯೆಯ ಪತ್ರಕರ್ತರು ದೊಡ್ಡಸಂಖ್ಯೆಯಲ್ಲಿದ್ದಾರೆ. ಪತ್ರಿಕೋದ್ಯಮದ ಸಮಚಿತ್ತತೆ ಮತ್ತು ಘನತೆಯನ್ನು ಖಾತರಿಪಡಿಸಲು ಹಾಗೂ ನ್ಯಾಯಸಮ್ಮತ ಕವರೇಜ್ ನೀಡುವುದನ್ನು ಖಾತರಿಪಡಿಸಲು ಇಂಥ ಪತ್ರಕರ್ತರು ಮಾಧ್ಯಮಗಳ ಒಳಗಡೆಯೇ ಹೋರಾಟ ನಡೆಸಬೇಕಿದೆ.

ಒಂದು ಸ್ವತಂತ್ರ ಹಾಗೂ ಕಾನೂನಾತ್ಮಕ ಆಧಾರ ಹೊಂದಿದ ಮಾಧ್ಯಮ ಮಂಡಳಿಯನ್ನು ರಚಿಸುವ ದಿಸೆಯಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಬೇಕಾಗಿದೆ. ಈ ಮಂಡಳಿಯು ಒಂದು ಸ್ವಸ್ಥ ಹಾಗೂ ಪಾರದರ್ಶಕ ನಿರ್ದೇಶಕ ಸೂತ್ರಗಳ ಆಧಾರದಲ್ಲಿ ಎಲ್ಲಾ ಬಗೆಯ ಮಾಧ್ಯಮಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ನಡೆಸಬಹುದಾಗಿದೆ.

ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಸೂಚಿ ಮಾಧ್ಯಮಗಳ ಪ್ರಜಾಪ್ರಭುತ್ವೀಕರಣವಾಗಬೇಕು ಎನ್ನುತ್ತದೆ. ಅದು ಸಾಧ್ಯವಾಗಬೇಕಾದರೆ ಮಾಧ್ಯಮಗಳ ಮೇಲೆ ದೊಡ್ಡ ಬಂಡವಾಳಿಗರು ಹೊಂದಿರುವ ನಿಯಂತ್ರಣ ಕೊನೆಗೊಳ್ಳಬೇಕು. ಮಾಧ್ಯಮವು ವಿದೇಶಿ ಬಂಡವಾಳದಿಂದಲೂ ಮುಕ್ತವಾಗಿರುವುದು ಅಗತ್ಯ. ಮಾಧ್ಯಮಗಳ ಅಡ್ಡ-ಮಾಲಿಕತ್ವವನ್ನು ನಿಷೇಧಿಸುವುದು ಕೂಡ ಇದಕ್ಕೆ ಅತ್ಯಗತ್ಯವಾಗುತ್ತದೆ. ಸಾರ್ವಜನಿಕ ಪ್ರಸಾರ ಸೇವೆಯು ಮಾಧ್ಯಮದ ಒಂದು ಪ್ರಮುಖ ಭಾಗವಾಗಬೇಕು.

ಮಾಧ್ಯಮ ಸುಧಾರಣೆಯು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯದ ಒಂದು ಪ್ರಮುಖ ಭಾಗವಾಗಿದೆ.

ಅನು: ವಿಶ್ವ



ಚಿತ್ರಕೃಪೆ: ನ್ಯೂಸ್‌ಲಾಂಡ್ರಿ

ಎಡ ಮತ್ತು ಪ್ರಜಾಸತ್ತಾತ್ಮಕ ಕಾರ್ಯಸೂಚಿ ಮಾಧ್ಯಮಗಳ ಪ್ರಜಾಪ್ರಭುತ್ವೀಕರಣವಾಗಬೇಕು ಎನ್ನುತ್ತದೆ. ಅದು ಸಾಧ್ಯವಾಗಬೇಕಾದರೆ ಮಾಧ್ಯಮಗಳ ಮೇಲೆ ದೊಡ್ಡ ಬಂಡವಾಳಗರು ಹೊಂದಿರುವ ನಿಯಂತ್ರಣ ಕೊನೆಗೊಳ್ಳಬೇಕು. ಮಾಧ್ಯಮವು ವಿದೇಶಿ ಬಂಡವಾಳದಿಂದಲೂ ಮುಕ್ತವಾಗಿರುವುದು ಅಗತ್ಯ.

ಮಾಧ್ಯಮ ದೊರೆಗಳಿಂದ ಮಾಧ್ಯಮಗಳ ವಿಶ್ವಾಸಾರ್ಹತೆಗೆ ಮತ್ತು ಪ್ರಜಾಪ್ರಭುತ್ವಕ್ಕೆ ಕೊಡಲಿಯೇಟು

ಇದನ್ನು ಬಯಲಿಗೆಳೆಯುತ್ತಿರುವ ಕೋಬ್ರಾಪೋಸ್ಟ್ ಪತ್ರಕರ್ತರಿಗೆ ಡಿಯುಜೆ ಅಭಿನಂದನೆ

ದೇಶದ ಕೆಲವು ಅತಿ ದೊಡ್ಡ ಮಾಧ್ಯಮ ಕಾರ್ಪೊರೇಟ್‌ಗಳ ಮೇಲೆ ಕುಟುಕು ಕಾರ್ಯಾಚರಣೆ ನಡೆಸಿ ಅವುಗಳ ನಿಜ ಹೂರಣವನ್ನು ಬಯಲಿಗೆಳೆಯುವ ಧೈರ್ಯ ಪ್ರದರ್ಶಿಸಿರುವ ಕೋಬ್ರಾಪೋಸ್ಟ್ ಪತ್ರಕರ್ತರಿಗೆ, ಮುಖ್ಯವಾಗಿ ಪುಷ್ಪ ಶರ್ಮ ಮತ್ತು ಅನಿರುದ್ಧ ಬೆಹ್ಲ್ ಅವರಿಗೆ ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ) ಅಭಿನಂದನೆ ಸಲ್ಲಿಸಿದೆ. ಇವರು 2019ರ ಚುನಾವಣೆಗಳಿಗೆ ಪೂರ್ವ ಸಿದ್ಧತೆಯಾಗಿ ಹಿಂದುತ್ವ ಅಜೆಂಡಾವನ್ನು ಪ್ರೋತ್ಸಾಹಿಸಲು ಈ ಮಧ್ಯಮ ದೊರೆಗಳು ಪತ್ರಕಾರಿತೆಯ ಮೌಲ್ಯಗಳನ್ನು ಬದಿಗೊತ್ತಿ ಹೇಗೆ ಭಾರೀ ಮೊತ್ತದ ಲಂಚಕ್ಕೆ ಕೈಯೊಡ್ಡಲು ಸಿದ್ಧರಾಗಿದ್ದಾರೆ ಎಂಬುದನ್ನು ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದಾರೆ. ಕೋಬ್ರಾಪೋಸ್ಟ್ ತನಿಖೆ ಮಾಡಿದದವರಲ್ಲಿ ಟಿವಿ ಮತ್ತು ಮುದ್ರಣ ಮಾಧ್ಯಮಗಳ ಭಾರೀ ಕುಳಗಳು, ಪ್ರಾದೇಶಿಕ ಭಾಷೆಗಳ ಮಾಧ್ಯಮಗಳ ಮಾಲಿಕರೂ ಇದ್ದಾರೆ.

ಮಾಧ್ಯಮ ದೊರೆಗಳ ಈ ಹೀನ ಚಾರಿತ್ರ್ಯದ ಬಗ್ಗೆ ಅತೀವ ಕಳವಳವನ್ನು ವ್ಯಕ್ತಪಡಿಸಿರುವ ಡಿಯುಜೆ ಇದು ಮಾಧ್ಯಮಗಳ ವಿಶ್ವಾಸಾರ್ಹತೆಯನ್ನು ಧ್ವಂಸ ಮಾಡಿದೆ, ಮತ್ತು ಪ್ರಜಾಪ್ರಭುತ್ವದ ಬುನಾದಿಗೇ ಏಟು ಕೊಡುವ ಅಪಾಯಕಾರಿ ಪ್ರವೃತ್ತಿಯನ್ನು ಎತ್ತಿ ತೋರುತ್ತದೆ ಎಂದಿದೆ. ಕೆಲವು ರಾಜಕೀಯ ಪಕ್ಷಗಳ ಪರವಾಗಿರುವ ಚಮಚಾ ಬಂಡವಾಳಶಾಹಿಗಳು ಮಾರುಕಟ್ಟೆ ಕುತಂತ್ರಗಳ ಮೂಲಕ ಹಲವು ಚಾನೆಲ್‌ಗಳನ್ನು ಮತ್ತು ಇತರ ಮಾಧ್ಯಮಗಳನ್ನು ಖರೀದಿಸಿ 'ಮಾರಾಟಕ್ಕಿರುವ ಮಾಧ್ಯಮ' ಎಂಬ ಹೊಸ ಪದವೇ ಸೃಷ್ಟಿಯಾಗಿದೆ ಎಂದಿರುವ ಡಿಯುಜೆ ಮಾಧ್ಯಮ ಗುತ್ತೇದಾರಿಗಳು ರಾಜಕೀಯ ಏಕಾಧಿಪತ್ಯಗಳಿಗೆ ಬಾಗಿಲು ತೆರೆದು ಕೊಡುತ್ತಿವೆ ಎಂದು ಅಭಿಪ್ರಾಯ ಪಟ್ಟಿದೆ.

ಒಂದಕ್ಕಿಂತ ಹೆಚ್ಚು ಮಾಧ್ಯಮಗಳಲ್ಲಿ ಮಾಲಕತ್ವದ ಅಪಾಯಗಳ ಬಗ್ಗೆ ತಾವು ಈ ಮೊದಲೇ ಎಚ್ಚರಿಸಿದ್ದೆವು ಎಂದಿರುವ ದಿಲ್ಲಿ ಪತ್ರಕರ್ತರ ಸಂಘ ಈ ಪ್ರಶ್ನೆಯ ಕುರಿತ 'ಟ್ರಾಯ್'(ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ)ದ ಶಿಫಾರಸುಗಳನ್ನು ಜಾರಿ ಮಾಡಿ ಕಾರ್ಪೊರೇಟ್ ಮಾಧ್ಯಮ ಗುಂಪುಗಳ ಶಕ್ತಿ ಮತ್ತು ಹರಹಿನ ಮೇಲೆ ನಿಯಂತ್ರಣ ಹಾಕಬೇಕು ಎಂದು ಆಗ್ರಹಿಸಿದೆ.

ಈ ಕುಟುಕು ಕಾರ್ಯಾಚರಣೆಯಲ್ಲಿ ಬಯಲಾದ ಕೆಲವು ಪತಿಕೆಗಳು ಕಳೆದ ಕೆಲವು ವರ್ಷಗಳಲ್ಲಿ ' ಬಹಳಷ್ಟು ಪತ್ರಕರ್ತರನ್ನು ಕೆಲಸದಿಂದ ತೆಗೆದು ಹಾಕಿವೆ, ಪತ್ರಕರ್ತರು ಮತ್ತು ಪ್ರೆಸ್ ಕಾರ್ಮಿಕರ ವೇತನ ಮಂಡಳಿಯ ಶಿಫಾರಸುಗಳನ್ನು ಪಾಲಿಸಿಲ್ಲ ಮಾತ್ರವೇ ಅಲ್ಲ, ಇನ್ನೂ ಹತ್ತು-ಹಲವು ಕಾರ್ಮಿಕ-ವಿರೋಧಿ ಆಚರಣೆಗಳನ್ನು ನಡೆಸಿವೆ ಎಂಬ ಸಂಗತಿಯತ್ತವೂ ಡಿಯುಜೆ ಗಮನ ಸೆಳೆದಿದೆ.

ಪತ್ರಕರ್ತರಿಗೆ ವೆದರಿಕೆಗಳ ಖಂಡನೆ

ಇದೇ ವೇಳೆಯಲ್ಲಿ ರವೀಶ್ ಕುಮರ್, ರಾನಾ ಅಯ್ಯೂಬ್ ಮುಂತಾದ ನಿರ್ಭೀತ ಪಪತ್ರಕರ್ತರ ಮೇಲೆ ಬೆದರಿಕೆಗಳು ಬರುತ್ತಿರುವುದನ್ನು ದಿಲ್ಲಿ ಪತ್ರಕರ್ತರ ಸಂಘ ಬಲವಾಗಿ ಖಂಡಿಸಿದೆ.

ಒಂದೆಡೆ ಮಾಧ್ಯಮಗಳ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತಿರುವ ಈ ದೊರೆಗಳು ತಮ್ಮ ಪತ್ರಕರ್ತರು ಒಂದು ನಿರ್ದಿಷ್ಟ ಅಜೆಂಡಾಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತಿದ್ದಾರೆ, ತಮ್ಮ ವೃತ್ತಿಧರ್ಮವನ್ನು ಪಾಲಿಸಲು ಮುಂದಾಗುವ ಪತ್ರಕರ್ತರಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ದಾಳಿಗಳು, ಕೊಲೆ ಬೆದರಿಕೆಗಳು ಬಂದಾಗ ಅವರನ್ನು ಸಮರ್ಥಿಸಿಕೊಳ್ಳಲು ಮುಂದೆ ಬರುವುದಿಲ್ಲ, ಫೇಸ್‌ಬುಕ್, ಟ್ವಿಟರ್, ಯು ಟ್ಯೂಬ್ ಮುಂತಾದವುಗಳಲ್ಲಿ ತಮ್ಮ ಪ್ರಭಾವವನ್ನು ಬಳಸಿ ಅವುಗಳ ದುರುಪಯೋಗವನ್ನು ತಡೆಯಲು ಕೂಡ ಪ್ರಯತ್ನಿಸುವುದಿಲ್ಲ ಎಂದೂ ದಿಲ್ಲಿ ಪತ್ರಕರ್ತರ ಸಂಘ ಖೇದ ವ್ಯಕ್ತಪಡಿಸಿದೆ.

ಇಂತಹ ವಾತಾವರಣದಲ್ಲೂ ದೃತಿಗೆಡದೆ ರವೀಶ್ ಕುಮಾರ್, ರಾನಾ ಅಯ್ಯೂಬ್ ಮುಂತಾದವರು ತಮ್ಮ ನಿಂದಕರ ವಿರುದ್ಧ ದೂರುಗಳನ್ನು ದಾಖಲಿಸುವ ಧೈರ್ಯ ತೋರಿಸಿದ್ದಾರೆ ಎಂದು ಡಿಯುಜೆ ಅವರನ್ನು ಅಭಿನಂದಿಸಿದೆ. ಪೋಲೀಸರು ತಕ್ಷಣವೇ ಈ ದೂರುಗಳ ತನಿಖೆ ನಡೆಸಿ ಅತ್ಯಾಚಾರಿಗಳು, ಕೊಲೆಗಡುಕರು ಆಗಬಹುದಾದವರನ್ನು ಪತ್ತೆ ಹಚ್ಚಿ ಶಿಕ್ಷಿಸಬೇಕು ಎಂದು ಆಗ್ರಹಿಸಿದೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ದೃಢ ಕ್ರಮಗಳನ್ನು ಕೈಗೊಳ್ಳದಿದ್ದರೆ ಈ ಪತ್ರಕರ್ತರ ಪ್ರಾಣಕ್ಕೆ ' ಸಂಚಕಾರ ಇದೆ ಎಂದಿರುವ ಡಿಯುಜೆ, ನ್ಯಾಯಾಂಗವೂ ಖುದ್ದಾಗಿ ಇದನ್ನು ಗಮನಕ್ಕೆ ತಗೊಂಡು ಈ ಪತ್ರಕರ್ತರ ರಕ್ಷಣೆಗೆ ಬರಬೇಕು ಎಂದೂ ಕೋರಿದೆ.



ಕೃಪೆ: ಸತೀಶ್ ಆಚಾರ್ಯ

ಹಿಂದುತ್ವ, ಕೋಬ್ರಾಪೋಸ್ಟ್ ಮತ್ತು ಮಾಧ್ಯಮಗಳ "ಸುವರ್ಣ" ಯುಗ

ರಾಷ್ಟ್ರೀಯ ಮತ್ತು ಕರ್ನಾಟಕದ ಮಾಧ್ಯಮಗಳು ಬಿಜೆಪಿಯ ಹಾಗೂ ಹಿಂದುತ್ವದ ಕಾಲಾಳುಗಳಾಗಿರುವುದು ಕಣ್ಣಿದ್ದ ಯಾರಿಗಾದರೂ ಕಾಣುವ ಸತ್ಯ. ಬಿಜೆಪಿ-ಸಂಘ ಪರಿವಾರ ಹಾಗೂ ಅದರ ಕೇಂದ್ರ-ರಾಜ್ಯ ಸರಕಾರಗಳನ್ನು ಸಮರ್ಥಿಸುವುದು, ಎಲ್ಲಾ ವಿರೋಧ ಪಕ್ಷಗಳ ಹಾಗೂ ಸರಕಾರಗಳ ವಿರುದ್ಧ ಅಪಪ್ರಚಾರ ಮಾಡುವುದು ಅವುಗಳ ಕರ್ತವ್ಯ ಎನ್ನುವಷ್ಟು ಮತುವರ್ಜಿಯಿಂದ ಮಾಡುತ್ತಿವೆ. ಇದರ ಹಿಂದೆ ಮಾಧ್ಯಮ ದೊರೆಗಳಿಂದ ಮತ್ತು ಬಿಜೆಪಿಯಿಂದ ಹರಿಯುತ್ತಿರುವ ಭಾರೀ ಹಣದ ಪಾತ್ರ ಸಹ ಈಗ ಸಾರ್ವಜನಿಕ ಗುಟ್ಟು. 'ಅಂಗೈ ಹುಣ್ಣಿಗೆ ಕನ್ನಡಿ' ಬೇಕು ಎನ್ನುವರಿಗೆ ಕೋಬ್ರಾಪೋಸ್ಟ್ ಆಪರೇಶನ್-136 ಅದನ್ನು ಒದಗಿಸಿದೆ. ದೇಶದ 20ಕ್ಕೂ ಹೆಚ್ಚು ಮಾಧ್ಯಮ ಗುಂಪುಗಳ ಹಿಂದುತ್ವ ಅಜೆಂಡಾ ಬಯಲಿಗೆ ಬಂದಿದೆ. ಅದರಲ್ಲಿ ಕರ್ನಾಟಕದ ಬಿಜೆಪಿ ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ನೇತೃತ್ವದ ಏಶ್ಯಾನೆಟ್ ಗುಂಪಿನ ಸುವರ್ಣ ಚಾನೆಲ್ ಮತ್ತು ಕನ್ನಡಪ್ರಭ ಸಹ ಹೆಸರಿಸಲ್ಪಟ್ಟಿವೆ. ಈ ಬಗ್ಗೆ ಮುಂದೆ ಓದಿ.

ಕೆ.ಇ. ಸಿದ್ದಯ್ಯ

ಹಿಂದೂತ್ವ, ರಾಷ್ಟ್ರೀಯತೆ ಮತ್ತು ಕೋಮುವಾದವನ್ನು ವ್ಯವಸ್ಥಿತವಾಗಿ ಹರಡುವ ಹಿನ್ನೆಲೆ ಹೊಂದಿದ್ದ ಮಾಧ್ಯಮಗಳ ಪಿತೂರಿಯನ್ನು ಕೋಬ್ರಾಪೋಸ್ಟ್ ಬಹಿರಂಗಪಡಿಸಿದೆ. ಕೋಬ್ರಾಪೋಸ್ಟ್ ತಾಣ ಮಾಡಿದ ವರದಿಯ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಅಷ್ಟೇ ಅಲ್ಲ ದೇಶಾದ್ಯಂತ ಹೆಸರು ಪಡೆದ ಜಾಲತಾಣಗಳು ಈ ಸುದ್ದಿಯನ್ನು ಪ್ರಕಟಿಸಿವೆ. ಆದರೆ ಬಹುತೇಕ ಮುದ್ರಣ ಮಾಧ್ಯಮಗಳು ಇದರ ಬಗ್ಗೆ ಮೌನ ವಹಿಸಿರುವುದನ್ನು ನಾವು ನೋಡಿದ್ದೇವೆ. ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿರುವ ಯಾವುದೇ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ತಮ್ಮ ಕಾರ್ಯಚಟುವಟಿಕೆಯ ಕುರಿತು ಕೋಬ್ರಾ ಪೋಸ್ಟ್ ಪ್ರಕಟಿಸಿದ ಕಟುಸತ್ಯದ ಸುದ್ದಿಯನ್ನು ಮುಚ್ಚಿಟ್ಟಿವೆ. ದೇಶಬಂಧು ಮತ್ತು ಪಶ್ಚಿಮ ಬಂಗಾಳದ ಮಾಧ್ಯಮಗಳು ಈ ವರದಿಯನ್ನು ಪ್ರಕಟಿಸಿ ಪತ್ರಿಕೋದ್ಯಮದ ವೃತ್ತಿಪರತೆಯನ್ನು ಎತ್ತಿಹಿಡಿಯುವ ಕೆಲಸ ಮಾಡಿವೆ.

ಕೋಬ್ರಾಪೋಸ್ಟ್‌ನ ಮುಖ್ಯ ರೂವಾರಿ ಅನಿರುದ್ಧ ಬೆಹಲ್ ಉರುಫ್ ಆನಂದ್ ಬೆಹಲ್ ಇಂತಹ ಆತಂಕಕಾರಿ ವಿಷಯವನ್ನು ಬಹಿರಂಗಪಡಿಸಿದ್ದಾರೆ. 2017ನೇ ಅಕ್ಟೋಬರ್ ತಿಂಗಳಲ್ಲಿ ಈ ಸ್ಟಿಂಗ್ ಆಪರೇಷನ್ ನಡೆಸಲಾಗಿದೆ. ಆಪರೇಷನ್ 136 ಹೆಸರಿನಲ್ಲಿ ಮಾಧ್ಯಮ ಸಂಸ್ಥೆಗಳ ಧನದಾಹಿತನವನ್ನು ಮತ್ತು ಬಿಜೆಪಿ, ಆರ್‌ಎಸ್‌ಎಸ್ ಪರ ಕೋಮುದ್ವೇಷವನ್ನು ಹೇಗೆ ಹರಡುತ್ತವೆ ಎಂಬುದನ್ನು ಬಯಲಿಗೆ ಎಳೆದಿದ್ದಾರೆ. ಅನಿರುದ್ ಇದೊಂದೇ ಬಾರಿ ಸ್ಟಿಂಗ್ ಆಪರೇಷನ್ ನಡೆಸಿಲ್ಲ. ಬದಲಿಗೆ ಹಲವು ಬಾರಿ ಸ್ಟಿಂಗ್ ಆಪರೇಷನ್ ನಡೆಸಿ ಹಲವು ಹಗರಣಗಳನ್ನು ಬಯಲಿಗೆ ತಂದಿದ್ದಾರೆ.

ದೇಶದ ಪ್ರತಿಷ್ಠಿತ ಮಾಧ್ಯಮ ಸಂಸ್ಥೆಗಳು, ರೇಡಿಯೋ ಕೇಂದ್ರಗಳು ಸೇರಿದಂತೆ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಈ ಸ್ಟಿಂಗ್ ಆಪರೇಷನ್‌ನಲ್ಲಿ ತನ್ನ ಬಣವನ್ನು ಬಯಲು ಮಾಡಿಕೊಂಡಿವೆ. ಕಳೆದ ಶುಕ್ರವಾರ ಈ ಆಪರೇಷನ್ ಸುದ್ದಿಯನ್ನು ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡಲಾಗಿತ್ತು. ಪ್ರಮುಖವಾಗಿ ಇಂಡಿಯಾ ಟುಡೆ, ಟೈಮ್ಸ್ ಆಫ್ ಇಂಡಿಯಾ ಮತ್ತು ದಕ್ಷಿಣದ ಏಷ್ಯನೆಟ್ ಸಂಸ್ಥೆಯ ಸುವರ್ಣ ನ್ಯೂಸ್ ಮತ್ತು ಸೋದರ ಸಂಸ್ಥೆ ಕನ್ನಡ ಪ್ರಭ ಪತ್ರಿಕೆ ಮತ್ತು ಚಾನೆಲ್ ಮುಖ್ಯಸ್ಥರೂ ಈ ವ್ಯವಸ್ಥಿತ ಜಾಲದಲ್ಲಿ ಭಾಗಿಯಾಗಿರುವುದನ್ನು ಕೋಬ್ರಾ ಪೋಸ್ಟ್ ಬಯಲಿಗೆ ಎಳೆದಿದೆ.

ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವ ದಿ ವೈರ್, ಕನ್ನಡದ ಪ್ರಮುಖ ಸುದ್ದಿ ಜಾಲ ದಿ ಸ್ಟೇಟ್ ವೆಬ್ ಸೈಟ್‌ಗಳು ಕೂಡ ತನ್ನ ಪುಟದಲ್ಲಿ ಕೋಬ್ರಾ ಪೋಸ್ಟ್ ಪ್ರಕಟಿಸಿರುವ ಸುದ್ದಿಯನ್ನು ಪ್ರಕಟಿಸಿವೆ. ದೇಶವೇ ಗಮನ ಸೆಳೆಯುವಂತಹ ಈ ಸುದ್ದಿಯನ್ನು ಯಾವ ಪತ್ರಿಕೆಗಳು ಪ್ರಕಟಿಸಲಿಲ್ಲ ಎಂದು ಟ್ವಿಟ್ಟರಿಗರ ಹೇಳಿಕೆಗಳನ್ನು ಉಲ್ಲೇಖಿಸಿ ವಿಶ್ಲೇಷಣಾತ್ಮಕ ಸುದ್ಧಿಗಳನ್ನು ಪ್ರಕಟಿಸಿವೆ.

ದಿ ವೈರ್ ಸುದ್ದಿ ತಾಣದಲ್ಲಿ ಉಲ್ಲೇಖಿಸಿರುವಂತೆ ಕೋಬ್ರಾ ಪೋಸ್ಟ್‌ನ ಪ್ರತಿನಿಧಿ ತನ್ನನ್ನು ಆಚಾರ್ಯ ಅಟಲ್ ಎಂದು ಪರಿಚಯಿಸಿಕೊಂಡು ಸುವರ್ಣ ನ್ಯೂಸ್ ಮತ್ತು ಕನ್ನಡಪ್ರಭಾ ಸಂಸ್ಥೆಗಳ ಜಾಹಿರಾತು ಮಾರುಕಟ್ಟೆ ವಿಭಾಗ ಮತ್ತು ಸಂಪಾದಕೀಯ ವಿಭಾಗವನ್ನು ಭೇಟಿ ಮಾಡುತ್ತಾರೆ. ನಾವು ಭಗವದ್ಗೀತೆ ಕುರಿತು ತಮ್ಮ ಸಂಸ್ಥೆಗಳಲ್ಲಿ ಸುದ್ದಿ ಪ್ರಸಾರ ಮಾಡಬೇಕು. ಜಾಹಿರಾತುಗಳನ್ನು ಪ್ರಕಟಿಸಬೇಕು. ಸಂಪಾದಕೀಯ ವಿಭಾಗ ನಮ್ಮ ಬೆಂಬಲಕ್ಕೆ ಬಂದು ಸುದ್ದಿಯನ್ನು ಪ್ರಕಟಿಸಬೇಕು ಎಂದು ಮನವಿ ಮಾಡುತ್ತಾರೆ. ಆಗ ಸುವರ್ಣ ನ್ಯೂಸ್ ನವರು "ನಾವು ಈಗಾಗಲೇ ಬಿಜೆಪಿ ಪರವಾಗಿ ಸುದ್ದಿಗಳನ್ನು ಮಾಡುತ್ತಿದ್ದೇವೆ"ಎಂದು ಹೇಳುತ್ತಾರೆ. ಜಾಹಿರಾತು ಮಾರುಕಟ್ಟೆ ವಿಭಾಗದ ಹಿರಿಯ ವ್ಯವಸ್ಥಾಪಕ ಪ್ರದೀಪ್ ಗೌಡ "ನಮ್ಮ ಮಾಲಿಕರು ಹಿಂದೂತ್ವ ಪ್ರತಿಪಾದಕರು. ಅವರ ಮಾಲಿಕತ್ವದ ಏಷ್ಯಾನೆಟ್ ಸಂಸ್ಥೆಯಡಿ ನಡೆಯುತ್ತಿರುವ ಸುವರ್ಣ ನ್ಯೂಸ್‌ನಲ್ಲಿ ದೊಡ್ಡ ಮಟ್ಟದಲ್ಲಿ ಮೋದಿ ಪರ ಸುದ್ದಿ ಪ್ರಚಾರ ಮಾಡುತ್ತಿದ್ದೇವೆ" ಎಂದು ವಿವರಿಸುತ್ತಾರೆ.

ಇದಕ್ಕೆ ಜಾಹಿರಾತು ವಿಭಾಗದ ಹಿರಿಯ ಉಪಾಧ್ಯಕ್ಷ ಎಸ್ ಅನಿಲ್, ಬಂದಿದ್ದ ಅನಿರುದ್ ಗೆ ಹೇಳುತ್ತಾರೆ. "ಕನ್ನಡ ಪ್ರಭ ಸಂಪಾದಕರಾದ ರವಿ ಹೆಗಡೆಯವರು ಕೂಡ ಬಿಜೆಪಿ ಬೆಂಬಲಿಗರು. ಹೀಗಾಗಿ ಸಂಪಾದಕೀಯ ಬೆಂಬಲವನ್ನು ಪಡೆಯಬಹುದು. ಹೀಗಾಗಿ ಅವರನ್ನು ಕೇಳಿ. ಕ್ಯಾಂಪೇನ್ ಸ್ಟೋರಿ ಮಾಡಲು ಎಂದು ಅನಿಲ್ ಹೇಳುತ್ತಾರೆ" ಎಂದು ದಿ ವೈರ್ ಸುದ್ದಿ ಪ್ರಕಟಿಸಿದೆ. ಸಂಪಾದಕೀಯ ವಿಭಾಗ ಮತ್ತು ಜಾಹಿರಾತು ವಿಭಾಗ ಏನು ಮಾಡುತ್ತವೆ. ಪತ್ರಿಕೋದ್ಯಮದ ವೃತ್ತಿಪರತೆಯನ್ನು ಹೇಗೆ ಗಾಳಿಗೆ ತೂರಲಾಗುತ್ತದೆ. ಜಾಹಿರಾತು ವಿಭಾಗ ಸಂಪಾದಕೀಯ ವಿಭಾಗದ ಮೇಲೆ ಯಾವ ರೀತಿ ಪ್ರಭಾವವನ್ನು ಬೀರುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಮೀಡಿಯಾಗಳು ರಾಜಕಾರಣಿಗಳ ಕೈಗೆ ಸಿಕ್ಕಿದರೆ ಅಥವಾ ರಾಜಕಾರಣಿಗಳು ಮಾಲಿಕರಾಗಿರುವ ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಹೇಗೆ ಒಂದು ಪಕ್ಷದ ಪರ ಹಾಗೂ ಹಿಂದೂತ್ವವನ್ನು ಹರಡಲು ಮಾಧ್ಯಮವನ್ನು ಬಳಸಿಕೊಳ್ಳುತ್ತವೆ ಎಂಬುದಕ್ಕೆ ಇದು ನಿದರ್ಶನವಾಗಿದೆ.

ಬಹುತೇಕ ಪತ್ರಿಕೆಗಳು ಮತ್ತು ಟಿವಿ ಮಾಧ್ಯಮಗಳು ಹಣ ಮಾಡಲು ಯಾವೆಲ್ಲ ತಂತ್ರಗಳನ್ನು ಅನುಸರಿಸುತ್ತವೆ. ಎಷ್ಟು ಕೀಳುಮಟ್ಟಕ್ಕೆ ಇಳಿಯುತ್ತವೆ ಎಂಬುದು ಮಾಧ್ಯಮಲೋಕಕ್ಕೆ ಹಿಡಿದ ಕನ್ನಡಿಯಾಗಿದೆ. ಬಿಜೆಪಿ ಮತ್ತು ಸಂಘ ಪರಿವಾರದ ಪರ ಸುದ್ದಿಗಳನ್ನು ಬಿತ್ತರಿಸಿ ಸುಳ್ಳುಸುಳ್ಳನ್ನೇ ಪ್ರಚಾರ ಮಾಡುವುದಕ್ಕೆ ಮುಂದಾಗಿರುವುದು ಇದರಿಂದ ತಿಳಿದುಬರುತ್ತದೆ. ಕನ್ನಡ ಪ್ರಭದ ಹಿರಿಯ ಅಧಿಕಾರಿ ನಾಗರಾಜ್ ಆಚಾರ್ಯ ಅಟಲ್ ಅವರಿಗೆ "ನೀವು ಸುದ್ದಿ ಕೊಡುವುದಕ್ಕಿಂತ ಜಾಹಿರಾತು ಮಾದರಿಯ ಸುದ್ದಿಗಳನ್ನು ಕೊಡುವುದು ಹೆಚ್ಚು ಅನುಕೂಲ. ಇದರಿಂದ ಹೆಚ್ಚು ಓದುಗರನ್ನು ತಲುಪಲು ಸಾಧ್ಯವಾಗುತ್ತದೆ" ಎಂದು ಹೇಳುತ್ತಾರೆ.

ಹಿಂದೂತ್ವ ಹರಡಲು ಜಾಹಿರಾತು/ಸುದ್ದಿ ಕೊಟ್ಟರೆ ನಿಮ್ಮ ಐಡಿಯಾಲಜಿ ಪ್ರಚಾರ ಮಾಡಲು ಅನುಕೂಲವಾಗುತ್ತದೆ. ಪತ್ರಿಕೆಗಳಲ್ಲಿ ಸುದ್ದಿ ಬರವುದರಿಂದ ಓದುಗರನ್ನು ಸುಲಭವಾಗಿ ತಲುಪಲು ಸಾಧ್ಯವಾಗುತ್ತದೆ. ಆಸಕ್ತಿದಾಯಕ ಅಂಶವೆಂದರೆ ಕರ್ಕೇರ ಎಂಬುವರು ಸುದ್ಧಿ ಪ್ರಕಟಿಸಲು ಒಪ್ಪಿಕೊಳ್ಳುತ್ತಾರೆ. ಈ ಮಾತುಗಳು ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯ ಕುರಿತಾಗಿರುತ್ತವೆ ಎಂಬುದನ್ನು ದಿ ವೈರ್ ಪ್ರಕಟಿಸುತ್ತದೆ.

ರಾಜೀವ್ ಚಂದ್ರಶೇಖರ್ ಸುವರ್ಣ ನ್ಯೂಸ್ ಮತ್ತು ಕನ್ನಡ ಪ್ರಭ ಮಾಲಿಕರಾಗಿರುವಂತೆಯೇ ಎರಡು ರೇಡಿಯೋಗಳ ಮಾಲಿಕರೂ ಆಗಿದ್ದಾರೆ ಎಂಬುದು ಕೋಬ್ರಾಪೋಸ್ಟ್ ನಡೆಸಿದ ಸ್ಟಿಂಗ್ ಆಪರೇಷನ್‌ನಿಂದ ತಿಳಿದುಬರುತ್ತದೆ. ಅಲ್ಲಿಗೂ ಆಚಾರ್ಯ ಅಟಲ್ ಭೇಟಿ ಕೊಟ್ಟು ಸ್ಟಿಂಗ್ ಮಾಡುತ್ತಾರೆ. ಕಾಂಗ್ರೆಸ್ ವಿರುದ್ಧ ಮತ್ತು ಬಿಜೆಪಿ ಪರ ಸುದ್ದಿ ಪ್ರಕಟಿಸುವುದಾಗಿ ರೇಡಿಯೋ ನಡೆಸುವ ಸಿಬ್ಬಂದಿ ಒಪ್ಪಿಕೊಳ್ಳುತ್ತಾರೆ. ಇದು ಕೂಡ ರಾಜೀವ್ ಚಂದ್ರಶೇಖರ್ ಒಡತನಕ್ಕೆ ಸೇರಿದ ಸಂಸ್ಥೆಯಾಗಿದೆ. ಬಿಜೆಪಿ ಪರ ಕೆಲಸ ಮಾಡುತ್ತೇವೆ. ಮೀಡಿಯಾ ಸಂಸ್ಥೆಗಳಲ್ಲಿ ಬಹಳಷ್ಟು ಮಂದಿ ಬಿಜೆಪಿ ಮತ್ತು ಸಂಘಪರಿವಾದ ಪರವಾಗಿರುವವರು ಸಕ್ರಿಯವಾಗಿ ಕೆಲಸ ಮಾಡುತ್ತಾರೆ. ಹಿಂದೆ ನಮ್ಮ ಮಾಲಿಕರು ಸ್ವತಂತ್ರ ಅಭ್ಯರ್ಥಿಯಾಗಿದ್ದರು. ಈಗ ಅವರು ಕೇರಳ ಘಟಕದ ಬಿಜೆಪಿ ಅಧ್ಯಕ್ಷರಾಗಿದ್ದಾರೆ ಎಂಬ ಮಾಹಿತಿಯನ್ನು ಕೋಬ್ರಾ ಪೋಸ್ಟ್ ಬಹಿರಂಗಪಡಿಸುತ್ತದೆ.

ಏಶ್ಯಾನೆಟ್ ಕೋಬ್ರಾಪೋಸ್ಟ್ ಬಗ್ಗೆ ಪ್ರತಿಕ್ರಿಯಿಸಿ ತನ್ನದೇ ಆದ ಸಮಜಾಯಿಷಿ ನೀಡಿದೆ. ಕನ್ನಡ ಪ್ರಭ ಮತ್ತು ಸುವರ್ಣ ನ್ಯೂಸ್ ಕುರಿತು ಸ್ಟಿಂಗ್ ಮಾಡಿರುವ ಬಗ್ಗೆ ಎಎನ್‌ಎನ್‌ಪಿಎಲ್ ನ್ಯೂಸ್ ಹೆಡ್ ಅಜಿತ್ ಹನುಮಕ್ಕನವರ್, ವಿಜಯಲಕ್ಷ್ಮಿ ಶಿಬಿರೂರ್, ಅನಿಲ್ ಸುರೇಂದ್ರ ಪೊಲೀಸರಿಗೆ ಆಗಲೇ ದೂರು ನೀಡಿದ್ದಾರೆ ಎಂದಿದೆ. ಈ ಬಗ್ಗೆ ತನ್ನ ಪ್ರತಿಕೆಯಲ್ಲಿ ಒಬ್ಬ ಯು.ಪಿ.ಯ ಸ್ವಾಮಿ ಬಿಜೆಪಿ ಪರ ಸುದ್ದಿ ಹಾಕಿದರೆ ಜಾಹೀರಾತು ಕೊಡುವುದಾಗಿ ಹೇಳಿಕೊಂಡು ಮಾಧ್ಯಮ ಕಚೇರಿಗಳಿಗೆ ಭೇಟಿ ನೀಡಿದ್ದಾನೆ ಎಂದು ವರದಿ ಸಹ ಪ್ರಕಟಿಸಿದೆ ಎಂದು ಹೇಳಿದೆ. ಆ ವ್ಯಕ್ತಿ ಬಗ್ಗೆ ತಾವೇ ಸ್ಟಿಂಗ್ ಮಾಡಲು ಕ್ರಮ ಕೈಗೊಂಡಿದ್ದಾಗಿ ಹೇಳಿದೆ. ಆದರೆ ಈ ಪ್ರತಿಕ್ರಿಯೆಯಲ್ಲಿ ಕೋಬ್ರಾಪೋಸ್ಟ್ ವಿಡಿಯೊದಲ್ಲಿ ಇದೆ ಎಂದು ದಿ ವೈರ್ ವರದಿ ಮಾಡಿದ್ದು ತಮ್ಮ ಹೇಳಿಕೆ ಅಲ್ಲ ಎಂದು ಹೇಳಿಲ್ಲ. ಅದನ್ನು ಸಂದರ್ಭದಿಂದ ಪ್ರತ್ಯೇಕಿಸಿ ತಿರುಚಲಾಗಿದೆ ಎಂದಷ್ಟೇ ಹೇಳಿದೆ. ಕೃಷ್ಣ ಮತ್ತು ಭಗವದ್ಗೀತೆ ಬಗ್ಗೆ ಜಾಹೀರಾತು ಬಗ್ಗೆ ಮಾತ್ರ ಮಾತುಕತೆ ನಡೆದಿದ್ದು ಎಂದಿದೆ. ಅಷ್ಟು ಮಾತ್ರವೇ ನಡೆದಿದ್ದರೆ, ಬಿಜೆಪಿಯ ಒಳ ಸಮಸ್ಯೆಗಳು, 'ಹಿಂದುತ್ವ', 'ನಮ್ಮ ಮಾಲಿಕರೂ ಬಿಜೆಪಿ-ಹಿಂದುತ್ವ ಪರ' ಎಂಬ ಸಂಭಾಷಣೆಗಳು ಯಾಕೆ ಬರಬೇಕು ಎಂಬುದನ್ನು ಸ್ಪಷ್ಟೀಕರಿಸಿಲ್ಲ. 'ಯು.ಪಿ.ಯ ಸ್ವಾಮಿ' ಬಗ್ಗೆ ಮಾಡಿದ ಸ್ಟಿಂಗ್ ಯಾಕೆ ಪ್ರಕಟಿಸಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕೊಬ್ರಾಪೋಸ್ಟಿನಿಂದ ಬಯಲಾದ ಇತರ ಮಾಧ್ಯಮ ಗುಂಪುಗಳು ಸಹ ಸರಿ ಸುಮಾರು ಇದೇ 'ಸಮರ್ಥನೆ'ಯ (ಕೌಂಟರ್ ಸ್ಟಿಂಗ್ ಇತ್ಯಾದಿ) ಕತೆ ಹೇಳುತ್ತಿರುವುದು ಕಾಕತಾಳೀಯವೇನಲ್ಲ. ಏಶ್ಯಾನೆಟ್ ಸೇರಿದಂತೆ ಇತರ ಮಾಧ್ಯಮ ಗುಂಪುಗಳೂ ಕೋಬ್ರಾಪೋಸ್ಟಿನ ವಿಡಿಯೊಗಳನ್ನು ಯೂ ಟ್ಯೂಬಿನಿಂದ ತೆಗೆಯಲು ಕೋರ್ಟಿನ ಮೊರೆ ಹೋಗಿವೆ. ಆದರೆ ಜನತೆಗೆ ಒಪ್ಪಿಕೊಳ್ಳಬಹುದಾದ ಯಾವುದೇ ಸಮಜಾಯಿಷಿ ನೀಡಿಲ್ಲ.

ಕೋಬ್ರಾ ಪೋಸ್ಟ್ ಕಳೆದ 15 ವರ್ಷದಿಂದ ಸಕ್ರಿಯವಾಗಿದ್ದು ಹಲವು ಸ್ಟಿಂಗ್ ಆಪರೇಷನ್‌ಗಳನ್ನು ಮಾಡಿದೆ. ಅವುಗಳಲ್ಲಿ ಮೊದಲನೆಯದು ಆಪರೇಷನ್ ದುರ್ಯೋಧನ ಕಾಸಿಗಾಗಿ ಸುದ್ದಿ ಹಗರಣ, ಆಪರೇಷನ್ ಕಳಂಕ್ ಗ್ರೋಧ್ರ ಗಲಭೆಯಲ್ಲಿ ವಿಎಚ್‌ಪಿ ಮುಖಂಡರು ಭಾಗಿಯಾಗಿರುವುದು ಮತ್ತು ಬ್ಯಾಂಕ್ ಹಗರಣ, ಗುಜರಾತ್‌ನಲ್ಲಿ ಕಣ್ಗಾವಲು ಸಮಿತಿಗಳನ್ನು ನೇಮಿಸಿದ್ದು ಇದಕ್ಕೆ ಅಂದಿನ ಮುಖ್ಯಮಂತ್ರಿ ನರೇಂದ್ರ ಮೋದಿ ಕಾರಣ ಎಂಬುದನ್ನು ಅನಿರುದ್ ಬಹಿರಂಗಪಡಿಸಿದ್ದಾರೆ. ಹೀಗೆ ಮಹತ್ವದ ಸ್ಟಿಂಗ್ ಆಪರೇಷನ್ ಮಾಡಿದ್ದು ಕೋಬ್ರಾ ಪೋಸ್ಟ್ ಮಾಧ್ಯಮಗಳ ಹಿಂದೂತ್ವದ ಪರ ನಿಲುವು ಹೊಂದಿರುವುದನ್ನು ಬಹಿರಂಗಪಡಿಸಿರುವುದು ದೇಶಾದ್ಯಂತ ಚರ್ಚೆಗೆ ಗ್ರಾಸ ಮಾಡಿಕೊಟ್ಟಿದೆ. ●





ಮೇ 26ರಂದು ಕೇಂದ್ರದ ಎನ್‌ಡಿಎ ಸರಕಾರದ ನಾಲ್ಕನೇ ವಾರ್ಷಿಕೋತ್ಸವ ಅದ್ದೂರಿಯಿಂದ ಆರಂಭವಾಗಿದೆ. ಪತ್ರಿಕೆಗಳ ಮುಖಪುಟಗಳಲ್ಲಿ ನಾಲ್ಕು ವರ್ಷಗಳ ಸಾಧನೆಗಳನ್ನು ಪ್ರಶಂಸಿಸಿಕೊಳ್ಳುವ ಪೂರ್ಣ ಪುಟದ ಜಾಹೀರಾತುಗಳು ಪ್ರಕಟವಾಗಿವೆ. ಮೇ 29ರಂದು ಮುದ್ರಾ ಯೋಜನೆಯ 'ಯಶೋಗಾಥೆ'ಯ ಬಗ್ಗೆ ಪ್ರಧಾನಿಗಳ ವೀಡಿಯೋ ಸಂವಾದ ನಡೆದಿದೆ. ಈ ಎಲ್ಲದದರ ಮೂಲಕ ಹರಿಯ ಬಿಡುತ್ತಿರುವ ಅಂಕಿ-ಅಂಶಗಳಲ್ಲಿ ಸತ್ಯಾಂಶಗಳೆಷ್ಟು?

ಕಳೆದ ಸಂಚಿಕೆಯಲ್ಲಿ, ವಾಸ್ತವವಾಗಿ ಈ ನಾಲ್ಕು ವರ್ಷಗಳಲ್ಲಿ ಈ ಸರಕಾರ ಮಾಡಿದ್ದೇನು ಎಂಬುದನ್ನು ಸೀತಾರಾಮ್ ಯೆಚುರಿಯವರ ಲೇಖನ ತೆರೆದಿಟ್ಟಿತ್ತು. ಇಲ್ಲಿ ಈ ಸರಕಾರದ ಎರಡು ಪ್ರಮುಖ ಆರ್ಥಿಕ ಕ್ರಮಗಳು- ಜನ-ಧನ ಮತ್ತು ಮುದ್ರಾ-'ಯೋಜನೆ'ಗಳು ನವ-ಉದಾರವಾದವನ್ನು ಅಪ್ಪಿಕೊಂಡಿರುವವರ ನಿಜಸ್ವರೂಪವನ್ನು ಮರೆಮಾಚುವ ತೇಪೆ ಯೋಜನೆಗಳು ಎಂಬುದನ್ನು ಪರಿಶೀಲಿಸಲಾಗಿದೆ. ಮುಂದಿನ ಸಂಚಿಕೆಗಳಲ್ಲಿ ಇಂತಹ ಇತರ 'ಸಾಧನೆ'ಗಳ ವಿಶ್ಲೇಷಣೆಗಳು

ನಾಲ್ಕು ವರ್ಷಗಳ ಸಾಧನೆ-ಬರೀ ಓಳು



ವ್ಯಂಗ್ಯಚಿತ್ರ, ಮಂಜುಲ್

48% ಖಾತೆದಾರರ 'ಭಾಗ್ಯವಿಧಾತ'ನಾಗದ 'ಜನ-ಧನ' ಯೋಜನೆ

'ಮೇರಾ ಖಾತಾ, ಭಾಗ್ಯವಿಧಾತ' ಎನ್ನುವ ಈ ಯೋಜನೆಯಿಂದಾಗಿ ದೇಶದ 80% ವಯಸ್ಕರು ಈಗ ಬ್ಯಾಂಕ್ ಖಾತೆ ಹೊಂದಿದ್ದಾರೆ ಎಂಬ ವಿಶ್ವಬ್ಯಾಂಕಿನ ಸರ್ಟಿಫಿಕೇಟನ್ನು ಈ ಸರಕಾರ ಪ್ರದರ್ಶಿಸುತ್ತಿದೆ. ಆದರೆ ಅದೇ ವಿಶ್ವಬ್ಯಾಂಕ್‌ನ ಇತ್ತೀಚಿನ ಒಂದು ಸರ್ವೆಯ ಪ್ರಕಾರ ಹೀಗೆ ತೆರೆದಿರುವ ಖಾತೆಗಳಲ್ಲಿ 48% ದಷ್ಟನ್ನು ಖಾತೆದಾರರು ಬಳಸುತ್ತಲೇ ಇಲ್ಲ ಇದು ಜಗತ್ತಿನಲ್ಲೆ ದಾಖಲೆ ಪ್ರಮಾಣ, ಇತರ ಅಭಿವೃದ್ಧಿಶೀಲ ಆರ್ಥಿಕಗಳಿಗೆ ಹೋಲಿಸಿದರೂ-ಸುಮಾರು ದುಪ್ಪಟ್ಟು. ಈ ದಾಖಲೆ ಪ್ರಮಾಣಕ್ಕೆ ಮೋದಿ ಸರಕಾರದ ಧೋರಣೆಗಳನ್ನು ದೂಷಿಸಬೇಕಾಗಿದೆ ಎಂದೂ ಹೇಳಿದೆ!

ಪ್ರಧಾನ ಮಂತ್ರಿ ಜನ-ಧನ ಯೋಜನೆ (ಪಿಎಂಜೆಡಿವೈ) ಮೋದಿ ಬಾವುಟವನ್ನು ಎತ್ತಿ ತೋರುವ ಯೋಜನೆ, ಅಂದರೆ ಅವರ ಸರಕಾರದ ಮಹಾಸಾಧನೆಗಳಲ್ಲಿ ಒಂದು ಎಂದು ಹೇಳಿಕೊಳ್ಳಲಾಗುತ್ತಿದೆ. 'ಮೇರಾ ಖಾತಾ, ಭಾಗ್ಯವಿಧಾತ' ಎನ್ನುವುದು ಇದರ ಘೋಷವಾಕ್ಯ. ಇದು ಎಷ್ಟು ನಿಜ? ನೋಡೋಣ.

ಈ ಸರಕಾರ ಬಂದ ಮೂರೇ ತಿಂಗಳೊಳಗೆ, ಅಂದರೆ ಆಗಸ್ಟ್ 2014ರಲ್ಲಿ ಆರಂಭಿಸಲಾದ ಈ ಯೋಜನೆ 'ಪ್ರತಿಯೊಂದು ಕಣ್ಣಿನಿಂದ ಪ್ರತಿಯೊಂದು ಕಣ್ಣೀರನ್ನು ಒರೆಸಬಲ್ಲದು' ಎಂದು 2015ರ ಆರ್ಥಿಕ ಸರ್ವೇಕ್ಷಣೆ ಹೇಳಿಕೊಂಡಿತ್ತು. ಮೇ 27, 2018 ರ ವರೆಗೆ 31.6 ಕೋಟಿ ಖಾತೆಗಳನ್ನು ತೆರೆಯಲಾಗಿದೆ, ಇದರಲ್ಲಿ ಒಟ್ಟು 81,203.59 ಕೋಟಿ ರೂ.ಗಳಿವೆ ಎಂದು ಹೇಳಲಾಗಿದೆ.

ಈ ಯೋಜನೆಯಿಂದಾಗಿ ದೇಶದ 80% ವಯಸ್ಕರು ಈಗ ಬ್ಯಾಂಕ್ ಖಾತೆ ಹೊಂದಿದ್ದಾರೆ ಎಂದು ಸ್ವತಃ ವಿಶ್ವಬ್ಯಾಂಕಿನ ಜಾಗತಿಕ ಹಣಕಾಸು ಸೂಚ್ಯಂಕ(ಗ್ಲೋಬಲ್ ಫಿಂಡೆಕ್ಸ್) ಸರ್ಟಿಫಿಕೇಟ್ ನೀಡಿದೆ, ದೇಶದ ಹಣಕಾಸು ವ್ಯವಹಾರಗಳಲ್ಲಿ ಅವರನ್ನು ಒಳಗೊಳ್ಳುವಲ್ಲಿ ಈ ಸರಕಾರ ಯಶಸ್ವಿಯಾಗಿದೆ ಎಂಬುದಕ್ಕೆ ಇದೇ ಸಾಕ್ಷಿ ಎಂದು ಸರಕಾರದ ಮತ್ತು ಆಳುವ ಪಕ್ಷದ ಮುಖಂಡರು ಹೇಳಿಕೊಳ್ಳುತ್ತಿದ್ದಾರೆ.

ಆದರೆ ಅದೇ ವಿಶ್ವಬ್ಯಾಂಕ್ ಇತ್ತೀಚೆಗೆ ತನ್ನ ಒಂದು ಸರ್ವೆಯ ಫಲಿತಾಂಶಗಳನ್ನು ಬಿಡುಗಡೆ ಮಾಡಿದೆ. ಅದರ ಪ್ರಕಾರ ಹೀಗೆ ತೆರೆದಿರುವ ಖಾತೆಗಳಲ್ಲಿ 48% ದಷ್ಟನ್ನು ಖಾತೆದಾರರು ಬಳಸುತ್ತಲೇ ಇಲ್ಲ. ಇದು ಜಗತ್ತಿನಲ್ಲೆ ದಾಖಲೆ ಪ್ರಮಾಣ, ಇತರ ಅಭಿವೃದ್ಧಿಶೀಲ ಆರ್ಥಿಕಗಳಿಗೆ ಹೋಲಿಸಿದರೂ-ಸುಮಾರು ದುಪ್ಪಟ್ಟು. ಇತರ ಅಭಿವೃದ್ಧಿಶೀಲ ದೇಶಗಳಲ್ಲಿ ಬಳಕೆಯಲ್ಲಿಲ್ಲದ ಬ್ಯಾಂಕ್ ಖಾತೆಗಳ ಸರಾಸರಿ ಪ್ರಮಾಣ 25% ದಷ್ಟು. ಈ ದಾಖಲೆ ಪ್ರಮಾಣಕ್ಕೆ ಮೋದಿ ಸರಕಾರದ 'ಧೋರಣೆಗಳನ್ನು ದೂಷಿಸಬೇಕಾಗಿದೆ ಎಂದೂ ವಿಶ್ವಬ್ಯಾಂಕ್‌ನ ಈ ಸರ್ವೆ ನಿರ್ದಿಷ್ಟವಾಗಿ ಟಿಪ್ಪಣಿ ಮಾಡಿದೆ(ರಾಜೀವ ಷಾ, ಕೌಂಟರವ್ಯೂ.ನೆಟ್, ಮೇ 25).

ನಾಲ್ಕು ವರ್ಷಗಳಲ್ಲಿ 310 ಮಿಲಿಯ(ಅಂದರೆ 31 ಕೋಟಿ) ಭಾರತೀಯರನ್ನು ಬ್ಯಾಂಕಿಂಗ್ ವ್ಯವಸ್ಥೆಯೊಳಕ್ಕೆ ತಂದಿದ್ದಾರೆ, ಆದರೆ ಅವರಲ್ಲಿ ಹೆಚ್ಚಿನವರಿಗೆ ತಮ್ಮ ಹೊಸ ಖಾತೆಯನ್ನು ಬಳಸಲು ಇದುವರೆಗೆ ಅವಕಾಶವೇ ಸಿಕ್ಕಿಲ್ಲ ಎಂದು ವಿಶ್ವಬ್ಯಾಂಕ್ ಪರವಾಗಿ ಈ ಸರ್ವೆ ನಡೆಸಿರುವವರು ಟಿಪ್ಪಣಿ ಮಾಡಿದ್ದಾರಂತೆ.

ಬ್ಯಾಂಕ್ ಖಾತೆಗಳು ಮತ್ತು ಹಣಕಾಸು ಒಳಗೊಳ್ಳುವಿಕೆ

ಇದು ಹಣಕಾಸು ವ್ಯವಹಾರಗಳಲ್ಲಿ ಎಲ್ಲರನ್ನೂ ಒಳಗೊಳ್ಳುವುದು ಎಂದರೇನು? ಬಾಂಕ್ ಖಾತೆಗಳನ್ನು ತೆರೆದರಷ್ಟೇ ಸಾಕೇ ಎಂಬ ಮೂಲಭೂತ ಪ್ರಶ್ನೆಯತ್ತ ನಮ್ಮನ್ನು ಒಯ್ಯುತ್ತದೆ.

ಮೇ 29ರ 'ದಿ ಹಿಂದೂ' ನಲ್ಲಿ ಪ್ರಕಟವಾಗಿರುವ ದಿಲ್ಲಿಯ ಅಂಬೇಡ್ಕರ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ದೀಪಾ ಸಿನ್ಹ ಮತ್ತು ಜೆಎನ್‌ಯು ಪ್ರಾಧ್ಯಾಪಕ ರೋಹಿತ್ ಆಝಾದ್‌ರವರ ಲೇಖನ ಈ ಪ್ರಶ್ನೆಯನ್ನು ವಿಶ್ಲೇಷಿಸಿದೆ.

ನಿಜ, ಹಣಕಾಸು ಒಳಗೊಳ್ಳುವಿಕೆ ಬ್ಯಾಂಕ್ ಖಾತೆ ಹೊಂದುವುದರಿಂದ ಆರಂಭವಾಗುತ್ತದೆ. ಆದರೆ ಖಾತೆ ತೆರೆಯುವುದಷ್ಟೇ ಒಳಗೊಳ್ಳುವಿಕೆಯಾಗುವುದಿಲ್ಲ. ಅದನ್ನು ಬಳಸಲು ಶಕ್ತರಾಗುವುದೇ ಅದರ ನಿಜವಾದ ಪರೀಕ್ಷೆ. ಖಾತೆದಾರರು ತಮ್ಮ ಖಾತೆಯ ಮೂಲಕ ಸುಲಭ ಬಡ್ಡಿದರಗಳಲ್ಲಿ ಸಾಲ ಪಡೆಯುವುದು, ಲೇವಾದೇವಿಗಾರರ ಮೇಲಿನ ಅವಲಂಬನೆ ಇಲ್ಲವಾಗುವುದು, ಉಳಿತಾಯ ಮಾಡುವುದು ಸಾಧ್ಯವಾಗದಿದ್ದರೆ ಖಾತೆ ಹೊಂದುವುದಕ್ಕೆ ಅರ್ಥವಿರುವುದಿಲ್ಲ.


ಬಡ ವಿಭಾಗಗಳಿಗೆ ಸಾಂಸ್ಥಿಕ ಸಾಲ-ಲಭ್ಯತೆ ಹೆಚ್ಚಿದೆಯೇ?

ಬ್ಯಾಂಕುಗಳ ಠೇವಣಿ-ಸಾಲ ಅನುಪಾತ ಇದನ್ನು ತೋರಿಸುವ ಒಂದು ಅಂಶ ಎನ್ನುತ್ತಾರೆ ಈ ವಿಶ್ಲೇಷಕರು. ಪ್ರತಿ 100ರೂ. ಠೇವಣಿಗೆ ಎಷ್ಟು ಪ್ರಮಾಣದಲ್ಲಿ ಸಾಲ ನೀಡಲಾಗಿದೆ ಎಂಬುದನ್ನು ಈ ಅನುಪಾತ ತೋರಿಸುತ್ತದೆ. ರಿಝರ್ವ್ ಬ್ಯಾಂಕ್ ಈ ಅಂಕಿ-ಅಂಶಗಳನ್ನು ಗ್ರಾಮೀಣ, ಅರೆ-ಪಟ್ಟಣ ಪ್ರದೇಶ, ನಗರಪ್ರದೇಶಗಳು ಮತ್ತು ಮಹಾನಗರಗಳಿಗೆ ಪ್ರತ್ಯೇಕವಾಗಿ ಪ್ರಕಟಿಸುತ್ತದೆ. ಮೊದಲೆರಡು, ಅಂದರೆ ಗ್ರಾಮಿಣ ಹಾಗೂ ಅರೆ-ಪಟ್ಟಣ ಪ್ರದೇಶಗಳಲ್ಲಿ ಠೇವಣಿ-ಸಾಲ ಅನುಪಾತ ಸಮಾಜದ ಬಡ ವಿಭಾಗಗಳಿಗೆ ಈ ಖಾತೆಗಳಿಂದ ಎಷ್ಟು ಸಾಲ ಪಡೆಯಲು ಸಾಧ್ಯವಾಗಿದೆ ಎಂಬುದರ ಒಂದು ಸೂಚನೆಯನ್ನು ಕೊಡುತ್ತದೆ ಎನ್ನುತ್ತಾರೆ ದೀಪಾ ಸಿನ್ಹ ಮತ್ತು ರೋಹಿತ್ ಆಝಾದ್.

ಈ ಅನುಪಾತ ಗ್ರಾಮೀಣ ಪ್ರದೇಶದಲ್ಲಿ 1999ರಲ್ಲಿ 41% ಇತ್ತು, 2016ರಲ್ಲಿ 66.9% ಆಗಿದೆ. ಆದರೆ ಗಮನಿಸಬೇಕಾದ ಸಂಗತಿಯೆಂದರೆ ಈ ಹೆಚ್ಚಳ ಬಹಳಷ್ಟು ಆಗಿರುವುದು 2004ರಿಂದ 2009ರ ನಡುವೆ, ಅಂದರೆ ಯುಪಿಎ-1 ಸರಕಾರದ ಅವಧಿಯಲ್ಲಿ. ಅದು 43.6%ದಿಂದ 57.1% ಕ್ಕೆ ಏರಿತು. (ಯುಪಿಎ-1 ಎಡಪಕ್ಷಗಳ ಬೆಂಬಲಿತ ಸರಕಾರ ಎಂಬುದು ಇಲ್ಲಿ ಕಾಕತಾಳೀಯವೇನಲ್ಲ). 2009ರಿಂದ 2014ರ ನಡುವೆ ಅಷ್ಟೇನೂ ಏರಿಕೆ ಆಗಿಲ್ಲ. 2014ರ ನಂತರವಂತೂ ಏನೇನೂ ಏರಿಕೆ ಆಗಿಲ್ಲ. ಅರೆ-ಪಟ್ಟಣ ಪ್ರದೇಶಗಳಲ್ಲಿ ವಾಸ್ತವವಾಗಿ 58.2% ದಿಂದ 57.%ಕ್ಕೆ ಇಳಿದಿದೆ.

ರಿಝರ್ವ್ ಬ್ಯಾಂಕ್ ಮಾಹಿತಿ ದೊಡ್ಡ ಪ್ರಮಾಣದ ಸಾಲಗಳು ಮತ್ತು ಸಣ್ಣ ಪ್ರಮಾಣದ ಸಾಲಗಳ ವಿವರಗಳನ್ನೂ ಪ್ರತ್ಯೇಕಪಡಿಸಿ ಕೊಡುತ್ತವೆ. 2ಲಕ್ಷ ರೂ.ಗಳಿಗಿಂತ ಕಡಿಮೆ ಸಾಲ ಪಡೆಯುವವರು ಸಣ್ಣ ಸಾಲಗಾರರು ಎಂದು ಈ ಮಾಹಿತಿ ಪರಿಗಣಿಸಿದೆ. ಕಳೆದ ನಾಲ್ಕು ವರ್ಷಗಳ ಮೋದಿ ಆಳ್ವಿಕೆಯಲ್ಲಿ

ಪುಟ 10 ಕ್ಕೆ



ವ್ಯಂಗ್ಯಚಿತ್ರ: ಸಂದೀಪ್ ಅದ್ವರ್ಯು, ಟೈಂಸ್ ಆಫ್ ಇಂಡಿಯ

'ಮುದ್ರಾ' ಯೋಜನೆ: ಕೇವಲ 50 ಸಾವಿರ ರೂ. ಗಳಲ್ಲಿ 'ಉದ್ಯಮಶೀಲರ ಕನಸುಗಳನ್ನು ನನಸಾಗಿಸುವ' ಆಶ್ವಾಸನೆ!

12 ಕೋಟಿ ಫಲಾನುಭವಿಗಳಿಗೆ 6 ಲಕ್ಷ ಕೋಟಿ ರೂ.ಗಳ ಸಾಲಗಳನ್ನು ವಿತರಿಸಿರುವ ಈ ಯೋಜನೆ ಉದ್ಯಮಶೀಲರ ಕನಸುಗಳನ್ನು ನನಸಾಗಿಸಲು ಮತ್ತು ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ಇದು ಗಮನಾರ್ಹ ಕೊಡುಗೆಯನ್ನು ನೀಡಿದೆ ಎಂದು ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ. ವಾಸ್ತವವಾಗಿ ನೀಡಿದ ಸಾಲಗಳ ಮೊತ್ತ ಈ ಸರಾಸರಿಯಾಗಿ ಈ ನಾಲ್ಕು ವರ್ಷಗಳಲ್ಲಿ 38 ಸಾವಿರ ರೂ.ಗಳಂದ 52 ಸಾವಿರ ರೂ.ವರೆಗೆ. ಈ ಮೊತ್ತಗಳಂದ ಎಂತಹ ಉದ್ಯೋಗವನ್ನು ಸೃಷ್ಟಿಸಬಹುದು ಎಂದು ಆರ್ಥಿಕ ತಜ್ಞರು ಕೇಳುತ್ತಿದ್ದಾರೆ.

'ಮುದ್ರಾ' ಪ್ರಧಾನ ಮಂತ್ರಿಗಳ ಇನ್ನೊಂದು ಭಾರೀ ಪ್ರಚಾರದ ಯೋಜನೆ. ಮೇ 29 ರಂದು ಪ್ರಧಾನಿಗಳು ತಮ್ಮ ಸರಕಾರದ ನಾಲ್ಕನೇ ವಾರ್ಷಿಕೋತ್ಸವ ಆಚರಣೆಯ ಭಾಗವಾಗಿ ಈ ಬಗ್ಗೆ ದೇಶವ್ಯಾಪಿ ವೀಡಿಯೋ ಸಂವಾದ ನಡೆಸಿ ಇನ್ನಷ್ಟು ಪ್ರಚಾರ ಪಡೆಯಲು ಪ್ರಯತ್ನಿಸಿದ್ದಾರೆ.

ಕಳೆದ ನಾಲ್ಕು ವರ್ಷಗಳಲ್ಲಿ ಈ ಯೋಜನೆಯ ಅಡಿಯಲ್ಲಿ 12 ಕೋಟಿ ಫಲಾನುಭವಿಗಳಿಗೆ 6 ಲಕ್ಷ ಕೋಟಿ ರೂ. ಗಳ ಸಾಲಗಳನ್ನು ವಿತರಿಸಲಾಗಿದೆ ಎಂದು ಪ್ರಧಾನ ಮಂತ್ರಿಗಳು ಹೇಳಿದರು. ಇದು ಹಿಂದಿನ ಸರಕಾರಗಳ ಸಾಲಮೇಳಗಳಿಗಿಂತ ಭಿನ್ನವಾಗಿದೆ, ಸಣ್ಣ ಪ್ರಮಾಣದಲ್ಲಿ ಉದ್ಯಮ ಆರಂಭಿಸುವ ಮೂಲಕ ಉದ್ಯಮಶೀಲರ ಕನಸುಗಳನ್ನು ನನಸಾಗಿಸಲು ಮತ್ತು ಉದ್ಯೋಗ ಅವಕಾಶಗಳನ್ನು ಸೃಷ್ಟಿಸಲು ಇದು ಗಮನಾರ್ಹ ಕೊಡುಗೆಯನ್ನು ನೀಡಿದೆ ಎಂದು ಪ್ರಧಾನ ಮಂತ್ರಿಗಳು ಈ ಸಂವಾದದಲ್ಲಿ ಹೇಳಿರುವುದಾಗಿ ವರದಿಯಾಗಿದೆ (ಪ್ರಜಾವಾಣಿ, ಮೇ,30).

'ಮುದ್ರಾ' ಎಪ್ರಿಲ್ 2015ರಲ್ಲಿ ಆರಂಭಿಸಿದ ಕಾರ್ಪೊರೇಟ್ -ಅಲ್ಲದ, ಕೃಷಿಯೇತರ ಸಣ್ಣ/ಅತಿ ಸಣ್ಣ ಉದ್ದಿಮೆಗಳಿಗೆ ಸಾಲ ಕೊಡುವ ಯೋಜನೆ. ಇದರಲ್ಲಿ ಮೂರು ವಿಧಗಳಿವೆ-50,000ರೂ. ವರೆಗಿನ ಕಿರುಸಾಲ. 5 ಲಕ್ಷ ರೂ., ವರೆಗಿನ ಮಧ್ಯಮ ಸಾಲ ಹಾಗೂ 5 ಲಕ್ಷದಿಂದ 10 ಲಕ್ಷ ರೂ.ವರೆಗಿನ ದೊಡ್ಡ ಸಾಲ.

ಈ ಸಾಲವನ್ನು ಕೊಡುವುದು ಸರಕಾರ ಅಲ್ಲ. ಬಹುಪಾಲು ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು ಹಾಗೂ ಇತರ ಹಣಕಾಸು ಸಂಸ್ಥೆಗಳು.

ಕಳೆದ ನಾಲ್ಕು ವರ್ಷಗಳಲ್ಲಿ ನೀಡಿದ ಸರಾಸರಿ ಮುದ್ರಾ ಸಾಲ ಮೊತ್ತ ಹೀಗಿದೆ:

ವರ್ಷ	ಸರಾಸರಿ ಸಾಲ ಮೊತ್ತ
2015-16	ರೂ.38117
2016-17	44158
2017-18	51292
2018-19	41822

(ಮೇ 25ರ ವರೆಗೆ)

5 ಲಕ್ಷದಿಂದ 10 ಲಕ್ಷ ರೂ.ವರೆಗಿನ ಸಾಲಗಳ ಸಂಖ್ಯೆ ಒಟ್ಟು ಸಾಲಗಳ 1.3% ಮಾತ್ರ ಎಂದು

ಪುಟ 10 ಕ್ಕೆ

48% ಖಾತೆದಾರರ 'ಭಾಗ್ಯವಿಧಾತ'ನಾಗದ 'ಜನ-ಧನ' ಯೋಜನೆ

ಪುಟ ೯ ರಿಂದ

ಸಣ್ಣ ಸಾಲಗಾರರ ಪ್ರಮಾಣ ಇಳಿದಿದೆ ಎಂದು ಈ ಮಾಹಿತಿಗಳು ಹೇಳುತ್ತವೆ.

ಹಾಗೆ ನೋಡಿದರೆ ಇದು 2002ರಿಂದಲೇ ಇಳಿಯುತ್ತ ಬಂದಿದೆ. 2004-14ರ ಅವಧಿಯಲ್ಲಿ ಕಾರ್ಪೊರೇಟ್ ಸಾಲಗಳ ಪ್ರಮಾಣ ದೊಡ್ಡ ಪ್ರಮಾಣದಲ್ಲಿ ಹೆಚ್ಚಿರುವುದರಿಂದ ಹೀಗಾಗಿರಬಹುದು. ಆದರೆ ನಂತರ, ಸುಸ್ತಿ ಸಾಲಗಳ ಪ್ರಮಾಣ ಏರಿದಂತೆ ಕಾರ್ಪೊರೇಟ್ ಸಾಲಗಳ ಪ್ರಮಾಣ ಇಳಿಮುಖಗೊಂಡಾಗ ಸಣ್ಣ ಸಾಲಗಾರರು ಪಡೆದ ಸಾಲಗಳ ಅನುಪಾತ ಏರಬೇಕಾಗಿತ್ತು. ಆದರೆ ಹಾಗಾಗಲಿಲ್ಲ, ಇಳಿಕೆಯ ಪ್ರವೃತ್ತಿ ನಿಲ್ಲಲಿಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, ಜನಧನದಿಂದಾಗಿ, ಅಥವ ಬೇರೆಯಾವ ಕಾರಣದಿಂದಲೇ ಆಗಲಿ ಬಡ ವಿಭಾಗಗಳಿಗೆ ಸಾಂಸ್ಥಿಕ ಸಾಲಲಭ್ಯತೆ ಏನೇನೂ ಹೆಚ್ಚಿಲ್ಲ ಎಂದು ಖಂಡಿತವಾಗಿ ಹೇಳಬಹುದು ಎನ್ನುತ್ತಾರೆ ಈ ಇಬ್ಬರು ವಿಶ್ಲೇಷಕರು.

ಇವರು ಇನ್ನೊಂದು ಮಾನದಂಡದಿಂದಲೂ ಬಡಜನರಿಗೆ ಸಾಲಲಭ್ಯತೆಯ ಪ್ರಮಾಣವನ್ನು ವಿಶ್ಲೇಷಿಸುತ್ತಾರೆ.

ಸಣ್ಣ ಪ್ರಮಾಣದ ಸಾಲಗಾರರಿಗೆ ಎರಡು ಬಾಬ್ತುಗಳಲ್ಲಿ ಸಾಲ ನೀಡಿಕೆಯ ಮಾಹಿತಿಗಳು ಸಿಗುತ್ತವೆ-ಕೃಷಿಗಾಗಿ ಮತ್ತು ವೈಯಕ್ತಿಕ ಸಾಲ. ಜನಧನ ಫಲಾನುಭವಿಗಳಿಗೆ ಇದಕ್ಕಾಗಿಯೇ ಸಾಲ ಬೇಕಾಗುವುದು ತಾನೇ. ಆದರೆ ಈ ನಾಲ್ಕು ವರ್ಷಗಳಲ್ಲಿ ಕೃಷಿ ಸಾಲದ ಪ್ರಮಾಣ ಸುಮಾರಾಗಿ ಏನೂ ಬದಲಾಗಿಲ್ಲ, ವೈಯಕ್ತಿಕ ಸಾಲದ ಪ್ರಮಾಣವಂತೂ ಇಳಿದಿದೆ ಎನ್ನುತ್ತಾರೆ ಈ ವಿಶ್ಲೇಷಕರು.

ಏನಿದರ ಅರ್ಥ? ಜನಧನದ 'ಭಾರೀ ಸಾಧನೆ'ಯ ಪ್ರಯೋಜನ ಖಾತೆ ತೆರೆದವರಿಗೆ ಏನೇನೂ ಸಿಕ್ಕಿಲ್ಲ ಎಂದೇ ತಾನೇ?

ಲೇವಾದೇವಿಗಾರರ ಮೇಲೆ ಅವಲಂಬನೆ ಕಡಿಮೆಯಾಗಿದೆಯೇ?

ಇದು ಜನಧನದ ಯಶಸ್ಸಿನ ಇನ್ನೊಂದು ಮಾನದಂಡ. ಕನಿಷ್ಟ ಆದಾಯ ಮತ್ತು ಸಾಂಸ್ಥಿಕ ಸಾಲ ಸೌಲಭ್ಯದಿಂದ ವಂಚಿತರಾದ ವಿಭಾಗಗಳು ತಮ್ಮ ದೈನಂದಿನ ಬದುಕು ಸಾಗಿಸಲು ಲೇವಾದೇವಿಗಾರರನ್ನು ಅವಲಂಬಿಸಬೇಕಾಗುತ್ತದೆ, ಇದು ಅವರನ್ನು ಸಾಲಕೂಪಕ್ಕೆ ತಳ್ಳುತ್ತದೆ ಎಂಬುದಕ್ಕೆ ಬಹಳ ವಿಶ್ಲೇಷಣೆಯೇನೂ ಬೇಕಿಲ್ಲ. ಆದರೂ ಇದನ್ನು ಸಾಬೀತು ಪಡಿಸುವ ಅಂಕಿ-ಅಂಶಗಳೂ ಬಹಳಷ್ಟು ಸಿಗುತ್ತವೆ. 2016 ರಲ್ಲಿ ಮಾಡಿದ ಇಂತಹ ಒಂದು ಸರ್ವೆಯ ಪ್ರಕಾರ ಜನಸಂಖ್ಯೆಯ ಮೇಲಿನ 1% ಮಂದಿಯಲ್ಲಿ ಸರಾಸರಿ 6ರಲ್ಲಿ ಒಬ್ಬರು ಅನೌಪಚಾರಿಕ ಅಥವ ಖಾಸಗಿ ಸಾಲಗಳನ್ನು ಪಡೆದಿದ್ದಾರೆ. ಅತ್ಯಂತ ಬಡವಿಭಾಗಗಳಲ್ಲಿ ಇದು ನಾಲ್ಕು ಪಟ್ಟು ಹೆಚ್ಚು, ಅಂದರೆ ಪ್ರತಿ ಮೂವರಲ್ಲಿ ಇಬ್ಬರು ಲೇವಾದೇವಿಗಾರರ ಸಾಲಗಳಿಗೆ ಸಿಲುಕಿರುತ್ತಾರೆ.

ರಿಝರ್ವ್ ಬ್ಯಾಂಕಿನ 2017ರ ಒಂದು ಅಧ್ಯಯನದ ಪ್ರಕಾರ ಲೇವಾದೇವಿಗಾರರಿಂದ ಸಾಲ ಪಡೆದ ಕನಿಷ್ಟ ಅರ್ಧದಷ್ಟು ಕುಟುಂಬಗಳು ತಾವು ಪಡೆದ ಸಾಲಗಳಿಗೆ ಬಡ್ಡಿ ತೆರುವುದರಲ್ಲೇ ಇಡೀ ಜೀವನ ಕಳೆಯುತ್ತಿದ್ದಾರೆ.

ಜನಧನ ಯೋಜನೆ ಆರಂಭವಾದ ನಂತರ ಈ ಸ್ಥಿತಿಯಲ್ಲಿ ಏನೂ ಬದಲಾವಣೆ ಕಂಡುಬಂದಿಲ್ಲ ಎನ್ನುತ್ತಾರೆ ಈ ವಿಶ್ಲೇಷಕರು. ಬ್ಯಾಂಕ್ ಖಾತೆ ಲೇವಾದೇವಿಗಾರರಿಂದ ಆ ಖಾತೆದಾರರ ರಕ್ಷಣೆಗೆ ಬಂದಿಲ್ಲ. ಅಮೂಲಕ ಸಾಲಬಲೆಯಿಂದ ಮುಕ್ತಿ ಕೊಟ್ಟಿಲ್ಲ.

ಒಟ್ಟಿನಲ್ಲಿ, "ಈ ದೇಶದ ಬಡಜನರ ಸಾಲಹೊರೆಯ ಶೋಚನೀಯ ಪರಿಸ್ಥಿತಿ ಜನಧನ ಯೋಜನೆಯಿಂದಾಗಿ ಸುಧಾರಿಸುತ್ತಿದೆ ಎಂಬುದರ ಯಾವುದೇ ಸೂಚನೆ ಇದುವರೆಗೆ ಕಂಡುಬಂದಿಲ್ಲ" ಎಂಬ ತೀರ್ಮಾನಕ್ಕೆ ಈ ಇಬ್ಬರು ವಿಶ್ಲೇಷಕರು ಬರುತ್ತಾರೆ.

ಬಹುಶಃ ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು, ಅಂದರೆ ಆದಾಯಗಳನ್ನು ಉತ್ತಮ ಪಡಿಸುವ ಪರ್ಯಾಯ ಧೋರಣೆಗಳು ಇಲ್ಲದಿದ್ದರೆ ಇವೆಲ್ಲ ಕೇವಲ ತೋರಿಕೆಯ ಯೋಜನೆಗಳಾಗುತ್ತವೆ ಎಂಬುದಕ್ಕೆ ಜನಧನ ಯೋಜನೆ ಮತ್ತೊಂದು ಉದಾಹರಣೆಯಾಗಿದೆ.

ಬಹುಶಃ ಮೋದಿ ಸರಕಾರಕ್ಕೆ ಮತ್ತು ಕಾರ್ಪೊರೇಟ್ ಮಾಧ್ಯಮಗಳಿಗೆ ಕೂಡ ಬೇಕಾಗಿರುವುದೂ ಇಷ್ಟೇ-ಈ ಸರಕಾರ ಕಾರ್ಪೊರೇಟ್‌ಗಳ ಬೆಂಬಲದಿಂದ ಬಂದ ಕಾರ್ಪೊರೇಟ್-ಪರ ಸರಕಾರ ಎಂಬ ಇಮೇಜನ್ನು ನಿವಾರಿಸಿ ದೇಶದ ಬಡವರನ್ನು ಆರ್ಥಿಕ ಅಭಿವೃದ್ಧಿಯಲ್ಲಿ ಒಳಗೊಳ್ಳುವ ಬೃಹತ್ ಯೋಜನೆ ಎಂದು ಬಿಂಬಿಸಿಕೊಳ್ಳುವುದು.

ಮುದ್ರಾ' ಯೋಜನೆ: ಕೇವಲ 50 ಸಾವಿರ ರೂ. ಗಳಲ್ಲಿ 'ಉದ್ಯಮಶೀಲರ ಕನಸುಗಳನ್ನು ನನಸಾಗಿಸುವ' ಆಶ್ವಾಸನೆ!

ಪುಟ ೯ ರಿಂದ

ಪರಿಣಿತರು ಮಾಹಿತಿ ಸಂಗ್ರಹಿಸಿದ್ದಾರೆ. ಏನಾದರೂ ಉದ್ಯೋಗಾವಕಾಶ ನಿರ್ಮಿಸುವ ಸಾಮರ್ಥ್ಯ ಇರುವುದು ಈ ಪ್ರಮಾಣದ ಸಾಲ ಪಡೆಯುವ ಉದ್ದಿಮೆಗಳು ಮಾತ್ರ.

ಉದಾಹರಣೆಗೆ, ಮೇ 29ರ ಸಂವಾದದಲ್ಲಿ ಭಾಗವಹಿಸಿದ ಮುಧೋಳದ ಮೊಬೈಲ್ ಅಂಗಡಿಯೊಂದರ ಮಾಲಿಕ ಮಂಜುನಾಥ ಖಮಿತ್ಕರ್ ಈ ಯೋಜನೆಯ ಅಡಿಯಲ್ಲಿ ಸಿಂಡಿಕೇಟ್ ಬ್ಯಾಂಕಿನಿಂದ 13 ಲಕ್ಷ ರೂ. ಸಾಲ ಪಡೆದು ತಮ್ಮ ವ್ಯವಹಾರವನ್ನು ವಿಸ್ತರಿಸಿ ನಾಲ್ಕು ಜನರಿಗೆ ಉದ್ಯೋಗ ಕೊಡಿಸಿದ್ದಾರಂತೆ. ಗರಿಷ್ಟ ಸಾಲ ಮಿತಿ 10ಲಕ್ಷ ರೂ. ಇರುವಾಗ ಅವರು 13 ಲಕ್ಷ ಹೇಗೆ ಪಡೆದರು ಎಂಬುದು ಬೇರೆ ಮಾತು.

ಆದರೆ , ಮೇಲೆ ಹೇಳಿದಂತೆ ಇಂತಹವರ ಸಂಖ್ಯೆ 1.3% ಮಾತ್ರ

ವಾಸ್ತವವಾಗಿ ನೀಡಿದ ಸಾಲಗಳ ಮೊತ್ತ ಈ ಮೇಲಿನ ಕೋಷ್ಟಕದಲ್ಲಿ ಕಾಣುವಂತೆ ಸರಾಸರಿಯಾಗಿ 38 ಸಾವಿರ ರೂ.ಗಳಿಂದ 52 ಸಾವಿರ ರೂ.ವರಗೆ. ಈ ಮೊತ್ತಗಳಿಂದ ಎಂತಹ ಉದ್ಯೋಗವನ್ನು ಸೃಷ್ಟಿಸಬಹುದು ಎಂದು ಆರ್ಥಿಕ ತಜ್ಞರು ಕೇಳುತ್ತಿದ್ದಾರೆ.

ನಿಜ, ಪ್ರಧಾನ ಮಂತ್ರಿಗಳು ಆಗುವ ಮೊದಲು ಅವರು ಯುವಕರಿಗೆ ಉದ್ಯೋಗ ಒದಗಿಸುವ ಭರವಸೆ ನೀಡಿದ್ದರು, ಪ್ರಧಾನ ಮಂತ್ರಿಯಾದ ಮೇಲೆ ಉದ್ಯೋಗಾಕಾಂಕ್ಷಿಗಳನ್ನು ಉದ್ಯೋಗದಾತರನ್ನಾಗಿ ಮಾಡುತ್ತೇವೆ, ಇಲ್ಲವೇ ಸ್ವ-ಉದ್ಯೋಗಿಗಳನ್ನಾಗಿ ಮಾಡುತ್ತೇವೆ ಎನ್ನಲಾರಂಭಿಸಿದರು. ಆದರೆ ಮೇಲೆ ಹೇಳಿದ ಸರಾಸರಿ ಮೊತ್ತದಿಂದ ಉದ್ಯೋಗ ಸೃಷ್ಟಿ ಬಿಡಿ, ಯಾವ ಗುಣಮಟ್ಟದ ಸ್ವ-ಉದ್ಯೋಗ ಮಾಡಲು ಸಾಧ್ಯ, ಹೆಚ್ಚೆಂದರೆ ಈ ಮೊತ್ತ ಅರೆ-ಉದ್ಯೋಗ ಕಲ್ಪಿಸಬಲ್ಲದು ಎನ್ನುತ್ತಾರೆ ಆರ್ಥಿಕ ತಜ್ಞರು. ಪೂರ್ಣಕಾಲದ ಉದ್ಯೋಗ, ಉದ್ಯೋಗ ಭದ್ರತೆ ಇವೆಲ್ಲ ಶಬ್ದಾಡಂಬರದ ಈ ಸರಕಾರದ ಶಬ್ದಕೋಶದಲ್ಲೇ ಇಲ್ಲೆಂಬುದು ಈಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.


ಮುದ್ರಾ ಸಾಲಗಳ ವಿಷಯದಲ್ಲಿ ಇನ್ನೊಂದು ಅಪಾಯವಿದೆ ಎನ್ನುತ್ತಾರೆ ಪರಿಣಿತರು. ಹಿಂದಿನ ಸರಕಾರಗಳು ನಡೆಸಿದ ಸಾಲಮೇಳಗಳಲ್ಲಿ ಅವನ್ನು ಮರುಪಾವತಿ ಬಗ್ಗೆ ಯಾರೂ ತಲೆಕಡಿಸಿಕೊಳ್ಳುತ್ತಿರಲಿಲ್ಲ ಎಂದು ಪ್ರಧಾನ ಮಂತ್ರಿಗಳು ಮೇ29ರ ವಿಡಿಯೋ ಸಂವಾದದಲ್ಲಿ ಹೇಳಿದರು. ಆದರೆ ಈ ಯೋಜನೆಯಲ್ಲಿ ಹಾಗಾದಂತೆ ತಡೆಯುವ ಕ್ರಮಗಳು ಏನಿವೆ ಎಂದೇನೂ ಹೇಳಿಲ್ಲ. ಬ್ಯಾಂಕುಗಳು ಈ ಸಮುದ್ರಾ ಸಾಲಗಳನ್ನು ಯಾವುದೇ ಆಸ್ತಿಯ ಆಧಾರವಿಲ್ಲದೆ ಕೊಡಬೇಕಾಗಿದೆ. ಇವು ಸುಸ್ತಿ ಸಾಲಗಳಾದರೆ ವಸೂಲಿ ಮಾಡಲು ಏನೂ ಇಲ್ಲ. ಬಹುಪಾಲು ಸಾರ್ವಜನಿಕ ವಲಯದ ಬ್ಯಾಂಕುಗಳು ಈ ಸಾಲ ಕೊಡುವಂತೆ ಒತ್ತಾಯವಿರುವುದರಿಂದಾಗಿ ಈಗಾಗಲೇ 6 ಲಕ್ಷ ಕೋಟಿ ರೂ. ದಾಟಿರುವ ಮೊತ್ತದಲ್ಲಿ ಎಷ್ಟು ವಾಪಾಸು ಬರಬಹುದು, ಚಮಚಾ ಕಾರ್ಪೊರೇಟ್ ಕುಳಗಳ ಸುಸ್ತಿ ಸಾಲಗಳಿಗೆ ಇನ್ನೆಷ್ಟು ಸೇರ್ಪಡೆಯಾಗಬಹುದು ಎಂಬ ಭಯ ಸಾರ್ವಜನಿಕ ವಲಯದ ಬ್ಯಾಂಕುಗಳನ್ನು ಬಾಧಿಸಬಹುದು ಎಂದೂ ಕೆಲವು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

'ಆಡಂಬರದ ಪ್ರಚಾರದಿಮದ ಹಮ್ಮಿಕೊಳ್ಳಲಾಗುತ್ತಿದ್ದ ಸಾಲಮೇಳಗಳಲ್ಲಿ ಆಯ್ದ ಜನರಿಗೆ ಮಾತ್ರ ಸಾಲ ವಿತರಿಸಲಾಗುತ್ತಿತ್ತು" ಎಂದೂ ಪ್ರಧಾನ ಮಂತ್ರಿಗಳು ತಮ್ಮ ವೀಡಿಯೋ ಸಂವಾದದಲ್ಲಿ ಹೇಳಿದರು. ಪಕ್ಷಾಂತರಿಗಳನ್ನೇ ಸೇರಿಸಿಕೊಂಡು ಕಾಂಗ್ರೆಸ್-ಮುಕ್ತ ರಾಜಕೀಯದ ಮಾತಾಡುತ್ತಿರುವಾಗ ಆ ದಿನಗಳ ಕೆಟ್ಟ ಚಾಳಿಗಳ ಪುನರಾವರ್ತನೆಯಾಗುತ್ತಿರುವುದು ಈಗ ನಮ್ಮ ಕಣ್ಣೆದುರೇ ಇದೆ.

ಈ ಮುದ್ರಾ ಸಾಲಗಳಲಿಯ್ಲೂ ಹಲವನ್ನು ಸ್ಥಳೀಯ ಬಿಜೆಪಿ ಮುಖಂಡರು ಮತ್ತು ಬೆಂಬಲಿಗರ ಪ್ರಭಾವದಿಂದ ಕೊಡಲಾಗುತ್ತಿದೆ ಎಂಬ ಸುದ್ದಿಗಳೂ ಇವೆ. ಇದು ನಿಜವಾಗಿದ್ದರೆ, ಈ ಹಿಂದಿನಂತೆ ಸಾರ್ವಜನಿಕ ನಿಧಿಯಿಂದ ತಮ್ಮ ಖಾಸಗಿ ಬೆಂಬಲಿಗರಿಗೆ ಹಣ ಒದಗಿಸುವ ಒಂದು ದಾರಿಯೂ ಇದು ಆಗುವ ಸಾಧ್ಯತೆಯಿದೆ ಎನ್ನಲಾಗಿದೆ.(ಸುಬೋಧ್ ವರ್ಮ, ನ್ಯೂಸ್‌ಕ್ಲಿಕ್, ಮೇ 23).

ಇತ್ತೀಚೆಗೆ ಫೆಬ್ರುವರಿ 21ರಂದು ಪ್ರಕಟವಾಗಿರುವ ಸುದ್ದಿಯ ಪ್ರಕಾರ ಸಿಬಿಐ ರಾಜಸ್ತಾನದ ಬರ್ಮೇರ್‌ನಲ್ಲಿ ಪಂಜಾಬ್ ನ್ಯಾಶನಲ್ ಬ್ಯಾಂಕಿನ ಹಿರಿಯ ಅಧಿಕಾರಿಯೊಬ್ಬರ ಮೇಲೆ ಒಟ್ಟು 62 ಲಕ್ಷ ರೂ. ಮೊತ್ತದ 26 'ಹುಸಿ' ಸಾಲಗಳನ್ನು ನೀಡಿರುವ ದೂರನ್ನು ದಾಖಲಿಸಲಾಗಿದೆ.

ಅದೇನೇ ಇರಲಿ, ಈ ಸರಕಾರಗಳು ಕಾರ್ಪೊರೇಟ್‌ಗಳಿಗೆ ಪ್ರತಿವರ್ಷ ಕೊಟ್ಟಿರುವ ಲಕ್ಷ ಕೋಟಿ ರೂ.ಗಳ ವಿನಾಯ್ತಿ, ರಿಯಾಯ್ತಿ ಮತ್ತು 'ಪ್ರೋತ್ಸಾಹಕ' ಗಳನ್ನು ಸಾರ್ವಜನಿಕ ಹೂಡಿಕೆಗಳಿಗೆ ಬಳಸಿ ಗುಣಮಟ್ಟದ ಉದ್ಯೋಗಾವಕಾಶಗಳನ್ನು ನಿರ್ಮಿಸುವ ಬದಲು ನವ-ಉದಾರವಾದಿ ನಿಲುವುಗಳಿಗೆ ಕಟ್ಟುಬಿದ್ದಾಗ ಇಂತಹ ತೋರಿಕೆಯ ಕ್ರಮಗಳಿಗೆ ಮೊರೆಹೋಗುತ್ತವೆ ಎಂಬುದೀಗ ಸ್ಪಷ್ಟವಾಗಿ ಕಾಣುತ್ತಿರುವ ಸಂಗತಿ.



ಬೊಗಳೆಗಳ ಮೇಲೆ ಬೊಗಳೆಗಳು
ಆರ್ಥಿಕ ಪ್ರಗತಿಯ ಬದಲು ದುರ್ಗತಿ

* ಒಳ್ಳೆಯ ದಿನಗಳ ಚಿತ್ರ ತೋರಿಸಲು ಆರ್ಥಿಕ ತಜ್ಞರ ತೀವ್ರ ಟೀಕೆಗೊಳಗಾದ ಜಿಡಿಪಿ ಲೆಕ್ಕಾಚಾರದ ಬದಲಾವಣೆ. ಆದರೆಒಳ್ಳೆಯ ಚಿತ್ರವೂ ಸಿಗಲಿಲ್ಲ
-ಜಿಡಿಪಿ ಬೆಳವಣಿಗೆ ದರ ನೋಡಿ:

2015-16	8.2%
2016-17	7.1%
2017-18	6.6%

*** ಸರಕುಗಳ ರಫ್ತಿನಲ್ಲಿ ತೀವ್ರ ಇಳಿಕೆ**

2013-14 314.4 ಬಿಲಿಯ ಡಾಲರ್
2017-18ರ ಅಂದಾಜು 302.8

ಸೇವೆಗಳ ನಿವ್ವಳ ರಫ್ತು ಇಳಿಕೆ

2014-15	76.6 ಬಿಲಿಯ ಡಾಲರ್
2015-16	69.7
2016-17	67.5

*** ರೂಪಾಯಿ ವಿನಿಮಯ ದರ**


ಆಗ 100ರೂ.ಗೆ 1.6949 ಡಾಲರ್
ಈಗ 1.4706 ಡಾಲರ್
15% ಇಳಿಕೆ-ಇನ್ನೂ ಇಳಿಯುವ ಸಂಭವ ಇದೆ.

***ಉದ್ದಿಮೆಗಳ ಬೆಳವಣಿಗೆ ದರ ಏರಿಕೆ ಇಲ್ಲ**
ಉದ್ದಿಮೆಗಳಿಗೆ ಸಾಲಗಳ ಬೇಡಿಕೆ ಇಳಿಕೆ

2015-16 ರಲ್ಲಿ 9.2%
2017-18 ರಲ್ಲಿ 5.9%
ಮೇಕ್ ಇನ್ ಇಂಡಿಯ ಅಬ್ಬರ
ಕೇವಲ ಮಾತುಗಳಲ್ಲಿ.

*** ಆರ್ಥಿಕ ಬೆಳೆಯಲಿಲ್ಲ**
-ಲೂಟಿ ಮಾತ್ರ ಬೆಳೆಯಿತು

ಮಾರ್ಚ್ 2013ರಲ್ಲಿ ಒಟ್ಟು ಸುಸ್ತಿ ಸಾಲಗಳು
ಒಟ್ಟು ಬ್ಯಾಂಕ್ ಸಾಲಗಳ 3.4%
ಮಾರ್ಚ್ 2015ರಲ್ಲಿ 4.7%
ಮಾರ್ಚ್ 2017ರಲ್ಲಿ 9.9%
2012-13 ರಿಂದ 2016-17ರ ಅವಧಿಯಲ್ಲಿ 2.5 ಲಕ್ಷ ಕೋಟಿ ರೂ. ಕಾರ್ಪೊರೇಟ್ ಸಾಲಗಳ ವಜಾ
ಇದರಲ್ಲಿ ಮೋದಿ ಸರಕಾರ ವಜಾ ಮಾಡಿರುವುದು ರೂ. 1.88 ಲಕ್ಷ ಕೋಟಿ




“ಜಾತಿ ಮೂಲರಚನೆ ಮತ್ತು ಸೈದ್ಧಾಂತಿಕ ಮೇಲ್-ರಚನೆಗಳ ಭಾಗ”...... ಪುಟ 16 ರಿಂದ

ಅದನ್ನು ಅರ್ಥೈಸುವುದಾಗಲಿ, ಬದಲಾಯಿಸುವುದಾಗಲಿ ಸಾಧ್ಯವಿಲ್ಲ. ಗ್ರಾಮೀಣ ಭೂಮಾಲಕ ವರ್ಗಕ್ಕೆ ಅಗತ್ಯವಾಗಿರುವ ಜಾತಿ-ತಾರತಮ್ಯ ಅಸ್ಪೃಶ್ಯತೆಗಳಿರುವ ಜಾತಿ-ವರ್ಣ ವ್ಯವಸ್ಥೆಯನ್ನು ಅದು ಸ್ವಲ್ಪವೂ ಸಡಿಲವಾಗದಂತೆ ಕಾಪಾಡಿಕೊಂಡು ಬರುತ್ತದೆ. ಆದ್ದರಿಂದ ಭೂಮಾಲಕತ್ವದ ಮೇಲೆ ಆಧಾರಿತ ಗ್ರಾಮೀಣ ಪ್ರತಿಷ್ಠಿತ ವರ್ಗದ ಭೂಮಿ ಮತ್ತು ಇತರ ಸಂಪನ್ಮೂಲಗಳ ಮೇಲಿನ ಒಡೆತನವನ್ನು ನಾಶ ಮಾಡದೆ ಜಾತಿ ವಿನಾಶ ಸಾಧ್ಯವಿಲ್ಲ. ಇಂದು ದಲಿತರ ಮೇಲೆ ಅತ್ಯಂತ ಹೇಯ ದೌರ್ಜನ್ಯಗಳನ್ನು ಎಸಗುತ್ತಿರುವವರೂ ಇವರೇ. ಆದ್ದರಿಂದ ಮಿಳಿತವಾಗಿ ಸಂಕೀರ್ಣವಾಗಿರುವ ಜಾತಿ-ವರ್ಗ ವ್ಯವಸ್ಥೆಯ ರಚನೆಯನ್ನು ಅರ್ಥ ಮಾಡಿಕೊಂಡು ಬದಲಾಯಿಸಲು ಹೋರಾಡಬೇಕಾಗಿದೆ ಎಂದು ಜಿ.ಎನ್. ನಾಗರಾಜ್ ಎಂದು ಹೇಳಿದರು.


“ಈಗಿರುವ ಎಲ್ಲದರ ಕಠಿಣ ವಿಮರ್ಶೆ” ಮತ್ತು ಆತ್ಮವಿಮರ್ಶೆ ಮಾಡಿಕೊಳ್ಳಬೇಕು : ಶಿವಸುಂದರ್

ಶಿವಸುಂದರ್ ಸಹ ತಮ್ಮ ವಿಚಾರಮಂಡನೆಯನ್ನು ಚುನಾವಣಾ ಫಲಿತಾಂಶದ ವಿಶ್ಲೇಷಣೆಯಿಂದ ಹೊಮ್ಮುವ ಆಧುನಿಕ ಜಾತಿ ವ್ಯವಸ್ಥೆಯ ಪಾತ್ರವನ್ನು ಗುರುತಿಸುವುದರಿಂದಲೇ ಆರಂಭಿಸಿದರು. ಒಕ್ಕಲಿಗ ಲಿಂಗಾಯತ ಪ್ರಾಧಾನ್ಯ ಕ್ಷೇತ್ರಗಳಲ್ಲಿ, ಕರಾವಳಿ ಮತ್ತು ಕೆಲವು ಮುಸ್ಲಿಂ ಬಹುಸಂಖ್ಯಾತ ಕ್ಷೇತ್ರಗಳಲ್ಲಿ ಕಂಡು ಬಂದ ಜಾತಿ ಮತ್ತು ಧರ್ಮ ಧ್ರುವೀಕರಣ ಹೇಗೆ ಚುನಾವಣೆಯ ಸಮಯದಲ್ಲಿ ಜನತೆಯ ಸಾಮಾನ್ಯ ಭೌತಿಕ ಪ್ರಶ್ನೆಯನ್ನು ಮೀರಿ, ಜಾತಿ-ಧರ್ಮ ಪ್ರಶ್ನೆಗಳು ನಿರ್ಣಾಯಕವಾಗುವಂತೆ ಆಗುವ ಸ್ಥಿತಿ ಇದೆ. ಬಂಡವಾಳಶಾಹಿ ವ್ಯವಸ್ಥೆ ಹೇಗೆ ಜಾತಿ-ಧರ್ಮ ಪ್ರಶ್ನೆಯನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿದೆ ಎಂದು ಉದಾಹರಣೆಗಳ ಸಹಿತ ವಿವರಿಸಿದರು. ನಮ್ಮ ಸಂವಿಧಾನದ ಪ್ರಕಾರ ಸಹ ಅಸ್ಪೃಶ್ಯತೆಯನ್ನು ನಿಷೇಧಿಸಲಾಗಿದೆಯೇ ಹೊರತು ಜಾತಿ ತಾರತಮ್ಯವನ್ನಲ್ಲ. ಆಳುವ ವರ್ಗಗಳು ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ ಜಾತಿಪ್ರಶ್ನೆ ಉಳಿಸಿ ಬೆಳೆಸಿವೆ. ಎಡಪಕ್ಷಗಳು ಸಾಮಾಜಿಕ-ಆರ್ಥಿಕ ಹೋರಾಟಗಳ ಮುಂಚೂಣಿಯಲ್ಲಿದ್ದ ಕ್ಷೇತ್ರಗಳಲ್ಲೂ ಚುನಾವಣೆ ಬಂದಾಗ ವರ್ಗಪ್ರಶ್ನೆ ಮಾತ್ರವಲ್ಲ ಭೌತಿಕ ಪ್ರಶ್ನೆಯನ್ನೂ ಮೀರಿ ಆವರಿಸಿಕೊಳ್ಳುವ ಜಾತಿ ಪ್ರಶ್ನೆಯನ್ನು ಗುರುತಿಸಬೇಡವೇ? ಅದರ ವಿರುದ್ಧ ಹೋರಾಟ ಎಡಪಂಥೀಯ ಕಾರ್ಯಕ್ರಮದ ಭಾಗವಾಗುವುದು ಬೇಡವೇ ಎಂದು ಅವರು ಪ್ರಶ್ನಿಸಿದರು.


ಪ್ರೊ. ಆತ್ರೇಯ ಅವರು ತಮ್ಮ ದಿಕ್ಸೂಚಿ ಭಾಷಣದಲ್ಲಿ ಮಂಡಿಸಿದ ಮತ್ತು ಈಗ ಎಡಚಳುವಳಿಯ ಜಾತಿ-ವರ್ಗ ಸಂಕೀರ್ಣ ವ್ಯವಸ್ಥೆಯ ಸರಿಯಾದ ಅರ್ಥೈಸುವಿಕೆಯ ಭಾಗವಾಗಿರುವ ಹಲವು ಅಂಶಗಳನ್ನು, ಡಾ. ಅಂಬೇಡ್ಕರ್ ಅವರು ಬಹಳ ಹಿಂದೆನೇ ಪ್ರತಿಪಾದಿಸಿದ್ದು ಅದನ್ನು ನಿರ್ಲಕ್ಷಿಸಲಾಗಿದೆ. ಇದರಿಂದಾಗಿ ಎಡಚಳುವಳಿ ಸಾಕಷ್ಟು ನಷ್ಟ ಅನುಭವಿಸಿದೆ ಎಂದು ಅವರು ವಾದಿಸಿದರು. 'ಬ್ರಾಹ್ಮಣವಾದ ಮತ್ತು ಬಂಡವಾಳಶಾಹಿ ಪ್ರಧಾನ ಶತ್ರುಗಳು' ಎಂಬ ಡಾ. ಅಂಬೇಡ್ಕರ್ ಅವರ 1938ರ ಭಾಷಣ; ಸಂಪತ್ತು ಮಾತ್ರವಲ್ಲ ಸಾಮಾಜಿಕ ಸ್ಥಾನಮಾನ ಮತ್ತು ಧರ್ಮಗಳೂ ನಿರ್ಣಾಯಕವಾಗಿರುತ್ತವೆ ಎಂಬ 1919 ಮತ್ತು 1935ರ ಭಾಷಣಗಳು; ಹೆಚ್ಚುವರಿ ಮೌಲ್ಯದ ಲೂಟಿಯಲ್ಲಿ ಅಂದರೆ ಆರ್ಥಿಕ ಶೋಷಣೆಯಲ್ಲಿ ಮತ್ತು ವಿತರಣೆಯ ತಾರತಮ್ಯಗಳಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಜಾತಿ ವ್ಯವಸ್ಥೆ ಆರ್ಥಿಕ ಮೂಲರಚನೆಯ ಭಾಗ ಎಂಬ ಅವರ ಪ್ರತಿಪಾದನೆ: ಜಾತಿ ಶ್ರಮದ ವಿಭಜನೆ ಮಾತ್ರವಲ್ಲ, ಶ್ರಮಿಕರ ವಿಭಜನೆಯ ವ್ಯವಸ್ಥೆ ಕೂಡಾ ಎಂಬ ಪ್ರತಿಪಾದನೆ; ಮೇಲೆರುವ ಆಕಾಂಕ್ಷೆ ಮತ್ತು ಕೆಳಗಿನವರನ್ನು ತುಳಿಯುವ ಅವಕಾಶ ಮಾಡಿಕೊಡುವ ಶ್ರೇಣಿಬದ್ಧ ಅಸಮಾನತೆಯಿಂದ ಮೇಲ್ಮುಖ ಚಲನೆಗೆ ಅವಕಾಶ ಕೊಡುವ ಜಾತಿ ವ್ಯವಸ್ಥೆಯ ನಾಶವನ್ನು ಯಾರೂ ಬಯಸದಿರುವುದೇ ಜಾತಿವ್ಯವಸ್ಥೆ ಬೇರೂರಿರುವುದಕ್ಕೆ ಕಾರಣ ಎಂಬ ಅವರ ಪ್ರತಿಪಾದನೆ; ಆಧುನಿಕ ಕಾರ್ಮಿಕವರ್ಗದ ವರ್ಗಪ್ರಶ್ನೆಗೆ ತೊಡಕಾಗುವುದರಿಂದ ಬ್ರಾಹ್ಮಣವಾದದ ವಿರುದ್ಧ ಹೋರಾಡಬೇಕು ಎಂಬ ಪ್ರತಿಪಾದನೆ; ಉತ್ಪಾದಕತೆ ಭೂಮಿಯ ವಿಸ್ತೀರ್ಣದ ಮೇಲಿಲ್ಲ, ಬದಲಾಗಿ ಅದರ ಮೇಲೆ ಹೂಡಿಕೆಯ ಸಾಮರ್ಥ್ಯದ ಮೇಲೆ ಅವಲಂಬಿತವಾಗಿದೆ ಎಂಬ ಪ್ರತಿಪಾದನೆ 2 ಮುಂತಾದ ಉದಾಹರಣೆಗಳ ಮೂಲಕ ಅವರು ತಮ್ಮ ವಾದವನ್ನು ಪುಷ್ಟೀಕರಿಸಿದರು. ಮಾರ್ಕ್ಸ್‌ವಾದದ ಮೂಲ ಮತ್ತು ವಿಕಾಸ ಇತರ ವಾದಗಳ ಜತೆ ಸಂಘರ್ಷ ಮತ್ತು ಕೊಡು-ಕೊಳ್ಳುವಿಕೆಯಿಂದ ಆಗಿದ್ದು, ಅಂಬೇಡ್ಕರ್ ವಾದದ ಜತೆ ಇಂತಹ ಪ್ರಕ್ರಿಯೆ ನಡೆಯದ್ದು ಭಾರತದಲ್ಲಿ ಮಾರ್ಕ್ಸ್‌ವಾದದ ನಿರ್ದಿಷ್ಟ ಅನ್ವಯಕ್ಕೆ ತೊಡಕಾಗಿತ್ತು.


ರಾಜೇಂದ್ರ ಚೆನ್ನಿ

ಆದ್ದರಿಂದ “ಈಗಿರುವ ಎಲ್ಲದರ ಕಠಿಣ ವಿಮರ್ಶೆ' ಮಾರ್ಕ್ಸ್‌ವಾದದ ಮೂಲಮಂತ್ರವಾಗಿದ್ದು ಮಾರ್ಕ್ಸ್‌ವಾದಿಗಳು ಈಗಲಾದರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕೆಂದು ವಾದಿಸಿದರು. ಕೊಸಾಂಬಿ ಅವರ ಚಾರಿತ್ರಿಕ ಭೌತವಾದಿ ವಿಶ್ಲೇಷಣೆ ಮತ್ತು ಅಂಬೇಡ್ಕರ್ ಅವರ ಜಾತಿವ್ಯವಸ್ಥೆಯ ಬಗೆಗಿನ ಒಳನೋಟಗಳ ಸಂಗಮ ಆಗದೆ ಹೋಗಿದ್ದರಿಂದ ಎಡಚಳುವಳಿಯ ಹಿನ್ನಡೆ ಆಗಿದೆ. ನೆಹರೂ ಕಾಲದ 'ಜಾತಿ ನಿರಾಕರಣೆ'ಯ ಹಂತದಿಂದ, ದಮನಿತ ಜಾತಿಗಳಲ್ಲಿ ಜಾಗೃತ ಮತ್ತು ಶಿಕ್ಷಿತ ಮಧ್ಯಮ ವರ್ಗದ ಉದಯದಿಂದ 'ಜಾತಿ ಜಾಗೃತಿ'ಯೊಂದಿಗೆ ಆರಂಭವಾಗಿ ಕ್ರಮೇಣ ವಿಕೃತ 'ಜಾತಿ ಅಸ್ಮಿತೆ' ಆದ ಹಂತದಲ್ಲಿ, ಜಾತಿ ಬಗ್ಗೆ ಎಡಚಳುವಳಿಯ 'ಕುರುಡು' ಅದನ್ನು ಮುನ್ನಡೆಗೆ ಬಳಸುವ ಸದವಕಾಶವನ್ನು ಕಳೆದುಕೊಂಡಿತು. ಇಂತಹ ಅವಕಾಶವನ್ನು ಮುಂದಿನ 'ಜಾತಿ ವಿನಾಶ'ದ ಹಂತದಲ್ಲಿ ಕಳೆದುಹೋಗದಂತೆ “ಈಗಿರುವ ಎಲ್ಲದರ ಕಠಿಣ ವಿಮರ್ಶೆ' ಅಗತ್ಯ ಎಂದು ಅವರು ಅಭಿಪ್ರಾಯ ಪಟ್ಟರು.


ಶಿವಸುಂದರ್

ಕರ್ನಾಟಕದಲ್ಲಿ ಕಳೆದ 30 ವರ್ಷಗಳಲ್ಲಿ ರಾಜಕೀಯ-ಆರ್ಥಿಕದಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ತಮ್ಮ ಸಂಘಟನೆ ನಡೆಸಿರುವ ಅಧ್ಯಯನದ ಸಾರಾಂಶವನ್ನು ಅವರು ಹಂಚಿಕೊಂಡರು. ಭೂಮಿಯ ಒಡೆತನ ರಾಜಕೀಯ-ಆರ್ಥಿಕ ಅಧಿಕಾರದ ಪ್ರಧಾನ ಸ್ಥಾನವಾಗಿ ಉಳಿದಿಲ್ಲ. 'ಮುಕ್ತ ಶ್ರಮ' ದೊಡ್ಡ ಪ್ರಮಾಣದಲ್ಲಿ ಆರಂಭವಾಗಿದೆ. ಆದರೆ 'ಮುಕ್ತ ಶ್ರಮ'ಕ್ಕೆ ತಕ್ಕ ಕೂಲಿಯ ಒಪ್ಪಂದ (ಅಥವಾ ಕಾಂಟ್ರಾಕ್ಟ್) ಇನ್ನೂ ಆರಂಭವಾಗಿಲ್ಲ. ಸಾಮಾಜಿಕ ಸ್ಥಾನಮಾನ ಬಳಸಿ ಗರಿಷ್ಠ ಶೋಷಣೆ ಮುಂದುವರೆಯುತ್ತಿದೆ. ನವಬಂಡವಾಳಶಾಹಿಯು ಹೊಸ ಉತ್ಪಾದನಾ ಮತ್ತು ವಿತರಣಾ ವ್ಯವಸ್ಥೆಯಲ್ಲಿ ಹೊಸ ಜಾತಿ ವ್ಯವಸ್ಥೆ ಮತ್ತು ಜೀತ ಪದ್ಧತಿಯನ್ನು ಪುನರುತ್ಪಾದಿಸುತ್ತಾ ಹಲವು ಕ್ಷೇತ್ರಗಳಲ್ಲಿ ಸೂಪರ್-ಶೋಷಣೆ ಮಾಡುತ್ತಿದೆ. ಅಂತರ್ರಾಷ್ಟ್ರೀಯ ಬಂಡವಾಳ ಬಂಡವಾಳ-ಪೂರ್ವ ಸಂಬಂಧಗಳ ಪುನರುತ್ಥಾನ ಮಾಡಲು ಪ್ರಯತ್ನಿಸುತ್ತಿದ್ದು, ಸಾಮಾಜಿಕ ಡಾರ್ವಿನ್ ವಾದದಂತಹ (ಅಥವಾ ಮೆರಿಟೊಕ್ರಸಿಯಂತಹ) ಬ್ರಾಹ್ಮಣವಾದ ಅದಕ್ಕೆ ಹೇಳಿ ಮಾಡಿಸಿದಂತಿದೆ ಎಂದು ಅವರು ವಿವರಿಸಿದರು


ಜಿ.ಎನ್.ನಾಗರಾಜ್

ಈ ಹಿನ್ನೆಲೆಯಲ್ಲಿ ದಮನಿತ ವರ್ಗಗಳ ವರ್ಗ ಸಂಘಟನೆಯಂತೆ, ದಮನಿತ ಜಾತಿಗಳ ಜಾತಿ-ಸಂಘಟನೆ ಅಗತ್ಯವಿಲ್ಲವೇ? ಇತರ 'ಜ್ಞಾನ, ಸಂಪತ್ತು ಮತ್ತು ಅಧಿಕಾರ'ಗಳ ಕೇಂದ್ರಗಳಂತೆ ಕಮ್ಯುನಿಸ್ಟ್ ಪಕ್ಷದಲ್ಲೂ ಸಾಮಾಜಿಕ ಪ್ರಾತಿನಿಧ್ಯ ನೀಡಿ 'ಬ್ರಾಹ್ಮಣವಾದ-ಮುಕ್ತ' ಗೊಳಿಸಬೇಡವೇ? ಜಾತಿ ವಿನಾಶಕ್ಕೆ ಎಡಪಂಥೀಯ ಚಳುವಳಿ ಕಾರ್ಯಕ್ರಮ ಹಾಕಿಕೊಳ್ಳಬೇಡವೇ? “ಈಗಿರುವ ಎಲ್ಲದರ ಕಠಿಣ ವಿಮರ್ಶೆ'ಯ ಆಧಾರದ ಮೇಲೆ ಆತ್ಮವಿಮರ್ಶೆ ಮಾಡಿಕೊಳ್ಳಬೇಡವೇ? ಎಂಬುದರ ಬಗ್ಗೆ ಚರ್ಚೆ ನಡೆದು ಪರಿಹಾರ ಕಂಡುಕೊಳ್ಳಬೇಕು ಎಂದು ಶಿವಸುಂದರ್ ತಮ್ಮ ಮಂಡನೆಯನ್ನು ಮುಗಿಸಿದರು.

ಜಾತಿ ವರ್ಗಗಳೇ ಇಲ್ಲ ಎನ್ನುವವರು ಯಾರು ? : ಚೆನ್ನಿ

ಎರಡು ವಿಚಾರಮಂಡನೆಗಳ ನಂತರ ನೆರೆದ ಸಭಿಕರೊಂದಿಗೆ ಉತ್ತಮ ಸಂವಾದ ನಡೆಯಿತು. ಕೊನೆಯದಾಗಿ ಅಧ್ಯಕ್ಷತೆ ವಹಿಸಿದ್ದ ಪ್ರೊ. ರಾಜೇಂದ್ರ ಚೆನ್ನಿ ಅವರು ಚರ್ಚೆಯನ್ನು ಮುಂದುವರೆಸುತ್ತಾ ಜಾತಿ ಮತ್ತು ವರ್ಗಗಳ ಅಸ್ತಿತ್ವವನ್ನೇ ಪ್ರಶ್ನಿಸುವ ಹಿಂದಿರುವ ಹುನ್ನಾರವನ್ನು ಬಯಲಿಗೆಳೆದರು. ಇಬ್ಬರೂ ವಿಚಾರಮಂಡಕರು ಹೇಳಿದ ಹಾಗೆ ಜಾತಿ ಮತ್ತು ವರ್ಗಗಳು ಇನ್ನೂ ಗಟ್ಟಿಯಾಗಿ ಭೀಕರವಾಗಿ ಮುಂದುವರೆಯುತ್ತಿರುವಾಗ ಈ ಕಟು ವಾಸ್ತವವನ್ನು ಮರೆಮಾಚಲು ಅವುಗಳ ಅಸ್ತಿತ್ವವನ್ನೇ ನಿರಾಕರಿಸಲಾಗುತ್ತಿದೆ. ಹೀಗೆ ಮಾಡುತ್ತಿರುವವರು ಇದರ ಫಲಾನುಭವಿಗಳೇ. ಹಿಂದೆ ಆಧುನಿಕತೆಯ ಬಗೆಗಿನ ವಾಗ್ವಾದದ ಸಮಯದಲ್ಲಿ ಆಧುನಿಕತೆ ಬಂದು ಜಾತಿ ಹೋಗಿಬಿಟ್ಟಿದೆ ಎಂದು ಹೇಳಿದ ಅದರ ಫಲಾನುಭವಿಗಳಾಧ ಜಾತಿ ವರ್ಗಗಳೇ ಈಗಲೂ ಅದರ ಹಿಂದಿವೆ. ಯುರೋಪಿನಲ್ಲಿ ಜ್ಞಾನ, ವೈಚಾರಿಕತೆ ತಂದ ಆಧುನಿಕತೆ ಅವನ್ನು ಇಲ್ಲಿ ಏಕೆ ತರಲಿಲ್ಲ? ಜಾತಿಯನ್ನು ನಿಜವಾಗಿಯೂ ಇಲ್ಲವಾಗಿಸಲಿಲ್ಲ ಯಾಕೆ? ಎಂದು ನಾವು ಅಂದು ಗಟ್ಟಿಯಾಗಿ ಕೇಳಲಿಲ್ಲ. ಅದರದೇ ಎರಡನೇ ಹಂತವಾಗಿ ತೀವ್ರವಾಗಿ ಬಿಕ್ಕಟ್ಟು ಎದುರಿಸುತ್ತಿರುವ ನಿರಂತರ ಬಿಕ್ಕಟ್ಟುಗಳಿಂದ ಪರಿಹಾರವೇ ಇಲ್ಲದಿರುವ ಅಂತರ್ರಾಷ್ಟ್ರೀಯ ಬಂಡವಾಳ ಇದರ ಹಿಂದಿದೆ. ಅದು ಇಲ್ಲಿ ಜಾತಿ ವರ್ಗಗಳೇ ಇಲ್ಲ ಎನ್ನುತ್ತದೆ. ಜಗತ್ತಿನ ಎಲ್ಲೆಡೆ ಅತ್ಯಂತ ಭೀಕರ ಜನಾಂಗೀಯವಾದಿ ದ್ವೇಷ, ಇಸ್ಲಾಂ-ಭೀತಿ, ವಲಸೆಗಾರ ಮುಂತಾದ 'ಅನ್ಯ'ರ ಬಗ್ಗೆ ದ್ವೇಷ ಹರಡುತ್ತಾ ನಿಜವಾದ ಸಮಸ್ಯೆಗಳಿಂದ ಜನತೆಯ ಗಮನ ಬೇರೆಡೆ ಸೆಳೆಯುತ್ತಿದೆ ಎಂದು ಅವರು ಹೇಳಿದರು.


ಎಲ್ಲಾ ಜಾತಿಗಳಿಗೂ ಸಹಪಾಲು ಮತ್ತು ಸಹನಾಗರಿಕತ್ವ ಕೊಡುವ ಹಿಂದುತ್ವದ ಏಕಾಕೃತಿಯ ಅಸ್ಮಿತೆಯ ಆಕರ್ಷಣೆಯ ಮೂಲಕ ಅಧಿಕಾರ ಪಡೆಯುವ ಹುನ್ನಾರಕ್ಕೆ ಜಾತಿ ಸಂಘಟನೆ ಪರಿಹಾರ ಎಂದು ಹೇಳಲಾಯಿತು. ದಮನಿತ ಜಾತಿಗಳ ಸಂಘಟನೆಯ ಮೂಲಕ ಅದನ್ನು ಎದುರಿಸಬಹುದು ಎಂದು ಹೇಳಲಾಯಿತು. ಆದರೆ ಹಾಗಾಗಲಿಲ್ಲ. ಇಂತಹ ಸಂಘಟನೆಯ ಉದ್ದೇಶ ಜಾತಿವಿನಾಶ ಆಗಿರಬೇಕು ಎಂಬ ಸೈದ್ಧಾಂತಿಕ ಸ್ಪಷ್ಟತೆ ಇಲ್ಲವಾದ್ದರಿಂದ ಅವು ಜಾತಿ ಸಂಘಟನೆಗಳೇ ಆಗಿ ಉಳಿದವು. ವೋಟು ಬ್ಯಾಂಕುಗಳಾದವು. ಫ್ಯಾಸಿಸಂ ಮತ್ತು ಬ್ರಾಹ್ಮಣವಾದದ ವಿರುದ್ಧ ಹೋರಾಟವನ್ನು ಅರ್ಥ ಮಾಡಿಕೊಳ್ಳಲಿಲ್ಲ. ಇಂತಹ ವಾದ ಒಡ್ಡಿದ್ದ ಪ್ರಗತಿಪರರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾಗಿದೆ ಎಂದು ಚೆನ್ನಿ ಅವರು ಹೇಳಿದರು.

ಜಾತಿಯೂ ಇಲ್ಲ ವರ್ಗವೂ ಇಲ್ಲ. ಭಾರತದಲ್ಲಿ ಮೆರಿಟೊಕ್ರಸಿ ಬಂದುಬಿಟ್ಟಿದೆ ಎಂದು ಬಹುಸಂಖ್ಯಾತ ವಿದ್ಯಾರ್ಥಿ-ಯುವಜನರನ್ನೂ ನಂಬಿಸಲಾಗಿದೆ. ಜಾತಿಯ ಬಗ್ಗೆ ಮಾತನಾಡಿದರೆ .ಅವರಿಗೆ ಎಲ್ಲಿಲ್ಲದ ರೋಷ ಆಕ್ರೋಶಗಳು ಬರುತ್ತವೆ. ಈ ಹೊಸ ಸಾಮಾಜಿಕ ವಿದ್ಯಮಾನವನ್ನು ಗುರುತಿಸಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಹಿಂದೆ ಡಾ. ಅಂಬೇಡ್ಕರ್ ಅವರು ಜಾತಿ-ಅಸ್ಪೃಶ್ಯತೆಗಳ ಅಸ್ತಿತ್ವವನ್ನು ಗಟ್ಟಿಯಾಗಿ ರಿಜಿಸ್ಟರ್ ಮಾಡಿದಂತೆ, ನಾವೂ ಜಾತಿ ವರ್ಗಗಳ ಅಸ್ತಿತ್ವವನ್ನು ಪ್ರಬಲವಾಗಿ ರಿಜಿಸ್ಟರ್ ಮಾಡುವ ಅಗತ್ಯ ಇದೆ. ಜಾತಿವಿನಾಶದ ಬಹುಚರ್ಚಿತ ಮುನ್ನುಡಿಯಲ್ಲಿ ಅರುಂಧತಿ ರಾಯ್ ಅವರು ಕೇಳಿದಂತೆ ಅತ್ಯಂತ ಹೆಚ್ಚು ಆಸ್ತಿ ಆದಾಯ ಇರುವ 10 ಅತಿ ದೊಡ್ಡ ಕಂಪನಿಗಳ ಒಡೆಯರಲ್ಲಿ 9 ಜನ ಬನಿಯಾಗಳು ಏಕಿದ್ದಾರೆ ಎಂದು ಕೇಳಬೇಕಾಗಿದೆ. ಈ ಪಟ್ಟಿಯಲ್ಲಿರುವ ಬಂಡವಳಿಗರು ಸ್ವಯಂ-ಶ್ರಮದಿಂದ, ವ್ಯಾವಹಾರಿಕ ಜಾಣ್ಮೆ, ಅಂತರ್ರಾಷ್ಟ್ರೀಯ ವ್ಯವಹಾರದ ಬಗ್ಗೆ ಜ್ಞಾನದಿಂದ ಮಾತ್ರ ಅಲ್ಲಿಲ್ಲ ಎಂದು ವಿದ್ಯಾರ್ಥಿ-ಯುವಜನರಿಗೆ ತಿಳಿಹೇಳಬೇಕಾಗಿದೆ ಎಂದರು ಚೆನ್ನಿ.

ವರ್ಗಗಳು ಇಲ್ಲ ಎಂದು ಅವರು ಪ್ರಚಾರ ಮಾಡುತ್ತಿರುವಾಗ ವರ್ಗ ಏನು ಎಂದು ನಾವು ತಿಳಿದುಕೊಳ್ಳಬೇಕಾಗಿದೆ. ಬರಿಯ ಕಾರ್ಮಿಕರ ಗುಂಪು ಒಂದು ವರ್ಗ ಅಲ್ಲ. ಉತ್ಪಾದನಾ ಸಂಬಂಧಗಳಲ್ಲಿ ಉತ್ಪಾದನಾ ಪ್ರಕ್ರಿಯೆಯಲ್ಲಿ ತಮ್ಮ ಸ್ಥಾನ ಏನು? ತಾವು ಯಾಕೆ ಹೀಗಿದ್ದೇವೆ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ಕಾರ್ಮಿಕರು ವರ್ಗವಾಗುತ್ತಾರೆ. ವರ್ಗಪ್ರಜ್ಞೆ ಬೆಳೆಸಿಕೊಳ್ಳುತ್ತಾರೆ. ಅದು ಈಗ ಯಾಕೆ ಆಗುತ್ತಿಲ್ಲ? ಭಾರತದ ಸಂದರ್ಭದಲ್ಲಿ ಯಾವುದು ಶ್ರಮಿಕ ವರ್ಗ? ಭಾರತದ ವರ್ಗ ವಿಶ್ಲೇಷಣೆ ಸಿದ್ದ ಮಾದರಿಯಲ್ಲಿ ಲಭ್ಯವಿದೆ ಎಂದು ನನಗನಿಸುತ್ತಿಲ್ಲ. ಸಾಫ್ಟ್ ವೇರ್, ಸಣ್ಣ ಉದ್ಯಮಿ ಮುಂತಾದ ಕ್ಷೇತ್ರಗಳಿಗೆ ಬ್ರಾಹ್ಮಣವಾದದ ನಿಷೇಧಗಳನ್ನು ದಾಟಿ ಪ್ರವೇಶ ಪಡೆದ ದಮನಿತ ಜಾತಿಗಳ ಜನ ಯಾವ ವರ್ಗದ ಪ್ರಜ್ಞೆ ಪಡೆದಿದ್ದಾರೆ? ಉತ್ಪಾದನಾ ಸಂಬಂಧಗಳ ಒಟ್ಟು ವ್ಯವಸ್ಥೆಯಲ್ಲಿ ಜಾತಿ ವರ್ಗಗಳ ಅಭಿನ್ನತೆಗಳನ್ನು ಅರ್ಥಮಾಡಿಕೊಂಡು ಪ್ರಜಾಪ್ರಭುತ್ವದ ನಿರ್ನಾಮ ಮತ್ತು ಫ್ಯಾಸಿಸಂನ ಅನುಷ್ಠಾನವನ್ನು ಎದುರಿಸುವ ರಾಜಕೀಯ ವಿವೇಕವನ್ನು ನಮ್ಮ ಮುಂಚೂಣಿ ವರ್ಗಗಳಲ್ಲಿ ಮತ್ತು ಯುವಜನತೆಯಲ್ಲಿ ಮೂಡಿಸುವ ಹೋರಾಟದಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕಾಗಿದೆ ಎಂದು ಪ್ರೊ. ಚೆನ್ನಿ ಅವರು ಕರೆ ಕೊಟ್ಟರು.

ಡಾ. ಎನ್. ಗಾಯತ್ರಿ ಅವರು ವಿಚಾರ ಸಂಕಿರಣದ ಮೊದಲು ಪ್ರಾಸ್ತಾವಿಕವಾಗಿ ಮಾತನಾಡಿ, ಅದರ ನಿರೂಪಣೆಯನ್ನು ನಿರ್ವಹಿಸಿದರು. ವಸಂತರಾಜ ಎನ್.ಕೆ. ವಂದನಾರ್ಪಣೆ ಮಾಡಿದರು. ●

ಅಚ್ಛೇ ದಿನ್ ಹೋಯ್ತು–ಸಾಫ್ ನಿಯತ್ ಬಂತು



ಸಾಫ್ ನಿಯತ್ ಕೂಡ ಶರವೇಗದಲ್ಲಿ ಜುಮ್ಲಾ ಆಯ್ತು

ನಾಲ್ಕನೇ ವಾರ್ಷಿಕೋತ್ಸವ ಭಾರೀ ಸದ್ದು ಗದ್ದಲಗಳೊಂದಿಗೆ ಆರಂಭವಾಗಿದೆ. ಈಗಾಗಲೇ ಸರಕಾರೀ ಬೊಕ್ಕಸದಿಂದ ಖರ್ಚಾಗಿರುವ 4343ಕೋಟಿ ರೂ ಪ್ರಚಾರ ವೆಚ್ಚವನ್ನು ಕೂಡಲೇ 5000 ಕೋಟಿ ದಾಟಿಸುವ ದೃಢನಿರ್ಧಾರದೊಂದಿಗೆ –ಮುಖ ಪುಟದ ಜಾಹೀರಾತುಗಳು, ಸಾರ್ವಜನಿಕ ಸಭೆಗಳು, ಉದ್ಘಾಟನೆಗಳು, ಮಂತ್ರಿಗಳ ಪತ್ರಿಕಾ ಸಮ್ಮೇಳನಗಳು ಇತ್ಯಾದಿ ಇತ್ಯಾದಿ.

ಇತ್ತೀಚಿನ ವಾರಗಳಲ್ಲಿ ಅಚ್ಛೇ ದಿನ್ ಮತ್ತು ವಿಕಾಸ್ ಪದಗಳು ಪ್ರಧಾನಿಗಳ ಟ್ವೀಟ್‌ಗಳಿಂದ ಮಾಯವಾಗಿವೆ ಎಂದೊಬ್ಬ ಟ್ವಿಟರ್ ಸಂಶೋಧಕರು ಕಳೆದ ವಾರವಷ್ಟೇ ಕಂಡುಹಿಡಿದಿದ್ದರು. ಕರ್ನಾಟಕ ವಿಧಾನಸಭಾ ಚುನಾವಣೆಗಳ ಪ್ರಚಾರದಲ್ಲೂ ಅವು ಕಾಣೆಯಾಗಿದ್ದವು ಎಂಬುದನ್ನು ಬಹಳ ಮಂದಿ ಗಮನಿಸಿದ್ದರು. ಹೌದು, ಅಚ್ಛೇ ದಿನ್ ಕಾಣೆಯಾಗಿದೆ, ಆದರೆ 2019 ಸಮೀಪಿಸುತ್ತಿರುವುದರಿಂದ ವಿಕಾಸ್ ಮಾಯವಾಗುವಂತಿಲ್ಲ.

ಆದ್ದರಿಂದ ನಾಲ್ಕನೇ ವಾರ್ಷಿಕೋತ್ಸವದ ಟ್ಯಾಗ್ ಲೈನ್– 'ಸಾಫ್ ನಿಯತ್, ಸಹೀ ವಿಕಾಸ್' ಅಂದರೆ ಸ್ವಚ್ಛ ಆಶಯ, ಸರಿಯಾದ ಅಭಿವೃದ್ಧಿ. ಅಂದರೆ ಕಳೆದ ನಾಲ್ಕು ವರ್ಷಗಳಲ್ಲಿ ಸರಿಯಾದ ಅಭಿವೃದ್ಧಿ ಆಗಿಲ್ಲ ಎಂದರ್ಥವೇ, ನಾಲ್ಕು ವರ್ಷ ಚಮಚಾ ಬಂಡವಾಳಿಗರ ವಿಕಾಸ್ ಮಾಡಿದ್ದಾಯಿತು, ಇನ್ನು ಉಳಿದ ಒಂದು ವರ್ಷವಾದರೂ ಜನಧನ್, ಮುದ್ರಾ, ಆವಾಸ್ ಯೋಜನಾ ಇತ್ಯಾದಿ–ಇತ್ಯಾದಿಗಳ ಬಗ್ಗೆ ಹೆಚ್ಚೆಚ್ಚು ಮಾತಾಡುವ ಮೂಲಕ 'ಸಹೀ ವಿಕಾಸ' ಇರಲಿ ಎಂಬ ಕುಹಕ ಇಲ್ಲಿ ಬೇಕಿಲ್ಲ. ಆದರೆ ಸಾಫ್ ನಿಯತ್ ಮಾತ್ರ ಬಹಳ ಬೇಗನೇ ಅಚ್ಛೆದಿನ್ ದಾರಿ ಹಿಡಿಯುತ್ತಿದೆ ಎಂಬುದು ಮಾತ್ರ ಕುಹಕವಾಗಲಿಕ್ಕಿಲ್ಲ.


ಪೆಟ್ರೋಲ್/ಡೀಸೆಲ್ ಬೆಲೆಗಳು ಮತ್ತು ಸಾಫ್ ನಿಯತ್

ಪೆಟ್ರೋಲ್–ಡೀಸೆಲ್ ದರಗಳು ಎಪ್ರಿಲ್ 24ರಿಂದ ಮೇ13 ರ ವರೆಗೆ ಸ್ವಲ್ಪವೂ ಪರಿಷ್ಕರಣೆಗೊಳ್ಳಲಿಲ್ಲ, ಅಂದರೆ ಏರಲಿಲ್ಲ– ಈ ನಡುವೆ ಕಚ್ಚಾ ತೈಲದ ಅಂತರ್ರಾಷ್ಟ್ರೀಯ ಬೆಲೆಗಳಲ್ಲಿ ಬ್ಯಾರೆಲ್‌ಗೆ 3.9 ಡಾಲರುಗಳ ಏರಿಕೆಯಾಗಿದ್ದರೂ. ಇದು ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಚಾರದ ಅವಧಿ ಎಂದು ಬೇರೆ ಹೇಳಬೇಕಾಗಿಲ್ಲ.

ಆದರೆ ನಂತರ ಪ್ರತಿದಿನ ಎಂಬಂತೆ ಏರಲಾರಂಭಿಸಿತು. ಮೇ 14ರಿಂದ ಮೇ 30 ರ ನಡುವೆ ಕಚ್ಚಾ ತೈಲದ ಬೆಲೆಗಳಲ್ಲಿ ಆದದ್ದು ಕೇವಲ 1 ಡಾಲರ್ ಏರಿಕೆ, ಆದರೆ ಪೆಟ್ರೋಲ್ ದರಗಳಲ್ಲಿ ಲೀಟರ್‌ಗೆ 3.80ರೂ. ಮತ್ತು ಡೀಸೆಲ್ ದರಗಳಲ್ಲಿ ರೂ.3.38 ಏರಿಕೆ ಆಯ್ತು. 19ದಿನಗಳ ಬಾಕಿಯೆಲ್ಲವನ್ನೂ ವಸೂಲಿ ಮಾಡಿದ ಮೇಲೆ ಮೇ 30ರಂದು ಬೆಳಿಗ್ಗೆ 60ಪೈಸೆ ಇಳಿಕೆಯಾಗಿದೆ ಎಂದು ಪ್ರಕಟಿಸಲಾಯಿತು.. ಆದರೆ ಕೆಲವೇ ನಿಮಿಷಗಳಲ್ಲಿ 'ತಿದ್ದುಪಡಿ ಬಂತು. ತಾಂತ್ರಿಕ ಕಾರಣಗಳಿಂದಾಗಿ ತಪ್ಪಾಗಿ ಪ್ರಕಟವಾಗಿದೆ, ಒಂದು ಪೈಸಾ ಇಳಿಕೆ ಮಾಡಲಾಗಿದೆ ಎಂಬ ಪರಿಷ್ಕೃತ ಹೇಳಿಕೆ ಬಂತು.

ಇದುವರೆಗೆ ಪೆಟ್ರೋಲ್/ಡೀಸೆಲ್ ಬೆಲೆಗಳ ಮೇಲೆ ಸರಕಾರಕ್ಕೆ ಹತೋಟಿಯಿಲ್ಲ, ಅಂತರಾಷ್ಟ್ರೀಯ ಕಚ್ಚಾತೈಲ ಬೆಲೆಗಳಿಗೆ ಅನುಗುಣವಾಗಿ ಏರಿಳಿಕೆಯಾಗುತ್ತದೆ ಎಂದು ಕೈತೊಳೆದುಕೊಳ್ಳಲಾಗುತ್ತಿತ್ತು. ಆದರೆ ಕರ್ನಾಟಕ ಚುನಾವಣಾ ಪ್ರಚಾರದ ವೇಳೆಯಲ್ಲಿ ತೈಲಕಂಪನಿಗಳು ಇದಕ್ಕೆ ವಿನಾಯ್ತಿ ನೀಡಿದ್ದೇಕೆ? ಆಮೇಲೆ ಕಚ್ಚಾತೈಲ ಬೆಲೆಯೇರಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಏರಿಸಿದ್ದೇಕೆ– ಸಾಫ್ ನಿಯತ್ ಮೇ 26ರಂದು ಜಾರಿಗೆ ಬಂದುದರಿಂದಾಗಿ ಮೇ 30ರಂದು 60 ಪೈಸೆ ಎಂದು ಹೇಳಿ ಒಂದು ಪೈಸೆ ಇಳಿಸಲಾಯಿತೇ?

ಈ 60ಪೈಸೆ–ಒಂದು ಪೈಸೆ 'ಕನಿಷ್ಟ ಸರಕಾರ'ದ ಕೊಡುಗೆಯೇ ಅಥವ 'ಗರಿಷ್ಟ ಆಳ್ವಿಕೆ'ಯದ್ದೇ? ಇಂತಹ ಹಲವು ನಿಯತ್ತಿನ ಪ್ರಶ್ನೆಗಳಿವೆ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಎಂಪಿ/ ಶಾಸಕರ ಮೇಲಿನ ಅತ್ಯಾಚಾರ ಕೇಸುಗಳು ಮತ್ತು ಸಾಫ್ ನಿಯತ್

ಇದೇ ಸಮಯದಲ್ಲಿ ಉತ್ತರಪ್ರದೇಶದಿಂದ ಸುದ್ದಿ ಬಂದಿದೆ–ಆಳುವ ಪಕ್ಷದ ಮಾಜಿ ಸಂಸದ ಸ್ವಾಮಿ ಚಿನ್ಮಯಾನಂದ ಅವರ ಮೇಲಿನ ಅತ್ಯಾಚಾರ ಕೇಸನ್ನು ಹಿಂತೆದುಕೊಳ್ಳುವ ಉತ್ತರಪ್ರದೇಶ ಸರಕಾರದ ಅರ್ಜಿಯನ್ನು ಷಹಜಾನ್‌ಪುರ ಮುಖ್ಯ ಜುಡಿಶಿಯಲ್ ನ್ಯಾಯಾಲಯ ಒಪ್ಪಿಲ್ಲ, ಮತ್ತು ಆತನಿಗೆ ಜುಲೈ 12ರಂದು ವಿಚಾರಣೆಗೆ ಹಾಜರಾಗುವಂತೆ ವಾರಂಟ್ ಜಾರಿಯಾಗಿದೆ. (ನ್ಯಾಶನಲ್ ಹೆರಾಲ್ಡ್, ಮೇ 25)

ಡಿಸೆಂಬರ್ 2017ರಲ್ಲಿ ಉತ್ತರಪ್ರದೇಶದ ಅಚ್ಛೇದಿನ್ ಸರಕಾರ ಕ್ರಿಮಿನಲ್ ಕಾನೂನು ತಿದ್ದುಪಡಿ ಮಸೂದೆಗೆ ಅಂಗೀಕಾರ ಪಡೆದು ಅದರ ಅಡಿಯಲ್ಲಿ ಸುಮಾರು 20,000 ಕ್ರಿಮಿನಲ್ ಕೇಸುಗಳನ್ನು 'ರಾಜಕೀಯ ಪ್ರೇರಿತ' ಎಂದು ವಾಪಾಸು ಪಡೆಯುವ ಅರ್ಜಿಯನ್ನು ನ್ಯಾಯಾಲಯಗಳ ಮಂದೆ ಸಲ್ಲಿಸಲಾರಂಭಿಸಿತು. ಸ್ವಾಮಿ ಚಿನ್ಮಯಾನಂದ ಅವರ ಮೇಲಿನ ಕೇಸೂ ಅವುಗಳಲ್ಲಿ ಒಂದು. ಆತನ ಆಶ್ರಮದಲ್ಲಿದ್ದ ಶಿಷ್ಯೆಯೊಬ್ಬಳು ತನ್ನ ಮೇಲೆ ಆತ ಅತ್ಯಾಚಾರ ನಡೆಸಿದ್ದಾರೆಂದು ನೀಡಿದ ದೂರಿನ ಮೇಲೆ ಈ ಕೇಸ್ ದಾಖಲಾಗಿತ್ತು.

ಫೆಬ್ರುವರಿ ಕೊನೆಯ ವೇಳೆಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರವರು ಸ್ವಾಮಿ ಚಿನ್ಮಯಾನಂದ್ ಅವರನ್ನು ಭೇಟಿಯಾಗಿ ಈ ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳುವ ಸುದ್ದಿ ತಿಳಿದ ಆ ಶಿಷ್ಯೆ ಇದಕ್ಕೆ ಆಕ್ಷೇಪ ವ್ಯಕ್ತ ಪಡಿಸಿ ರಾಷ್ಟ್ರಪತಿಗಳು, ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಾಧೀಶರು, ಉತ್ತರಪ್ರದೇಶ ರಾಜ್ಯಪಾಲ, ಉತ್ತರಪ್ರದೇಶ ಮುಖ್ಯಮಂತ್ರಿ ಮತ್ತು ಮುಖ್ಯ ಜುಡಿಶಿಯಲ್ ನ್ಯಾಯಾಧೀಶರಿಗೆ ಪತ್ರ ಬರೆದರಂತೆ, ಆದರೆ ಸರಕಾರದ ವಕೀಲರು ತಿದ್ದುಪಡಿಯಾದ ಕಾನೂನನ್ನು ಉಲ್ಲೇಖಿಸಿ ಕೇಸನ್ನು ಹಿಂತೆಗೆದುಕೊಳ್ಳುವ' ಅರ್ಜಿಯನ್ನು ಸಲ್ಲಿಸಿಯೇ ಬಿಟ್ಟರು. ಆದರೆ ಮುಖ್ಯ ಜುಡಿಶಿಯಲ್ ನ್ಯಾಯಾಲಯ ಅದನ್ನು ತಿರಸ್ಕರಿಸಿದೆ.

ಸಾಫ್ ನಿಯತ್‌ನ್ ಮುಂದಿನ ಪಾಡೇನು ಎಂದು ಯೋಚಿಸುವಷ್ಟರಲ್ಲಿ ಮೇ 29ರಂದು ಅದೇ ಅಚ್ಛೇದಿನ್ ರಾಜ್ಯಭಾರದ ಲಕ್ನೌನಿಂದ ಮತ್ತೊಬ್ಬ ಆಳುವ ಪಕ್ಷದ ಶಾಸಕನ ವಿರುದ್ಧ ಅತ್ಯಾಚಾರ ಆರೋಪ ಕೇಳಿಬಂದಿದೆ. ಇದಕ್ಕೆ ಮೊದಲು ಒಂದು ಪ್ರಕರಣದಲ್ಲಿ, ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದಲ್ಲದೆ, ಆಕೆಯ ತಂದೆಯನ್ನು ಹತ್ಯೆ ಮಾಡಿದ ಆರೋಪ ಎದುರಿಸುತ್ತಿರುವ ಆಳುವ ಪಕ್ಷದ ಶಾಸಕರನ್ನು ರಕ್ಷಿಸುವ ಮುಖ್ಯಮಂತ್ರಿಗಳ ಪ್ರಯತ್ನ ಕೊನೆಗೂ ವಿಫಲವಾಗಿ, ಆತ ಸದ್ಯ ಬಂಧನದಲ್ಲಿದ್ದಾರೆ.

ಕಾಲುಭಾಗ ಹೆದ್ದಾರಿಯ ಉದ್ಘಾಟನೆ ಮತ್ತು ಸಾಫ್ ನಿಯತ್

ಮೇ 27ರಂದು ಪ್ರಧಾನ ಮಂತ್ರಿಗಳು ಟಿವಿ ಕ್ಯಾಮರಾಗಳ ಕೋಲ್ಮಿಂಚುಗಳ ನಡುವೆ ದಿಲ್ಲಿ–ಮೇರಠ್ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ದೇಶಕ್ಕೆ 'ಸಮರ್ಪಿಸಿ'ದರು. ಆದರೆ ಈ ಸಮರ್ಪಣೆಯನ್ನು ದೇಶ ಬಳಸುವಂತಿಲ್ಲ. ಅದಕ್ಕೆ ಇನ್ನೂ ಕನಿಷ್ಟ 10 ತಿಂಗಳು ಕಾಯಬೇಕು. ಅಷ್ಟರ ಒಳಗೂ ಇದು ಪೂರ್ಣವಾಗುವ ಸಾಧ್ಯತೆ ಕಡಿಮೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹೇಳುತ್ತಿದ್ದಾರೆ.

ವಾಸ್ತವವಾಗಿ ಪ್ರಧಾನಿಗಳು ಭಾರೀ ಅಬ್ಬರದ ನಡುವೆ 'ಉದ್ಘಾಟಿಸಿದ್ದು' ಈ 82 ಕಿ.ಮೀ. ಉದ್ದದ 7500 ಕೋಟಿ ರೂ.ಗಳ ಪ್ರಾಜೆಕ್ಟಿನ 841 ಕೋಟಿ ರೂ. ವೆಚ್ಚದ 8.3 ಕಿ.ಮೀ. ಭಾಗವನ್ನು ಮಾತ್ರ. ಈ ಪ್ರಾಜೆಕ್ಟ್ ನಾಲ್ಕು ಹಂತಗಳಲ್ಲಿದ್ದು ಇದುವರೆಗೆ ಅಲ್ಲಲ್ಲಿ ಒಟ್ಟು 25 ಕಿ.ಮೀ.ಗಳಷ್ಟು ಕಾಮಗಾರಿ ಆಗಿದೆ. ಅಂದರೆ 69% ಇನ್ನೂ ಬಾಕಿಯಿದೆ. ಈ ಭಾಗವನ್ನು 18 ತಿಂಗಳಲ್ಲಿಯೇ ಪೂರ್ಣಗೊಳಿಸಲಾಗಿದೆ ಎಂದೂ ಪ್ರಧಾನಿಗಳು ಭುಜತಟ್ಟಿಕೊಂಡರು. ವಾಸ್ತವವಾಗಿ ಇದರ ಅಡಿಗಲ್ಲನ್ನು 30ತಿಂಗಳ ಹಿಂದೆ ಅವರೇ ಹಾಕಿದ್ದರು!

ಅದಿರಲಿ, ಇಷ್ಟೊಂದು ತರಾತುರಿಯಲ್ಲಿ ಈ 31% 'ಉದ್ಘಾಟನೆ'ಯ ಅಗತ್ಯವಾದರೂ ಏನಿತ್ತು?

ಏಕೆಂದರೆ ಮರುದಿನವೇ ಪಕ್ಕದ ಉತ್ತರಪ್ರದೇಶದ ಒಂದು ಲೋಕಸಭಾ ಕ್ಷೇತ್ರದಲ್ಲಿ ಮತ್ತೊಂದು ವಿಧಾನಸಭಾ ಕ್ಷೇತ್ರದಲ್ಲಿ ಉಪಚುನಾವಣೆ ನಡೆಯುವುದಿತ್ತು. ಅಲ್ಲಿ ಪ್ರಚಾರದ ಅವಧಿ ಮುಗಿದಿತ್ತು. ಆದರೆ ಈ 'ಅಭಿವೃದ್ಧಿ' ರೋಡ್ ಶೋ ಟಿವಿಯಲ್ಲಿ ವ್ಯಾಪಕ ಪ್ರಚಾರ ಪಡೆಯುವುದಿತ್ತು ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ. ಇದು ನಿಜವಾಗಿದ್ದರೆ, ದೇಶದ ಪ್ರಧಾನ ಮಂತ್ರಿಯೊಬ್ಬರು ಹೀಗೆ ಮಾಡುವುದು ಸರಿಯೇ ಎಂಬ ಬಗ್ಗೆ ಚರ್ಚೆಗಳು ನಡೆದಿವೆ. ಈ ಚರ್ಚೆಗಳಲ್ಲಿ ಭಾಗವಹಿಸಿದ ಮಾಜಿ ಮುಖ್ಯ ಚುನಾವಣಾ ಆಯುಕ್ತರುಗಳ ಪ್ರಕಾರ ಕಾನೂನು ಪ್ರಕಾರ ಇದರಲ್ಲಿ ಆಕ್ಷೇಪಿಸುವಂತದ್ದೇನಿಲ್ಲ. ಏಕೆಂದರೆ ಚುನಾವಣಾ ನೀತಿ ಸಂಹಿತೆ ಸಂಬಂಧಪಟ್ಟ ಚುನಾವಣಾ ಕ್ಷೇತ್ರದಲ್ಲಿ ಮಾತ್ರ ಅನ್ವಯವಾಗುತ್ತದೆ. ಆದರೆ ಈಗಿನ ತಂತ್ರಜ್ಞಾನದಿಂದಾಗಿ ಪ್ರಚಾರಕ್ಕೆ ಎಲ್ಲೆಯಿಲ್ಲವಾದ್ದರಿಂದ ಮತದಾನ ನಡೆಯುವ ಕ್ಷೇತ್ರದ ಸಮೀಪದಲ್ಲಿಯೇ ಟಿವಿ ಬಾಜಾಬಜಂತ್ರಿಯೊಂದಿಗೆ ಇದನ್ನು ಮಾಡುವುದನ್ನು ತಪ್ಪಿಸಬಹುದಿತ್ತು ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ ಹಿಂದಿನ ದಿನವಷ್ಟೇ ಘೋಷಿಸಿದ್ದ 'ಸಾಫ್ ನಿಯತ್'ನ ಪ್ರಶ್ನೆ.

ಅದಿರಲಿ, **ಇದರಿಂದೇನೂ ಚುನಾವಣೆಯ ಮೇಲೆ ಪ್ರಭಾವವಾಗಿಲ್ಲ ಎಂದು 'ಭಕ್ತ'ರುಗಳು ವಾದಿಸಬಹುದು. ಏಕೆಂದರೆ ಎರಡೂ ಚುನಾವಣೆಗಳಲ್ಲಿ ಆಳುವ ಪಕ್ಷ ಸೋತಿದೆ!** ಲೋಕಸಭಾ ಕ್ಷೇತ್ರದಲ್ಲಿ ಕಳೆದ ಬಾರಿ 75%ದಷ್ಟು ಮತದಾನವಾಗಿತ್ತು, 2.5ಲಕ್ಷ ಮತಗಳ ಅಂತರದಿಂದ ಆಳುವ ಪಕ್ಷದ ಅಭ್ಯರ್ಥಿ ಗೆದ್ದಿದ್ದರು, ಈ ಬಾರಿ ಕೇವಲ 54% ಮತದಾನವಾಗಿದೆ, ಆಳುವ ಪಕ್ಷದ ಅಭ್ಯರ್ಥಿ ಸುಮಾರು 40 ಸಾವಿರ ಮತಗಳಿಂದ ಸೋತಿದ್ದಾರಷ್ಟೇ, ತಮ್ಮ ಬೆಂಬಲಿಗರು ಮತದಾನದಲ್ಲಿ ಭಾಗವಹಿಸಿದ್ದರೆ ಹೀಗಾಗುತ್ತಿರಲಿಲ್ಲ ಎಂದೊಬ್ಬ ಆಳುವ ಪಕ್ಷದ ಮುಖಂಡರು ವಿವರಣೆ ಕೊಡಲು ಪ್ರಯತ್ನಿಸಿದ್ದಾರೆ. ಹಾಗಿದ್ದರೆ ಅವರ **ಸುಮಾರು 20% ಮತದಾರರು 'ಸಾಫ್ ನಿಯತ್'ನ ಉಲ್ಲಂಘನೆಯಿಂದ ಬೇಸತ್ತು ಮತಗಟ್ಟೆಗಳಿಗೆ ಬರಲಿಲ್ಲವೇ** ಎಂದೇನೂ ಪತ್ರಕರ್ತರು ಅವರನ್ನು ಪ್ರಶ್ನಿಸಿದಂತಿಲ್ಲ.

ಏರ್ ಇಂಡಿಯಾ ಮಾರಾಟ

–ಖಾಸಗಿಯವರಿಗೆ ಇನ್ನಷ್ಟು ರಿಯಾಯ್ತಿಗಳು?

ಸಾರ್ವಜನಿಕ ವಲಯದ ವಿಮಾನಯಾನ ಸಂಸ್ಥೆ ಏರ್ ಇಂಡಿಯಾದ 74% ಶೇರುಗಳನ್ನು ಹಿಂಪಡೆದು ಅದನ್ನು ಖಾಸಗೀಕರಿಸಲು ಮಾರ್ಚ್ ತಿಂಗಳಲ್ಲಿ ಅಚ್ಛೇ ದಿನ್ ಸರಕಾರ ಬಹಳಷ್ಟು ವಿರೋಧಗಳ ನಡುವೆಯೂ ನಿರ್ಧರಿಸಿತು. ಅದನ್ನು ಮಾರಾಟಕ್ಕೆ ಇಟ್ಟಿತು. ಕೊಳ್ಳಬಯಸುವವರು ತಮ್ಮ 'ಬಿಡ್'ಅನ್ನು ಮೇ 14 ರೊಳಗೆ ಸಲ್ಲಿಸಬೇಕು ಎಂದು ಪ್ರಕಟಿಸಲಾಯಿತು. ಯಾವ ಬಿಡ್ ಕೂಡ ಬರಲಿಲ್ಲ. ಶರತ್ತುಗಳನ್ನು ತುಸು ಸಡಿಲಿಸಿ, ಸಂಸ್ಥೆಯ 52,000 ಕೋಟಿ ರೂ. ಸಾಲ ಹೊರೆಯಲ್ಲಿ ಅರ್ಧದಷ್ಟನ್ನು ಸರಕಾರವೇ ವಹಿಸಿಕೊಳ್ಳುವುದಾಗಿ ಹೇಳಿ ಕೊನೆಯ ದಿನಾಂಕವನ್ನು ಮೇ 31 ರ ವರೆಗೆ ಮುಂದೂಡಲಾಯಿತು. ಈಗ ಆ ಅವಧಿಯೂ ಮುಗಿದಿದೆ. ಯಾವ 'ಬಿಡ್' ಕೂಡ ಬಂದಿಲ್ಲ. ಏರ್ ಇಂಡಿಯಾ ಮಾರಾಟಕ್ಕೆಂದೇ ನೇಮಿಸಿದ ಮಂದಿ ಏರ್ ಫ್ರಾನ್ಸ್, ಜರ್ಮನಿಯ ಲುಫ್ತಾನ್ಸ, ಸಿಂಗಪುರ ಏರ್‌ಲೈನ್ಸ್ ಮುಂತಾದ ಹಲವು ಅಂತರ್ರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳ ಅಧಿಕಾರಿಗಳನ್ನು ಭೇಟಿಯಾದರು. ಆರಂಭದಲ್ಲಿ ಇವರೆಲ್ಲ ಆಸಕ್ತಿ ತೋರಿಸಿದರೂ ನಂತರ ಕೈಬಿಟ್ಟರು. ದೇಶೀ ವಿಮಾನಯಾನ ಸಂಸ್ಥೆಗಳು ಲಾಭದಾಯಕವಾದ ಅಂತರ್ರಾಷ್ಟ್ರೀಯ ರೂಟ್‌ಗಳಲ್ಲಿ ಮಾತ್ರ ಆಸಕ್ತಿ ತೋರಿಸಿವೆ.

ಈಗ ಅವಧಿ ಮುಗಿದಿರುವುದರಿಂದ ಸರಕಾರ ಮತ್ತೆ ಕೂತು ಇನ್ನೆರಡು ವಾರಗಳಲ್ಲಿ ನಿರ್ಧರಿಸುತ್ತದೆಯಂತೆ. ಅಂದರೆ **ಶರತ್ತುಗಳನ್ನು ಮತ್ತಷ್ಟು ಸಡಿಲಿಸಲಾಗುವುದೇ? ಸಾಲದ ಹೊರೆಯನ್ನು ಪೂರ್ಣವಾಗಿ ತಾನೇ ವಹಿಸಿಕೊಂಡು ಮಾರಲು ಕೂಡ ಸರಕಾರ ಸಿದ್ಧವಾಗುತ್ತದೆಯೇ? ಸಿದ್ಧವಿದ್ದರೆ ಅದನ್ನು ಖಾಸಗೀಕರಿಸುವುದಾದರೂ ಏಕೆ ಎಂಬ ಪ್ರಶ್ನೆಗೆ ಅದು ಉತ್ತರಿಸಬೇಕಾಗುತ್ತದೆ.**

ಏಕೆಂದರೆ ನಿಜವಾಗಿ ಏರ್‌ಇಂಡಿಯಾ ಕಾರ್ಯನಿರ್ವಹಣೆಯಲ್ಲಿ ನಷ್ಟ ಮಾಡುತ್ತಿಲ್ಲ, ಸತತವಾಗಿ ಲಾಭ ಮಾಡುತ್ತಿದೆ. ಆದರೆ ಸರಕಾರಗಳ ತಪ್ಪು ನಿರ್ಧಾರಗಳಿಂದಾಗಿ 52000 ಕೋಟಿ ನಷ್ಟವನ್ನು ಅನುಭವಿಸುವಂತಾಗಿದೆ. ಇದನ್ನು ಖಾಸಗೀಕರಿಸಿದ ಮೇಲೆ ದೇಶದಲ್ಲಿ ಖಾಸಗಿ ವಿಮಾನಯಾನ ಸಂಸ್ಥೆಗಳದ್ದೇ ದರ್ಬಾರು, ಲಾಭವೇ ಮುಖ್ಯವಾಗಿರುವ ಖಾಸಗಿಯವರಿಂದ ದೇಶದ ಒಟ್ಟು ವಿಮಾನಸೇವೆಯ ಮೇಲೆ ಎಂತಹ ಪರಿಣಾಮ ಉಂಟಾಗಬಹುದು ಎಂದು ಸರಕಾರ ಈಗಲಾದರೂ ಯೋಚಿಸುತ್ತದೆಯೇ?



ವ್ಯಂಗ್ಯಚಿತ್ರ: ಕೀರ್ತೀಶ್, ಬಿಬಿಸಿ ನ್ಯೂಸ್

ವಾಲ್‌ಮಾರ್ಟ್ ಸ್ವಾಧೀನಕ್ಕೆ ಫ್ಲಿಪ್ ಕಾರ್ಟ್

ದೇಶಕ್ಕೇನೂ ಪ್ರಯೋಜನವಿಲ್ಲ, ಚಿಲ್ಲರೆ ವ್ಯಾಪಾರಿಗಳಿಗೆ ಮರಣ ಶಾಸನ



ಜಾಗತಿಕ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಚಿಲ್ಲರೆ ವ್ಯಾಪಾರಿಗಳೊಂದಿಗೆ ಸ್ಪರ್ಧಿಸಲು ಅವಕಾಶ ನೀಡುವುದಿಲ್ಲ ಎಂದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನ್ನು ಉಲ್ಲಂಘಿಸಿರುವುದು ಹೊಸದೇನಲ್ಲ. ಈ ರೀತಿಯ ಉಲ್ಲಂಘನೆಯನ್ನು ಅದು ಇತರ ಎಲ್ಲಾ ರಂಗದಲ್ಲೂ ಅಂದರೆ ರೈತರು, ಕಾರ್ಮಿಕರು, ವಿದ್ಯಾರ್ಥಿಗಳೊಂದಿಗೂ ಮಾಡಿದೆ. ಅದನ್ನು ಚಿಲ್ಲರೆ ವ್ಯಾಪಾರಿಗಳ ವಿಷಯದಲ್ಲೂ ಪುನರಾವರ್ತಿಸಿದೆ. ನಮ್ಮ ದಿನ ನಿತ್ಯದ ಅಗತ್ಯಗಳನ್ನು ಪೂರೈಸುವ ಲಕ್ಷಾಂತರ ಚಿಲ್ಲರೆ ವ್ಯಾಪಾರಿಗಳಿಗೆ ಅಮೆಜಾನ್ ಮತ್ತು ವಾಲ್ ಮಾರ್ಟ್ ಒಂದು ಮರಣಶಾಸನವಾಗಿದೆ ಎನ್ನುತ್ತಾರೆ **ಪ್ರಬೀರ್ ಪುರಕಾಯಸ್ಥ**. ಅನುವಾದ: **ಭಾರತಿ ಗಾಂವ್ಕರ್**

ವಾಲ್‌ಮಾರ್ಟ್ 14 ಶತಕೋಟಿ ಡಾಲರ್‌ಗೆ ಫ್ಲಿಪ್‌ಕಾರ್ಟ್‌ಅನ್ನು ಸ್ವಾಧೀನ ಪಡಿಸಿಕೊಂಡಿದ್ದು ಭಾರತೀಯ ವಾಣಿಜ್ಯ ಪತ್ರಿಕೆಗಳಲ್ಲಿ ಬಿರುಗಾಳಿ ಎಬ್ಬಿಸಿದೆ. ಭಾರತದ ಇತಿಹಾಸದಲ್ಲಿಯೇ ಅತಿದೊಡ್ಡ ವ್ಯವಹಾರ, ಇದುವರೆಗಿನ ಜಾಗತಿಕ ಇ-ವಾಣಿಜ್ಯ ಸ್ವಾಧೀನ ಎಂದೇ ಹೇಳಲಾಗುತ್ತಿದೆ. ಆದರೆ ಈ ಬರವಣಿಗೆಗಳಲ್ಲಿ, ಭಾರತದ ಮಾರುಕಟ್ಟೆಯ ಮೇಲೆ ಪ್ರಾಬಲ್ಯ ಹೊಂದಿರುವ 4 ಕೋಟಿ ನೌಕರರನ್ನು ಹೊಂದಿರುವ ಜಗತ್ತಿನ 2 ಅತಿದೊಡ್ಡ ಕ್ರೂರ ಉದ್ಯೋಗದಾತ ಅಮೇಜಾನ್ ಮತ್ತು ವಾಲ್‌ಮಾರ್ಟ್‌ನಲ್ಲಿ ಭಾರತದ ಚಿಲ್ಲರೆ ವ್ಯಾಪಾರಿಗಳಿಗೆ ಇದರ ಅರ್ಥವೇನು 'ಎಂದು ಬರೆದಿಲ್ಲ. ಅಥವಾ ಬಿಜೆಪಿ ಸರ್ಕಾರ ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕೆ ಅವಕಾಶ ಮಾಡುವುದಿಲ್ಲ ಎಂಬ ಚುನಾವಣಾ ವಾಗ್ದಾನವನ್ನು ಸಾರಾ ಸಗಟಾಗಿ ಉಲ್ಲಂಘಿಸಿದ ಎಂಬ ಸಂಗತಿಯನ್ನೂ ಗಮನಿಸಿದಂತಿಲ್ಲ. ಇ-ವಾಣಿಜ್ಯ ಎನ್ನುವ ಮುಖವಾಡದ ಹಿಂದೆ ಈ ಕಾರ್ಯ ನಡೆದಿದೆ. ಇನ್ನು ಮುಂದೆ ವಾಲ್‌ಮಾರ್ಟ್ ಮತ್ತು ಅಮೇಜಾನ್ ಈ ಎರಡು ಜಾಗತಿಕ ಗುತ್ತೇದಾರಿ ಕಂಪನಿಗಳು, ಭಾರತದ ಚಿಲ್ಲರೆ ವ್ಯಾಪಾರವನ್ನು ಸಂಪೂರ್ಣವಾಗಿ ತಮ್ಮ ಪ್ರಾಬಲ್ಯಕ್ಕೆ ಒಳಪಡಿಸಲಿವೆ.

ಭಾರತದಲ್ಲಿ ಎಂತಹ ದುರ್ಘಟನೆ ನಡೆಯಲಿದೆ ಎಂದು ನೋಡಬೇಕಾದರೆ, ನಾವು ಭಾರತದ ಅತಿದೊಡ್ಡ ಇ-ವಾಣಿಜ್ಯ ವೇದಿಕೆಯಾದ ಫ್ಲಿಪ್‌ಕಾರ್ಟ್ ಎಷ್ಟು ಮಂದಿಯನ್ನು ದುಡಿಸಿಕೊಳ್ಳುತ್ತಿದೆ ಎಂದು ನೋಡಿದರೆ ಸಾಕಾಗುತ್ತದೆ. ಅದು 8000 ಪೂರ್ಣಾವಧಿ ಮತ್ತು 20000 ಅರೆಕಾಲಿಕ ಉದ್ಯೋಗಿಗಳನ್ನಷ್ಟೇ ನೇಮಿಸಿಕೊಂಡಿದೆ. ಅತ್ತ ಭಾರತದ ಚಿಲ್ಲರೆ ವ್ಯಾಪಾರ ವಲಯದಲ್ಲಿ 4 ಕೋಟಿ ಜನರಿದ್ದಾರೆ, ಬಹುತೇಕ ಸ್ವ-ಉದ್ಯೋಗಿಗಳು ಅಥವಾ ಕುಟುಂಬದ ಸದಸ್ಯರ ದುಡಿಮೆಯನ್ನು ಬಳಸುವವರು.

ಭಾರತೀಯ ಬಂಡವಾಳಶಾಹೀ ವರ್ಗ ಅಥವ ಅವರ ಮುಖವಾಣಿಗಳು ಕಾರ್ಮಿಕರ ಸಮಸ್ಯೆಗಳಿಗೆ ಅವರ ಕಾರ್ಖಾನೆಗಳಲ್ಲಾಗಲೀ ಅಥವಾ ಒಟ್ಟಾರೆಯಾಗಿ ತಲೆಕೆಡಿಸಿಕೊಳ್ಳದಿರಬಹುದು. ಆದರೆ **ಈ 14 ಬಿಲಿಯನ್ ಡಾಲರ್ ಭಾರತದ ಆರ್ಥಿಕತೆಗೆ ಹರಿದು ಬರುತ್ತದೆಯೇ? ಉತ್ತರ 'ಇಲ್ಲ'. ಕೇವಲ ಸುಮಾರು 2 ಬಿಲಿಯನ್ ಡಾಲರ್ ಈ ಕಂಪನಿಗೆ, ಆಮೂಲಕ ದೇಶದ ಆರ್ಥಿಕ ವ್ಯವಸ್ಥೆಯೊಳಕ್ಕೆ ಬರಬಹುದು.** ಉಳಿದ 12 ಕೋಟಿ ಡಾಲರ್‌ಗಳು ವಿವಿಧ ಶೇರುದಾರರಿಗೆ, ಬಹುತೇಕ ಎಲ್ಲಾ ವೆಂಚರ್ ಅಂದರೆ ಸಾಹಸೋದ್ಯಮ ಬಂಡವಾಳದವರಿಗೆ ನೇರವಾಗಿ ಹೋಗುತ್ತದೆ, ಭಾರತದ ಅರ್ಥಿಕ ವ್ಯವಸ್ಥೆಯೊಳಕ್ಕೆ ಪ್ರವೇಶಿಸುವುದೇ ಇಲ್ಲ. ಮಾರಾಟ ಪ್ರಕ್ರಿಯೆ ಸಿಂಗಾಪುರದಲ್ಲಿ ನಡೆಯುತ್ತಿರುವ ಕಾರಣಕ್ಕಾಗಿ **ಫ್ಲಿಪ್‌ಕಾರ್ಟ್ ಷೇರುಗಳ ಮಾರಾಟದಿಂದಾಗಿ, ಈ ವೆಂಚರ್ ಬಂಡವಾಳಿಗರಿಗೆ ಸಿಗುತ್ತಿರುವ ಬಂಪರ್ ಲಾಭಕ್ಕೆ ತೆರಿಗೆಯನ್ನು ಸಹ ವಿಧಿಸುವಂತಿಲ್ಲ.** ಇದೆಲ್ಲ ವೊಡಾಫೋನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಪರಿಣಾಮ- ಯುಪಿಎ ಸರ್ಕಾರದ ಅವಧಿಯಲ್ಲಿ ಪ್ರಣಬ್ ಮುಖರ್ಜಿ ಹಣಕಾಸು ಮಂತ್ರಿಯಾಗಿ ಅದನ್ನು ಪಡೆಯಲು ಪ್ರಯತ್ನಿಸಿದ್ದರು, ಆ ನಂತರ ಅರುಣ ಜೇಟ್ಲಿ ಅದನ್ನು ಕೆಡಿಸಿದರು.

ಫ್ಲಿಪ್‌ಕಾರ್ಟ್‌ನ ಬೃಹತ್ ಮಾರಾಟದಿಂದ ಯಾರಿಗೆ ಎಷ್ಟು ಲಾಭವಾಗುತ್ತಿದೆ ಎಂದು ನೋಡುವುದಾದರೆ ಮೊದಲು ಪ್ರಸ್ತುತ ಷೇರುದಾರರು ಯಾರೆಂದು ನೋಡಬೇಕು. ಕೆಳಗಿನ ಕೋಷ್ಟಕ ನೋಡಿ:

ಸಾಫ್ಟ್ ಬ್ಯಾಂಕ್ (ಜಪಾನ್)	23.6%
ಟೈಗರ್ ಗ್ಲೋಬಲ್ (ಯು.ಎಸ್.)	20.5%
ನಸ್ಪರ್ಸ್ (ಯು.ಎಸ್.)	14.6%
ಎಕ್ಸೆಲ್ ಇಂಡಿಯಾ (ಎಕ್ಸೆಲ್ ಯು.ಎಸ್.ಗೆ ಸೇರಿದ್ದು)	6.4%
ಇಬೆ (ಯು.ಎಸ್.)	6.0%
ಟೆನ್‌ಸೆಂಟ್ (ಚೀನಾ)	6.0%
ಮೈಕ್ರೊಸಾಫ್ಟ್ (ಯು.ಎಸ್.)	6.0%
ಸಚಿನ್ ಬನ್ಸಲ್ (ಭಾರತೀಯ & ಪ್ರಾಯೋಜಕ)	5.2%
ಬಿನ್ನಿ ಬನ್ಸಲ್ (ಭಾರತೀಯ & ಪ್ರಾಯೋಜಕ)	5.2%
ಇತರೆ (ಬಹುಪಾಲು ವಿದೇಶಿ ವೆಂಚರ್ ಫಂಡ್‌ಗಳು)	6.2%

ಈ ಕೋಷ್ಟಕದಿಂದ ತಿಳಿದುಬರುವಂತೆ 90% ದಷ್ಟು ಪಾಲಿ ಇರುವ ಷೇರುದಾರರು ವೆಂಚರ್ ಫಂಡ್‌ಗಳು (ಸಾಹಸೋದ್ಯಮ ಬಂಡವಾಳ ನಿಧಿಗಳು) ಎಂದೆನಿಸಿಕೊಂಡವರದ್ದು. ಇವೆಲ್ಲವುಗಳ ಮುಖ್ಯ ಕಛೇರಿ ವಿದೇಶಗಳಲ್ಲಿವೆ. ಈ ಎಲ್ಲ ಕಂಪನಿಗಳು ಫ್ಲಿಫ್‌ಕಾರ್ಟ್‌ನ ಮಾರಾಟದಿಂದ ಬೃಹತ್ ಲಾಭ ಪಡೆಯುತ್ತವೆ. ಇಲ್ಲಿ ಕೊಟ್ಟ ಬಹುತೇಕ ಕಂಪನಿಗಳು ಸಂಪೂರ್ಣವಾಗಿ ಹೊರನಡೆಯುತ್ತವೆ. ಈ ಷೇರುಗಳ ಮಾರಾಟದಿಂದ ಭಾರತದ ಆರ್ಥಿಕತೆ ಒಂದು ಪೈಸೆಯನ್ನೂ ಕಾಣುವುದಿಲ್ಲ.

ವೆಂಚರ್ ಫಂಡ್‌ಗಳು ವಾಸ್ತವವಾಗಿ 'ರಣಹದ್ದು ನಿಧಿ'ಗಳೇ. ಸಾಫ್ಟ್‌ಬ್ಯಾಂಕ್‌ನ ಉದಾಹರಣೆ ನೋಡಿದರೆ ಎಲ್ಲ ಸ್ಪಷ್ಟವಾಗಬಹುದು. ಅವರು ಕೇವಲ 8 ತಿಂಗಳ ಹಿಂದಷ್ಟೇ ಫ್ಲಿಪ್‌ಕಾರ್ಟ್‌ನಲ್ಲಿ 2.5 ಬಿಲಿಯನ್ ಡಾಲರ್ ಹೂಡಿಕೆ ಮಾಡಿದ್ದರು. ಅದರ ಮೇಲೆ ಈಗ 1.5 ಬಿಲಯನ್ ಡಾಲರ್ ಲಾಭ ಪಡೆಯುತ್ತಾರೆ, ಅಂದರೆ ಕೇವಲ 8 ತಿಂಗಳ ಅವಧಿಯಲ್ಲಿ 60% ಲಾಭ. ವೆಂಚರ್ ಫಂಡ್‌ಗಳು ಕೆಲಸ ಮಾಡುವ ಪರಿಯಿದು. ನಿಜವಾದ ಮಾರುಕಟ್ಟೆಯ ಮೌಲ್ಯ ಇರುವ ಸಂಕಷ್ಟದ ಉದ್ಯಮಗಳಲ್ಲಿ ಅವರು ಹೂಡಿಕೆ ಮಾಡುತ್ತಾರೆ. ಆ ಮೂಲಕ ಅದನ್ನು ಬೇಗನೇ ಮಾರಾಟ ಮಾಡಲು ನೆರವಾಗಿ, ಅದರಿಂದ ಅಪಾರ ಲಾಭಗಳಿಸುತ್ತಾರೆ.

ಫ್ಲಿಪ್‌ಕಾರ್ಟ್ ತನ್ನ 77% ಷೇರುಗಳನ್ನು 14 ಬಿಲಿಯನ್ ಡಾಲರ್‌ಗೆ ಮಾರಾಟ ಮಾಡಿದ ಮೇಲೆ ಅದರ ಮಾರುಕಟ್ಟೆಯ ಮೌಲ್ಯ ಈಗ 20 ಬಿಲಿಯನ್ ಡಾಲರ್. ನಿರಂತರವಾಗಿ ನಷ್ಟವನ್ನು ಉಂಟುಮಾಡುತ್ತಿದ್ದ ಕಂಪನಿ ಅಂದರೆ 10 ವರ್ಷದ ಅವಧಿಯಲ್ಲಿ 24,000 ಕೋಟಿ ರೂ(3.5 ಬಿಲಿಯನ್ ಡಾಲರ್) ನಷ್ಟ ಪೇರಿಸಿದ್ದ ಒಂದು ಕಂಪನಿಯ ಮೌಲ್ಯ ಮಾರುಕಟ್ಟೆಯಲ್ಲಿ ಇಂದು 20 ಬಿಲಿಯನ್ ಡಾಲರ್ ಹೇಗೆ?

ಡಿಜಿಟಲ್ ಆರ್ಥಿಕ ವ್ಯವಸ್ಥೆಯಲ್ಲಿ ಅಥವಾ ತಂತ್ರಜ್ಞಾನ ವಲಯ ಎಂದು ಕರೆಯುವ ವ್ಯವಸ್ಥೆಯಲ್ಲಿ ತತ್‌ಕ್ಷಣದ ಲಾಭ ಮುಖ್ಯವಲ್ಲ. ಮಾರುಕಟ್ಟೆಯ ನಿರ್ದಿಷ್ಟ ವಿಭಾಗದ ಮೇಲೆ ಏಕಸ್ವಾಮ್ಯತೆ ಪಡೆಯುವುದು ಮುಖ್ಯವಾಗುತ್ತದೆ. ಅಮೆಜಾನ್ ಒಂದು ಲಾಭದಾಯಕ ಉದ್ದಿಮೆ ಆಗಲು 9 ವರ್ಷ ತೆಗೆದುಕೊಂಡಿತು. ಗೂಗಲ್ ತನ್ನ ಸರ್ಚ್ ಇಂಜಿನ್ ಅಂದರೆ ಅಂತರ್ಜಾಲದಲ್ಲಿ ಮಾಹಿತಿ ಹುಡುಕುವ ವ್ಯವಸ್ಥೆಯನ್ನು ಪರಿಚಯಿಸಿದಾಗ ಅದರ ಮುಂದೆ ಯಾವುದೇ ವ್ಯವಹಾರ ಮಾದರಿ ಇರಲಿಲ್ಲ. ಅದು ಸರ್ಚ್ ಮಾರುಕಟ್ಟೆಯಲ್ಲಿ ಏಕಸ್ವಾಮ್ಯತೆ ನಿರ್ಮಿಸಿತು. ಆ ನಂತರವೇ ಅದು ಜಾಹಿರಾತುಗಳನ್ನು ತನ್ನ ವ್ಯವಹಾರ ಮಾದರಿಯಾಗಿ ಮಾಡಿಕೊಳ್ಳುವ ವಿಚಾರವನ್ನು ಕಂಡುಕೊಂಡಿತು. ಫೇಸ್‌ಬುಕ್ ಕೂಡ ಅನುಸರಿಸಿದ್ದು ಇದೇ ಮಾದರಿಯನ್ನೇ.

ವೆಂಚರ್ ಕ್ಯಾಪಿಟಲ್ ಅಂದರೆ ಸಾಹಸ ಬಂಡವಾಳ ಹಣಕಾಸು ಬಂಡವಾಳದ ಇತ್ತೀಚಿನ ಅವತಾರ. ಇದು ಮಾರುಕಟ್ಟೆಯಲ್ಲಿ ಏಕಸ್ವಾಮ್ಯತೆ ನಿರ್ಮಿಸಲು ಸಾಧ್ಯ ಎಂದು ಕಾಣುವ ಕಂಪನಿಗಳಲ್ಲಿ ಹೂಡಿಕೆ ಮಾಡುತ್ತದೆ. ಒಮ್ಮೆ ಏಕಸ್ವಾಮ್ಯತ್ವವನ್ನು ನಿರ್ಮಿಸಿದ ಮೇಲೆ ಆ ಗುತ್ತೇದಾರಿಕೆಯನ್ನು ಬೃಹತ್ ಲಾಭವಾಗಿ ಮಾರ್ಪಡಿಸಲು ಬಳಸಿಕೊಳ್ಳಬಹುದು ಎಂದು ಅವರಿಗೆ ತಿಳಿದಿದೆ. ಒಮ್ಮೆ ಏಕಸ್ವಾಮ್ಯತ್ವ ಸಾಧಿಸಿದ ಮೇಲೆ, ಸಿಗಬಹುದಾದ ಬೃಹತ್ ಲಾಭಗಳ ನಿರೀಕ್ಷೆಯೇ ಈ ಎಲ್ಲ ತಂತ್ರಜ್ಞಾನ ಸಂಸ್ಥೆಗಳಿಗೆ ಮತ್ತು ಡಿಜಿಟಲ್ ಗುತ್ತೇದಾರಿಗಳಿಗೆ ಅವರ ಮಾರುಕಟ್ಟೆ ಮೌಲ್ಯವನ್ನು ಒದಗಿಸುತ್ತದೆ.

ಈ ಕಾರಣಕ್ಕಾಗಿಯೇ ಇಂದು ವಿಶ್ವದಲ್ಲಿ ಈ ಕೆಳಗಿನ 5 ಪ್ರಮುಖ ಕಂಪನಿಗಳು ಆಪಲ್, ಅಲ್ಫಾಬೆಟ್ (ಗೂಗಲ್), ಮೈಕ್ರೋಸಾಫ್ಟ್, ಅಮೆಜಾನ್ ಮತ್ತು ಫೇಸ್‌ಬುಕ್ ಡಿಜಿಟಲ್ ಏಕಸ್ವಾಮ್ಯಗಳಾಗಿವೆ.

ಆ ನಂತರ, ಫೇಸ್‌ಬುಕ್ 8ನೇ ಸ್ಥಾನಕ್ಕೆ ಇಳಿಯಿತು ಮತ್ತು ಚೀನಾದ ದೈತ್ಯ ಸಾಮಾಜಿಕ ಜಾಲತಾಣ ಮಾಧ್ಯಮ ಮತ್ತು ಸಾಹಸ ನಿಧಿಯಾದ ಟೆನ್‌ಸೆಂಟ್ 5ನೇ ಸ್ಥಾನಕ್ಕೇರಿದೆ.

ಜಾಗತಿಕ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಚಿಲ್ಲರೆ ವ್ಯಾಪಾರಿಗಳೊಂದಿಗೆ ಸ್ಪರ್ಧಿಸಲು ಅವಕಾಶ ನೀಡುವುದಿಲ್ಲ ಎಂದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದನ್ನು ಉಲ್ಲಂಘಿಸಿರುವುದು ಹೊಸದೇನಲ್ಲ. ಈ ರೀತಿಯ ಉಲ್ಲಂಘನೆಯನ್ನು ಅದು ಇತರ ಎಲ್ಲಾ ರಂಗದಲ್ಲೂ ಅಂದರೆ ರೈತರು, ಕಾರ್ಮಿಕರು, ವಿದ್ಯಾರ್ಥಿಗಳೊಂದಿಗೂ ಮಾಡಿದೆ. ಅದನ್ನು ಚಿಲ್ಲರೆ ವ್ಯಾಪಾರಿಗಳ ವಿಷಯದಲ್ಲೂ ಪುನರಾವರ್ತಿಸಿದೆ. **ಮಾರುಕಟ್ಟೆಯಲ್ಲಿ ವಿದೇಶಿ ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರವನ್ನು ಪ್ರವೇಶಿಸುವ ಅವಕಾಶ ನೀಡುವ/ನೀಡದಿರುವ ವಿಷಯದಲ್ಲಿ ಬಿಜೆಪಿ ಎಂದೂ ಗಂಭೀರವಾಗಿರಲಿಲ್ಲ. ಇದರಿಂದಾಗಿಯೇ ಈ ಅಮೆಜಾನ್‌ಗೆ ಅವಕಾಶ ನೀಡಿತು, ಮತ್ತು ಫ್ಲಿಫ್‌ಕಾರ್ಟನ್ನು ವಿದೇಶಿ ಸಾಹಸೋದ್ಯಮ ಬಂಡವಾಳವು ಸ್ವಾಧೀನಪಡಿಸಿಕೊಂಡ ನಂತರ ಭಾರತೀಯ ಮಾರುಕಟ್ಟೆಯಲ್ಲಿ ಮುಕ್ತವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಟ್ಟಿದೆ.** ಇವು ಸ್ಪಷ್ಟವಾಗಿ ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರಿಗಳೇ ಆಗಿವೆ. ಅವರು ತಮ್ಮ ಜಾಲತಾಣ ಮತ್ತು ಆಪ್ ತಂತ್ರಾಂಶದ ಮೂಲಕ ಮಾರಾಟ ಕಾರ್ಯ ಮಾಡುತ್ತಿದ್ದಾರೆ ಎನುವಾಗ, ತಮ್ಮ ಅವರು ತಮ್ಮ ಜಾಲತಾಣದ ಮೂಲಕ ಎಲ್ಲಾ ಸಂಭಾವ್ಯ ಸರಕುಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ಸಂಗತಿಯೇನೂ ಬದಲಾಗುವುದಿಲ್ಲ.

ಭಾರತದ ಚಿಲ್ಲರೆ ವ್ಯಾಪಾರಿಗಳ ಅಸೋಷಿಯೇಶನ್ ಮತ್ತೆ-ಮತ್ತೆ ಭಾರತೀಯ ಬಹು ಬ್ರಾಂಡ್ ಚಿಲ್ಲರೆ ಮಾರುಕಟ್ಟೆಯಲ್ಲಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಗೆ ಅವಕಾಶವಿಲ್ಲ ಎಂಬ ನಿಯಂತ್ರಣದ ಪ್ರಶ್ನೆಯನ್ನು ಎತ್ತುತ್ತ ಬಂದಿದೆ, ದಿಲ್ಲಿ ಹೈಕೋರ್ಟಿನಲ್ಲಿ ಈ ಕುರಿತು ಒಮದು ಅರ್ಜಿಯನ್ನೂ ಹಾಕಿದೆ. ಇದನ್ನು ಬದಿಗೊತ್ತಲು ಬಿಜೆಪಿ ಮತ್ತು ಅದರ ಹಣಕಾಸು ಮಂತ್ರಿಗಳು ಕಟ್ಟಿದ ಕಟ್ಟು ಕತೆ ಏನು?

ಈ 'ಇ-ಕಾಮರ್ಸ್' ಕಂಪನಿಗಳು ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುತ್ತಿಲ್ಲ, ಕೇವಲ ಗ್ರಾಹಕರು ಮತ್ತು ಮಾರಾಟಗಾರರು 'ಸಂಧಿಸುವ ಸ್ಥಳ'ವಾಗಿ ಕೆಲಸ ಮಾಡುತ್ತಾರೆ ಎಂಬುದು ಅವರಿಗೆ ಬಿಜೆಪಿ ನೀಡುವ ಉತ್ತರ. ಮೇಲ್ನೋಟಕ್ಕೆ, ಮಾರುವ ಮತ್ತು ಕೊಳ್ಳುವ ಕೆಲಸವನ್ನು ಅಮೇಜಾನ್ ಆಗಲಿ ಫ್ಲಿಪ್‌ಕಾರ್ಟ್ ಆಗಲಿ ಮಾಡುತ್ತಿಲ್ಲ. ಇದು ಹಣಕಾಸು ಸಚಿವಾಲಯದ ಕಪೋಲ ಕಲ್ಪನೆ ಮಾತ್ರ.

ನಾಲ್ಕು ವರ್ಷಗಳ ಕಾಲ ಹಣಕಾಸು ಮಂತ್ರಿಯಾಗಿ ಕೆಲಸ ಮಾಡಿದ ಮೇಲೆ ಶ್ರೀ ಅರುಣ ಜೇಟ್ಲಿ ಕಟ್ಟು ಕತೆಗಳನ್ನು ಬರೆಯಲು ಆರಂಭಿಸಿದರೆ ಒಳ್ಳೆಯದು. ಉದ್ಯೋಗ, ಜಿ.ಡಿ.ಪಿ. ಬೆಳವಣಿಗೆ, ಸುಸ್ತಿ ಬ್ಯಾಂಕ್ ಸಾಲಗಳು ಇತ್ಯಾದಿಗಳನ್ನು ಕುರಿತಂತೆ ಕಾಲ್ಪನಿಕ ಅಂಕಿ ಅಂಶಗಳನ್ನು ಹಂಚುವ ಕಲೆಯನ್ನು ಅವರು ಸಿದ್ಧಿಸಿಕೊಂಡಿದ್ದಾರೆ

ಇನ್ನೊಂದು ಗಮನಿಸಬೇಕಾದ ಭಾಗವೆಂದರೆ, ಅಮೇಜಾನ್,ವಾಲ್‌ಮಾರ್ಟನಂತಹ ಕಂಪನಿಗಳು ತಮ್ಮ ಕಾರ್ಮಿಕರೊಂದಿಗೆ ವ್ಯವಹರಿಸುವ ರೀತಿ. ಈ ಎರಡೂ ಕಂಪನಿಗಳನ್ನು ಅತ್ಯಂತ ದುರುಪಯೋಗ ಪಡಿಸಿಕೊಳ್ಳುವ ಉದ್ಯೋಗದಾತರೆಂದು ಪರಿಗಣಿಸಲಾಗಿದೆ. ಅಮೇಜಾನ್‌ನ ಕೆಲಸದ ಸ್ಥಳ ಅತ್ಯಂತ ವಿಷಮಯ ಎಂದು ಅದರ ಹಲವು ನೌಕರರು ಹೇಳಿದ್ದಾರೆ. ಇವರು ಸುದೀರ್ಘ ಕೆಲಸದ ಸಮಯದಿಂದಾಗಿ ಮತ್ತು ಲೈಂಗಿಕ ಕಿರುಕುಳವೂ ಸೇರಿದಂತೆ ಬಾಸ್‌ಗಳ ನಿಂದನಾತ್ಮಕ ನಡವಳಿಕೆಗಳಿಂದಾಗಿ ಸುಸ್ತಾಗಿರುವ ನೌಕರರು.

ವಾಲ್‌ಮಾರ್ಟ್ ಕೂಡ ಇಂತಹುದೇ ದಾಖಲೆ ಹೊಂದಿರುವ ಕಂಪನಿ. ಅದರ ನೌಕರರು ಸಂಘಟನೆಗಳನ್ನು ಕಟ್ಟಿಕೊಂಡು ಉತ್ತಮ ಕೆಲಸದ ಪರಿಸ್ಥಿತಿಯ ನಿರ್ಮಾಣಕ್ಕಾಗಿ ಮುಷ್ಕರಗಳನ್ನು ಹೂಡಲಾರಂಭಿಸಿದ್ದಾರೆ. ವಾಲ್ ಮಾರ್ಟ್‌ನ ಕಾರ್ಮಿಕ-ವಿರೋಧಿ ನೀತಿಗಳು ಕುಖ್ಯಾತವಾದವುಗಳಾಗಿವೆ. ಅಮೇರಿಕಾದಲ್ಲಿ ಇರುವ ಅತಿಕೆಟ್ಟ ಕೆಲಸದ ಪರಿಸರ ಇರುವ ಕಂಪನಿ ಎನ್ನಲಾಗಿದೆ.

ಈ ಎರಡೂ ಕಂಪನಿಗಳು, ತಮ್ಮ ಬಹುಪಾಲು ನೌಕರರಿಗೆ ಜೀವನಾಧಾರಕ್ಕೆ ಬೇಕಾಗುವದಕ್ಕಿಂತ ಕಡಿಮೆ ವೇತನ ನೀಡುತ್ತವೆ. ಉನ್ನತ ಅಧಿಕಾರಿಗಳಿಗೆ, ಮತ್ತು ಜಾಲತಾಣ ನಿರ್ವಹಿಸುವ ತಂತ್ರಜ್ಞರ ತಂಡಗಳಿಗೆ ಅಥವ ತಾಂತ್ರಿಕ ಮೂಲರಚನೆಗಳನ್ನು ನೋಡಿಕೊಳ್ಳುವವರಿಗೆ ಮಾತ್ರ ಭಾರೀ ಸಂಬಳಗಳನ್ನು ಕೊಡುತ್ತವೆ. ಈ ಎರಡೂ ಕಂಪನಿಗಳ ಅಮೆರಿಕನ್ ನೌಕರರು ಬದುಕುಳಿಯಲು ಸರಕಾರದ ಆಹಾರ ಕೂಪನ್‌ಗಳು ಮತ್ತು ಇತರ ಸಾಮಾಜಿಕ ಭದ್ರತಾ ಸ್ಕೀಮುಗಳನ್ನು ಅವಲಂಬಿಸಬೇಕಾಗಿದೆ. ಅಮೆಜಾನ್ ನೌಕರರು ಆಹಾರ ಕೂಪನ್‌ಗಳನ್ನು ಅವಲಂಬಿಸಿದ್ದರೆ, ಆ ಕಂಪನಿ ತೆರಿಗೆ ವಿನಾಯ್ತಿ ಪಡೆಯುತ್ತದೆ ಎನ್ನಲಾಗಿದೆ. ವಾಲ್ ಮಾರ್ಟ್ ನೌಕರರಿಗೆ ತೆರಿಗೆದಾರರ 6.2 ಬಿಲಿಯನ್ ಡಾಲರ್ ಖರ್ಚಾಗುತ್ತದೆ ಎಂದು ಒಂದು ಈ ಕುರಿತ ಒಂದು ವರದಿ ಹೇಳಿದೆ. ಕಲ್ಯಾಣ ಯೋಜನೆಗಳು ನಿಜವಾಗಿ ಕಾರ್ಮಿಕರಿಗೆ ಸಬ್ಸಿಡಿಗಳನ್ನು ಕೊಡುತ್ತಿಲ್ಲ, ಬದಲಾಗಿ ಅವು ದೊಡ್ಡ ಬಂಡವಾಳದಾರರಿಗೆ ಒದಗಿಸುವ ಗುಪ್ತ ಸಬ್ಸಿಡಿಗಳೇ ಆಗಿವೆ. ನವ-ಉದಾರವಾದೀ ಸರ್ಕಾರಗಳಿಂದ ಬೃಹತ್ ಬಂಡವಾಳದಾರರು ತೆರಿಗೆ ಕಡಿತದಿಂದ ಹಿಡಿದು, ತೆರಿಗೆ-ಮುಕ್ತ ಪ್ರದೇಶಗಳಲ್ಲಿ ಕಪ್ಪು ಹಣವನ್ನು ಬಿಳಿ ಮಾಡುವ ವರೆಗೆ ಇತರ ಹಲವಾರು ಸೌಕರ್ಯಗಳೊಂದಿಗೆ ಈ ಗುಪ್ತ ಸಬ್ಸಿಡಿಗಳನ್ನೂ ತಮ್ಮ ನೌಕರರ ಹೆಸರಿನಲ್ಲಿ ಪಡೆಯುತ್ತಾರೆ.

ಬಿಜೆಪಿ ಸರಕಾರದ ಧೋರಣೆಗಳು ಶ್ರೀಮಂತರಿಗೆ ತೆರಿಗೆ ವಿನಾಯತಿಗಳನ್ನು ನೀಡಿ, ಕಾರ್ಮಿಕರಿಗೆ ತಾತ್ಕಾಲಿಕ ಉದ್ಯೋಗ ನೀಡುವ ಅಮೆರಿಕನ್ ಧೋರಣೆಗಳ ತದ್ರೂಪಿಗಳೇ. ಆದ್ದರಿಂದಲೇ, ಫ್ಲಿಫ್‌ಕಾರ್ಟ್‌ನ ಸ್ವಾಧೀನದ ಬಗೆಗೆ ಭಾರತದ ವಾಣಿಜ್ಯ ಪತ್ರಿಕೆಗಳು ಮತ್ತು ಪತ್ರಿಕೋದ್ಯಮಿಗಳು ಹಾಡಿ ಕುಣಿಯುತ್ತಿರುವುದು. ಅವರಿಗೆಲ್ಲ, ಆರ್ಥಿಕ ಪತ್ರಿಕೋದ್ಯಮ ಎಂದರೆ ದೊಡ್ಡ ಬಂಡವಾಳದಾರರ ಬಗ್ಗೆ ವರದಿ ಮಾಡುವುದು. ಮತ್ತು ಅವರು ಎಷ್ಟು ಮಹಾನ್ ಎಂದು ತೋರಿಸುವುದು ಅಥವಾ ದೊಡ್ಡ ಬಂಡವಾಳಿಗ ಕುಳಗಳ ಪ್ರಸಿದ್ಧಿಗಳ ಸುದ್ದಿ ಬಿತ್ತರಿಸುವುದು.

ನಮ್ಮ ದಿನ ನಿತ್ಯದ ಅಗತ್ಯಗಳನ್ನು ಪೂರೈಸುವ ಲಕ್ಷಾಂತರ ಚಿಲ್ಲರೆ ವ್ಯಾಪಾರಿಗಳಿಗೆ ಅಮೆಜಾನ್ ಮತ್ತು ವಾಲ್ ಮಾರ್ಟ್ ಒಂದು ಮರಣಶಾಸನವಾಗಿದೆ. ನಿಮಗೆ ಮೋದಿ ಕಣ್ಣೋಟದ ಭಾರತಕ್ಕೆ ಸ್ವಾಗತ. ಈ ಕಣ್ಣೋಟ ಭಾರತೀಯ ಜನತೆಗಲ್ಲ, ಭಾರತೀಯ ಅಥವ ವಿದೇಶಿ ದೊಡ್ಡ ಬಂಡವಾಳಕ್ಕೆ. ಭಾರತ ದೇಶಕ್ಕೆ ಮತ್ತು ಅದರ ಜನತೆಗೆ ಅವರ ಸರಕಾರದ ಬಳಿ ಕೊಡಲಿರುವುದು ಕೇವಲ ದ್ವೇಷವೊಂದೇ- ಅಲ್ಪಸಂಖ್ಯಾತರ ವಿರುದ್ಧ, ಜಾತ್ಯತೀತರು, ಉದಾರವಾದಿಗಳು ಮತ್ತು ಎಡಪಂಥೀಯರು ಮೊದಲಾದ ರಾಷ್ಟ್ರ-ವಿರೋಧಿಗಳ ವಿರುದ್ಧದ ದ್ವೇಷ.

ಎಲ್‌ಡಿಎಫ್ 2ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪೆಟ್ರೋಲ್-ಡೀಸೆಲ್ ಮೇಲೆ ಮಾರಾಟ ತೆರಿಗೆ ಕಡಿತ

ದೇಶದ ಇತರೆಡೆ 1ಪೈಸೆ ಇಳಿದಾಗ ಕೇರಳದಲ್ಲಿ 1ರೂ. ಇಳಿಕೆ



ಕೇರಳದ ಎಲ್‌ಡಿಎಫ್ ಸರಕಾರ ತನ್ನ ಎರಡು ವರ್ಷಗಳನ್ನು ಪೂರ್ಣಗೊಳಿಸುತ್ತಿರುವ ಸಂದರ್ಭದಲ್ಲಿ ತನ್ನ ಜನಪರ ಆಡಳಿತೆಯ ದ್ಯೋತಕವೆಂಬಂತೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ರಾಜ್ಯದಲ್ಲಿನ ಮಾರಾಟ ತೆರಿಗೆಯಲ್ಲಿ ಅನುಕ್ರಮವಾಗಿ 1.69% ಮತ್ತು 1.75% ಕಡಿತ ಪ್ರಕಟಿಸಿದೆ. ಇದರಿಂದ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಲ್ಲಿ 1ರೂ. ಇಳಿಕೆಯಾಗುತ್ತದೆ. ಈ ಇಳಿಕೆಯಿಂದ ರಾಜ್ಯ ಸರಕಾರದ ಬೊಕ್ಕಸಕ್ಕೆ 500 ಕೋಟಿ ರೂ. ಕೊರತೆಯಾದರೂ, ರಾಜ್ಯದ ಜನಗಳ ಮೇಲೆ ಕೇಂದ್ರ ಸರಕಾರದ ಧೋರಣೆಯಿಂದಾಗಿ ಹೇರಿರುವ ಹೊರೆಯನ್ನು ತುಸು ಹಗುರುಗೊಳಿಸಲು ಇದನ್ನು ಪ್ರಕಟಿಸಲಾಗಿದೆ ಎಂದು ಎಲ್‌ಡಿಎಫ್ ಹೇಳಿದೆ.

ಪೆಟ್ರೋಲ್, ಡೀಸೆಲ್ ಬೆಲೆಯೇರಿಕೆಗಳು ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಗಳ ಮತದಾನ ಮುಗಿದ ಮರುದಿನದಿಂದಲೇ ಆರಂಭಿಸಿ ಪ್ರತಿದಿನ ಏರಿಸಲಾಯಿತು. 16 ದಿನಗಳ ಸತತ ಏರಿಕೆಯ ನಂತರ ಒಂದು ಪೈಸೆಯಷ್ಟು ಮಾತ್ರ ಇಳಿಸಿದಾಗ ಎಲ್‌ಡಿಎಫ್ ಸರಕಾರ ಅದನ್ನು 1ರೂ. ನಷ್ಟು ಇಳಿಸಿದೆ.

ಕಳೆದ ಎರಡು ವರ್ಷಗಳಲ್ಲಿ ಎಲ್‌ಡಿಎಫ್ ಆಳ್ವಿಕೆಯಲ್ಲಿನ ಸಾಧನೆಗಳು ಹೀಗಿವೆ:

* ಕೇರಳ ದೇಶದಲ್ಲೇ ಮೊದಲ ಸಂಪೂರ್ಣ ಬಹಿರಂಗ ಶೌಚ ಮುಕ್ತ ರಾಜ್ಯ ಎಂದು ಘೋಷಿಸಲ್ಪಟ್ಟಿದೆ.
* 5 ವರ್ಷಗಳಲ್ಲಿ 5 ಲಕ್ಷ ವಸತಿಹೀನರಿಗೆ ವಸತಿ ಕಲ್ಪಿಸಿ ರಾಜ್ಯವನ್ನು ವಸತಿಹೀನತೆ–ಮುಕ್ತ ರಾಜ್ಯವನ್ನಾಗಿಸುವ ಪ್ರಕ್ರಿಯೆ ಆರಂಭವಾಗಿದೆ. 32,000 ನಿಂತು ಹೋಗಿದ್ದ ಕಟ್ಟಡಗಳನ್ನು ಪೂರ್ಣಗೊಳಿಸಲಾಗಿದೆ, ಸ್ಥಳೀಯ ಸಂಸ್ಥೆಗಳು ವಸತಿಹೀನರ ಪಟ್ಟಿ ತಯಾರಿಸುತ್ತಿದ್ದು, ಅಪಾರ್ಟ್‌ಮೆಂಟ್ ಸಂಕೀರ್ಣಗಳ ನಿರ್ಮಾಣ ಕಾರ್ಯ ಆರಂಭವಾಗಿದೆ.
* ದೇಶದಲ್ಲಿ ಸಂಪೂರ್ಣ ವಿದ್ಯುದೀಕರಣ ಸಾಧಿಸಿದ ಮೊದಲ ರಾಜ್ಯವಾಗಿದೆ.
* ಕಲ್ಯಾಣ ಪೆನ್ಶನ್ ಮೊತ್ತವನ್ನು 1,100 ರೂ. ಗೆ ಏರಿಸಿ ದೇಶದಲ್ಲಿ ಅತ್ಯುತ್ತಮ ಸಾಮಾಜಿಕ ಭದ್ರತೆಯ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.
* ಡಿಜಿಟಲ್ ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸಿ 45,000 ತರಗತಿ ಕೋಣೆಗಳನ್ನು ಹೈಟೆಕ್ ಮಟ್ಟಕ್ಕೆ ಏರಿಸಲಾಗಿದೆ.
* ಶಾಲೆಗಳಲ್ಲಿ ಪುಕ್ಕಟೆ ಪುಸ್ತಕಗಳು ಮತ್ತು ಯೂನಿಫಾರಂಗಳನ್ನು ಒದಗಿಸಲಾಗುತ್ತಿದೆ.

ಇದಕ್ಕೆ ಮೊದಲು ಎಲ್‌ಡಿಎಫ್ ಸರಕಾರ ಹೊಸ ಕಾರ್ಮಿಕ ಧೋರಣೆಯನ್ನು ಪ್ರಕಟಿಸಿತ್ತು. ಇದು ಒಂದೆಡೆಯಲ್ಲಿ ಕಾರ್ಮಿಕ–ಸ್ನೇಹಿಯಾಗಿರುವುದರೊಂದಿಗೇ, ಹೂಡಿಕೆ–ಸ್ನೇಹಿಯೂ ಆಗಿರುವಂತೆ ರೂಪಿಸಲಾಗಿದೆ.

ಎಲ್ಲ ಕಾರ್ಮಿಕರಿಗೆ ಕನಿಷ್ಟ 600ರೂ. ದಿನಗೂಲಿ ಮತ್ತು ಉದ್ಯೋಗ ವಲಯವನ್ನು ಮಹಿಳಾ–ಸ್ನೇಹಿಯಾಗಿಸುವುದು ಈ ಹೊಸ ಧೋರಣೆಯ ಮುಖ್ಯ ಅಂಶಗಳು ಎಂದು ಹೇಳಲಾಗಿದೆ.

ಬಾಲದುಡಿಮೆಯನ್ನು ನಿವಾರಿಸಲು ಕ್ರಮಗಳನ್ನು ಪಟ್ಟಿ ಮಾಡಲಾಗಿದೆ. ಮಹಿಳಾ ಕಾರ್ಮಿಕರಿರುವ ಸಂಸ್ಥೆಗಳಲ್ಲಿ ಶಿಶುಕೇಂದ್ರಗಳನ್ನು ಸಾಮಾಜಿಕ ನ್ಯಾಯದ ಇಲಾಖೆಯ ಸಹಯೋಗದೊಂದಿಗೆ ರಚಿಸಲಾಗುವುದು. ಇದಕ್ಕಾಗಿ ಆ ಸಂಸ್ಥೆಗಳಿಂದ ಶಿಶುಕೇಂದ್ರ ಉಪತೆರಿಗೆ ವಸೂಲಿ ಮಾಡಲಾಗುವುದು.

ಮನೆಗೆಲಸದವರಿಗೆ ಉದ್ಯೋಗ ಭದ್ರತೆ ಒದಗಿಸಲು 'ಕಾರ್ಮಿಕ ಬ್ಯಾಂಕು'ಗಳ ರಚನೆ ಈ ಹೊಸ ಧೋರಣೆಯ ಇನ್ನೊಂದು ಪ್ರಮುಖ ಅಂಶ.

ಕೇಂದ್ರ ಸರಕಾರ 'ವ್ಯಾಪಾರ ಸುಗಮತೆ'ಯ ಹೆಸರಲ್ಲಿ 'ನಿಗದಿತ ಅವಧಿಯ ಉದ್ಯೋಗ'ಎಂಬುದನ್ನು ತರುತ್ತಿರುವಾಗ ಕೇರಳದ ಎಲ್‌ಡಿಎಫ್ ಸರಕಾರ ಕಾರ್ಮಿಕರ ಹಿತಗಳನ್ನು ರಕ್ಷಿಸುವ ಆಶಯದ ಒಂದು ಹೊಸ ಶಾಸನವನ್ನು ತರುವುದಾಗಿ ಹೇಳಿದೆ..


ಒಂದು ಹೈಟೆಕ್ ಕ್ಲಾಸ್ ರೂಂ

ಚೆಂಗನ್ನೂರ್ ಉಪಚುನಾವಣೆಯಲ್ಲಿ ಎಲ್‌ಡಿಎಫ್‌ಗೆ ಐತಿಹಾಸಿಕ ವಿಜಯ



ಮೇ 28 ರಂದು ಕೇರಳದ ಚೆಂಗನ್ನೂರ್ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಎಲ್‌ಡಿಎಫ್ ಅಭ್ಯರ್ಥಿ ಸಿಪಿಐ(ಎಂ)ನ ಸಾಜಿ ಚೆರಿಯನ್ 20,956 ಮತಗಳ ಅಂತರದಿಂದ ಭಾರೀ ಜಯಗಳಿಸಿದ್ದಾರೆ. ಈ ಕ್ಷೇತ್ರದಲ್ಲಿ ಹಿಂದೆಂದೂ ಇಷ್ಟು ಅಂತರದ ವಿಜಯ ಎಲ್‌ಡಿಎಫ್‌ಗೆ ಸಿಕ್ಕಿರಲಿಲ್ಲ.

2016ರ ವಿಧಾನ ಸಭಾ ಚುನಾವಣೆಗೆ ಹೋಲಿಸಿದರೆ ಈ ಬಾರಿ ಎಲ್‌ಡಿಎಫ್ ಮತಗಳಲ್ಲಿ ಆಗಿರುವ ಹೆಚ್ಚಳ 14658.

ಯುಡಿಎಫ್ ಮತಗಳಲ್ಲಿ 1550 ಹೆಚ್ಚಳವಾಗಿದೆ. ಆದರೆ 2016ರಲ್ಲಿ ಇಲ್ಲಿ ಬಂಡಾಯ ಯುಡಿಎಫ್ ಅಭ್ಯರ್ಥಿ ಕೂಡ ಸ್ಪರ್ಧಿಸಿ 3963 ಮತಗಳನ್ನು ಪಡೆದಿದ್ದರು. ಅದರಿಂದಾಗಿ ವಾಸ್ತವವಾಗಿ ಯುಡಿಫ್ ಮತಗಳು ಇಳಿದಿವೆ. ಎಲ್‌ಡಿಎಫ್ ಈ ಬಾರಿ ಯುಡಿಎಫ್‌ಗೆ ಬೆಂಬಲವಿದ್ದ ಪ್ರದೇಶಗಳಲ್ಲೂ ಹೆಚ್ಚಿನ ಮತ ಪಡೆದಿದೆ.

ಯುಡಿಎಫ್ ಈ ಉಪಚುನಾವಣೆಯಲ್ಲಿ ಸಿಪಿಐ(ಎಂ) ವಿರುದ್ಧ ಭಾರೀ ಅಪಪ್ರಚಾರ ನಡೆಸಿತ್ತು. ಆದರೂ ಎಲ್‌ಡಿಎಫ್ ಮತಗಳಿಕೆ 36.3% ದಿಂದ 44.3% ಕ್ಕೇರಿದೆ. ಯುಡಿಎಫ್ ಮತಗಳಿಕೆ 30.9%ದಿಂದ 30.5%ಕ್ಕೆ ಇಳಿದಿದೆ.

ಬಿಜೆಪಿಯ ಮತಗಳಿಕೆಯಂತೂ ಗಣನೀಯವಾಗಿ ಇಳಿದಿದೆ. ಅದು ಗಳಿಸಿದ್ದು 27320 ಮಾತ್ರ. ಅದರ ಮತಗಳಿಕೆಯ ಪ್ರಮಾಣ 29.4% ದಿಂದ 23.2%ಕ್ಕೆ ಇಳಿದಿದೆ.

1991ರಿಂದ 2011ರ ವರೆಗೆ ಸತತವಾಗಿ ಐದು ವಿಧಾನಸಭಾ ಚುನಾವಣೆಗಳಲ್ಲಿ ಯುಡಿಎಫ್ ಇಲ್ಲಿ ಗೆದ್ದಿತ್ತು. 2016ರಲ್ಲಿ ಎಲ್‌ಡಿಎಫ್‌ನ ಕೆ.ಕೆ.ರಾಮಚಂದ್ರನ್ 7983 ಮತಗಳಿಂದ ಗೆದ್ದರು. ಇತ್ತೀಚೆಗೆ ಅವರ ನಿಧನದಿಂದಾಗಿ ಈ ಉಪಚುನಾವಣೆ ನಡೆದಿದೆ.

ಕಾಂಗ್ರೆಸ್ ಮತ್ತು ಬಲಪಂಥದಿಂದ, ಜತೆಗೆ ಮಾಧ್ಯಮಗಳಿಂದ ಎಲ್‌ಡಿಎಫ್ ಮೇಲೆ ಸತತ ಧಾಳಿಗಳ ನಡುವೆ ಈ ಚುನಾವಣಾ ವಿಜಯ ಬಹಳ ಮಹತ್ವ ಪಡೆದಿದೆ.

ಚುನಾವಣಾ ಫಲಿತಾಂಶವನ್ನು ಘೋಷಿಸಿದ ನಂತರ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪತ್ರಿಕಾ ಸಮ್ಮೇಳನದಲ್ಲಿ ಮಾತಾಡುತ್ತ ಎಲ್‌ಡಿಎಫ್‌ನಲ್ಲಿ ವಿಶ್ವಾಸವಿಟ್ಟು ಇಂತಹ ಭಾರೀ ವಿಜಯ ಕೊಟ್ಟದ್ದಕ್ಕಾಗಿ ಚೆಂಗನ್ನೂರಿನ ಮತದಾರರಿಗೆ ಕೃತಜ್ಞತೆ ವ್ಯಕ್ತಪಡಿಸುತ್ತ, ಎಲ್‌ಡಿಎಫ್ ಸರಕಾರ ತನ್ನ ಜನ–ಪರ ಅಭಿವೃದ್ಧಿ ಧೋರಣೆಗಳನ್ನು ಮುಂದುವರೆಸುವ ಭರವಸೆಯನ್ನು ನೀಡಿದರು. ಇಲ್ಲಿಯ ಮತದಾರರು ಕಾಂಗ್ರೆಸಿನ ಹಗೆತನದ ಅಪಪ್ರಚಾರವನ್ನು ತಿರಸ್ಕರಿಸಿದ್ದಾರೆ, ಅದೇ ರೀತಿ ಬಿಜೆಪಿಯ ವಿಭಜನಕಾರೀ ರಾಜಕೀಯವನ್ನೂ ತಿರಸ್ಕರಿಸಿದ್ದಾರೆ ಎಂದು ಅವರು ಹೇಳಿದರು.

ಅಸ್ಸಾಂನಲ್ಲಿ ನಾಗರಿಕತ್ವ ತಿದ್ದುಪಡಿ ಮಸೂದೆಯ ವಿರುದ್ಧ ಉಪವಾಸ ಸತ್ಯಾಗ್ರಹ

ಕಳೆದ ವಾರ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆಯಲ್ಲಿ ಗಮನಿಸಿದಂತೆ, ಅಪಾರ ವೈವಿಧ್ಯತೆಗಳ ಅಸ್ಸಾಂ ಮತ್ತು ಇತರ ಈಶಾನ್ಯ ಪ್ರದೇಶದಲ್ಲಿ ನಾಗರಿಕತ್ವ ಕಾಯ್ದೆಯನ್ನು ಧಾರ್ಮಿಕ ಸಾಮೀಪ್ಯದ ಆಧಾರದಲ್ಲಿ ತಿದ್ದುಪಡಿ ಮಾಡುವ ಕೇಂದ್ರ ಸರಕಾರದ ಪ್ರಯತ್ನಗಳಿಂದಾಗಿ ಜನಗಳ ನಡುವಿನ ಸೂಕ್ಷ್ಮ ಐಕ್ಯತೆಯ ಮೇಲೆ ಒಂದು ಹೊಡೆತ ಬಂದಿದೆ. ನಾಗರಿಕರ ರಾಷ್ಟ್ರೀಯ ದಾಖಲೆ(ಎನ್‌ಆರ್‌ಸಿ)ಯನ್ನು ಮತ್ತು ಸಂದೇಹಾಸ್ಪದ ಮತದಾರರ ವಿಧವನ್ನು ಸಮಕಾಲಿಕಗೊಳಿಸುವ ಪ್ರಕ್ರಿಯೆಯಲ್ಲಿ ಅಸಂಪೂರ್ಣ ಮತ್ತು ಉದ್ದೇಪೂರ್ವಕವಾದ ಪಕ್ಷಪಾತ ನಡೆಯುತ್ತಿದೆ ಎಂಬ ಆಕ್ರೋಶ ವ್ಯಾಪಕವಾಗಿ ಬೆಳೆದು ಬರುತ್ತಿದೆ. ಮೇ 29ರಂದು ಗುವಾಹಟಿಯಲ್ಲಿ ಇದು ಪ್ರಕಟಗೊಂಡಿತು. ಅಂದು 28ಕ್ಕೂ ಹೆಚ್ಚು ಸಂಘಟನೆಗಳು ಜತೆಗೂಡಿ 11 ಗಂಟೆಗಳ ಉಪವಾಸ ಮುಷ್ಕರವನ್ನು ನಡೆಸಿದವು. ಅಸ್ಸಾಂ ಸಾಹಿತ್ಯ ಸಭೆಯ ಲೇಖಕರು, ಬುದ್ಧಿಜೀವಿಗಳೂ ಇದರಲ್ಲಿ ಭಾಗವಹಿಸಿದರು. ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿಯ ಹಲವು ಮಿತ್ರಪಕ್ಷಗಳ ಮುಖಂಡರೂ ಇದರಲ್ಲಿ ಭಾಗವಹಿಸಿರುವುದು ಗಮನಾರ್ಹ.



ತ್ರಿಪುರಾದಲ್ಲಿ ಸಾಮೂಹಿಕ ಧರಣಿ ಪ್ರತಿಭಟನೆ: ಅಗರ್ತಲಾದಲ್ಲಿ ಮೇ 25ರಂದು ಒಂದು ಸಾಮೂಹಿಕ ಧರಣಿ ಪ್ರತಿಭಟನೆ ನಡೆಸಲಾಯಿತು. ಫ್ಯಾಸಿಸ್ಟ್ ಮಾದರಿ ದಾಳಿಗಳನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಗುಡ್ಡಗಾಡು ಮತ್ತು ಹಳ್ಳಿ ಪ್ರದೇಶಗಳಲ್ಲಿ ಆಹಾರ ಮತ್ತು ಕೆಲಸಕ್ಕೆ ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದು ಈ ಮಹಾಧರಣಿಯ ಆಗ್ರಹಗಳು. ಮಾಜಿ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಮಾಣಿಕ್ ಸರ್ಕಾರ್ ಮತ್ತು ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ಬಿಜನ್ ಧರ್ ಕೂಡ ಇದರಲ್ಲಿ ಭಾಗವಹಿಸಿದರು. ಮೇ 30 ರಂದು ಕೈಲಾಶಹರ್‌ನಲ್ಲೂ ಇಂತಹುದೇ ಪ್ರತಿಭಟನೆ ಮತ್ತು ರ್‍ಯಾಲಿ ನಡೆಯಿತು.



ವೆನೆಜುವೆಲಾ: ಮಡುರೊ ಅಧ್ಯಕ್ಷರಾಗಿ ಪುನರಾಯ್ಕೆ



ವೆನೆಜುವೆಲಾದ ಅಧ್ಯಕ್ಷೀಯ ಚುನಾವಣೆ ಕಳೆದ ಮೇ 20 ರಂದು ನಡೆಯಿತು. ಒಟ್ಟು 2,05 ಕೋಟಿ ಮತದಾರರಲ್ಲಿ 46 ಪ್ರತಿಶತದಷ್ಟು, ಅಂದರೆ 91 ಲಕ್ಷದಷ್ಟು ಮತದಾರರು ಮತದಾನದ ಪ್ರಕ್ರಿಯೆ ಯಲ್ಲಿ ತಮ್ಮ ಹಕ್ಕು ಚಲಾಯಿಸಿದ್ದಾರೆ. ಇದು ಅತಿ ಕಡಿಮೆ ಪ್ರಮಾಣದ ಮತದಾನವೆಂದು ಗುರುತಿಸಲಾಗಿದೆ. ಪ್ರಸ್ತುತ ಅದ್ಯಕ್ಷ ನಿಕೋಲಸ್ ಮಡುರೊ ರವರು ಶೇ.67.20 ರಷ್ಟು ಅಂದರೆ, 60.20 ಲಕ್ಷ ದಷ್ಟು ಮತವನ್ನು ಪಡೆದು ಅಧ್ಯಕ್ಷರಾಗಿ ಪುನರ್ ಆಯ್ಕೆಗೊಂಡಿದ್ದಾರೆ. ಬೊಲಿವೀರಿಯನ್ ಕ್ರಾಂತಿಯ ರೂವಾರಿ ಹ್ಯೂಗೋ ಚಾವೆಜ್ ರವರ ಉತ್ತರಾಧಿಕಾರಿ ಯಾಗಿ ಪ್ರಥಮ ಬಾರಿಗೆ ಆಯ್ಕೆಯಾಗಿದ್ದ ಮಡುರೊ ರವರಿಗೆ ಕ್ರಾಂತಿ ರಕ್ಷಣೆಯ ಹೊಣೆಗಾರಿಕೆಯನ್ನು ಮತ್ತೆ ಇವರ ಹೆಗಲಿಗೆ ಹೊರಿಸಿದ್ದಾರೆ. ಈ ಜವಾಬ್ದಾರಿಯನ್ನು ಮಡುರೊ ರವರು ಸಮರ್ಪಕವಾಗಿ ನಿಭಾಯಿಸ ಬಲ್ಲರು ಎಂದು ಇಡೀ ಜಗತ್ತಿನ ಪ್ರಗತಿಶೀಲರ ಭಾವನೆಯಾಗಿದೆ.

ಇವರ ಪ್ರಮುಖ ಹತ್ತಿರದ ಪ್ರತಿಸ್ಪರ್ಧಿ ಹೆನ್ರಿ ಪಾಲ್ಕನ್ ರವರು ಶೇ. 21 ರಷ್ಟು ಮತ ಪಡೆದು ಎರಡನೇ ಸ್ಥಾನ ಪಡೆದು ಅತೃಪ್ತಿಯಿಂದ ಚುನಾವಣೆ ಪ್ರಕ್ರಿಯೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮೂರನೆಯ ಸ್ಥಾನ ಪಡೆದ ಇವ್ಯಾಂಜೆಲಿಕಲ್ ಪಾದ್ರಿ ಜೇವಿಯರ್ ಬೆರ್ಟುಚಿಯವರು ಶೇ.10 ರಷ್ಟು ಮತ ಪಡೆದು ಸಮಾಧಾನ ಪಟ್ಟಿದ್ದಾರೆ. ಆದರೆ, ಗೊಂದಲಕ್ಕೆ ಸಿಕ್ಕಿಹಾಕಿಕೊಂಡ್ಡಿದ್ದ ಬಲ ಪಂಥೀಯ ಡೆಮಾಕ್ರಟಿಕ್ ಯೂನಿಟಿ ರೌಂಡ್ ಟೇಬಲ್ (ಎಂ.ಯು.ಡಿ) ಒಕ್ಕೂಟದ ಪ್ರಮುಖ ವಿರೋಧ ಪಕ್ಷಗಳು ಪ್ರಕಟಿಸಿದ್ದ ಬಹಿಷ್ಕಾರದಿಂದಾಗಿ ಪಶ್ಚಾತಾಪ ಪಡುತ್ತಿದ್ದಾರೆ. ಇದರಿಂದಾಗಿಯೇ, ತುಂಬ ಕಡಿಮೆ ಪ್ರಮಾಣದ ಶೇ.46 ರಷ್ಟು ಮಾತ್ರ ಮತದಾನವಾಯಿತು ಎಂಬುದು ರಾಜಕೀಯದಲ್ಲಿನ ವಿಶ್ಲೇಷಣೆ ಯಾಗಿದೆ.

ಬೊಲಿವಿಯೇರಿಯನ್ ಕ್ರಾಂತಿಯ ರಕ್ಷಣೆಯೇ ಮತದಾರರ ಆದ್ಯತೆ

ದೊಡ್ಡ ನಗರಗಳ ಶ್ರೀಮಂತರು ವಾಸಿಸುವ ಪ್ರದೇಶಗಳಲ್ಲಿ ಮತದಾನ ತೀರ ಕಳಪೆಯಾಗಿದೆ. ಇವೆಲ್ಲವೂ ಹೆಚ್ಚಾಗಿ ಬಲಪಂಥೀಯ ಸಾಂಪ್ರದಾಯಿಕ ವಿರೋಧ ಪಕ್ಷಗಳ ಪ್ರದೇಶಗಳೆಂದು ಗರುತಿಸಲಾಗಿದೆ. ಮಾಜಿ ಅದ್ಯಕ್ಷ ಹ್ಯೂಗೋ ಚಾವೆಜ್ ರವರು ಮುನ್ನಡೆಸಿದ್ದ ಬೊಲಿವಿಯೀರಿಯನ್ ಕ್ರಾಂತಿಯ ರಕ್ಷಣೆಗೆ ಸದಾ ಆಧಾರವಾಗಿರುವ ಕಾರ್ಮಿಕ ವರ್ಗದ ಪ್ರದೇಶಗಳಲ್ಲಿ ಮತದಾನವು ಹೆಚ್ಚಾಗಿದೆ, ಆದರೆ ಅಲ್ಲಿಯೂ ಕೂಡಾ ಕಳೆದ ಬಾರಿಗಿಂತ ಕಡಿಮೆ ಪ್ರಮಾಣದ ಮತದಾನ ವಾಗಿದೆ. ಮತದಾನ ಮಾಡಿದ ಬಹುಸಂಖ್ಯಾತ ರಲ್ಲಿ ಬೊಲಿವಿಯೀರಿಯನ್ ಕ್ರಾಂತಿಯ ರಕ್ಷಣೆಗಾಗಿಯೇ ಮತ ಚಲಾಯಿಸಿದ್ದಾರೆ. ಏಕೆಂದರೆ, ಬಲಪಂಥೀಯ ವಿರೋಧ ಪಕ್ಷದವರು ಚುನಾವಣೆಯಲ್ಲಿ ಗೆದ್ದು ಬಂದರೆ, ಪ್ರಸ್ತುತ ಪರಿಸ್ಥಿತಿ ಯ ನ್ಯೂನತೆಗಳನ್ನು ಬಳಸಿಕೊಂಡು, ದೇಶವನ್ನು ಮತ್ತಷ್ಟು ಹಾಳುಮಾಡುವ ಸಂಭಾವ್ಯವೇ ಹೆಚ್ಚಾಗಿರುತ್ತದೆ ಹಾಗೆಯೇ, ಕಾರ್ಮಿಕರ ಮತ್ತು ಬಡವರ ಜೀವನವನ್ನು; ಐ.ಎಂ.ಎಫ್ ನಿಗದಿತ ಪಡಿಸಿರುವ 'ರಚನಾತ್ಮಕ ಹೊಂದಾಣಿಕೆ' ಯ ಕಾರ್ಯಕ್ರಮ ಗಳೊಂದಿಗೆ ಅನುಷ್ಠಾನಗೊಳಿಸುವ ಮೂಲಕ ದೇಶದ ಆರ್ಥಿಕ ಪರಿಸ್ಥಿತಿ ಯನ್ನು ಮತ್ತಷ್ಟು ಬಿಕ್ಕಟ್ಟಿಗೆ ತಳ್ಳುತ್ತಾರೆ ಎಂಬ ಸೈದ್ಧಾಂತಿಕ ಸ್ಪಷ್ಟತೆಯೊಂದಿಗೆ ಪ್ರಜ್ಞಾ ಪೂರ್ವಕ ವಾಗಿ ಮತ ಚಲಾಯಿಸಿದ್ದಾರೆ.

ಮಡುರೊ ರ ಗೆಲುವಿಗಾಗಿ ಮತ ಚಲಾಯಿಸಿದವರು ಕಟಿಬದ್ಧ ಚಾವೆಜ್ ವಾದಿಗಳು. ಇವರೆಲ್ಲರೂ ಬೊಲಿವಿಯೀರಿಯನ್ ಕ್ರಾಂತಿಯ ರಕ್ಷಣೆಗಾಗಿಯೇ ಪ್ರತಿಬಾರಿ ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಈ ನಡುವೆ ಎಡಪಂಥೀಯರಲ್ಲಿ ಪಿ.ಎಸ್.ಯು.ವಿ. ಯ ನಾಯಕತ್ವ ಮತ್ತು ಅಧಿಕಾರಿಶಾಹಿ ವಿರುದ್ಧ ಹೆಚ್ಚಿನ ಮಟ್ಟದಲ್ಲಿ ತುಂಬಾ ಟೀಕೆಗಳು ಕೇಳಿ ಬಂದಿದ್ದವು. ಇದು ಅವರ ಅಸಮಾಧಾನ ಕ್ಕೆ ಎಡೆ ಮಾಡಿಕೊಟ್ಟಿತು. ಆಡಳಿತವು ಆರ್ಥಿಕ ಪರಿಸ್ಥಿತಿ ಯನ್ನು ನಿಭಾಯಿಸಲು ವಿಫಲವಾಯಿತು ಮತ್ತು ಜನ ಸಾಮಾನ್ಯರ ಕ್ರಾಂತಿಕಾರಕ ಉಪಕ್ರಮಕ್ಕೆ ಬಾರೀ ಅಡಚಣೆ ಉಂಟುಮಾಡಿತು ಎಂಬ ಟೀಕೆಗೆ ಗುರಿಯಾಯಿತು. ಅಸಮಾಧಾನಕ್ಕೆ ಮತ್ತೊಂದು ಪ್ರಮುಖ ಕಾರಣವೆಂದರೆ, ಅಧಿಕೃತವಾಗಿ ಮಂಜೂರಾಗಿದ್ದ ಭೂಮಿ ಒಡೆತನವನ್ನು ಕಿತ್ತುಕೊಂಡು ಒಕ್ಕಲೆಬ್ಬಿಸಿದ್ದು (ಭೂಮಿಯಿಂದ ಹೊರ ಹಾಕಲಾಯಿತು) ಇದರ ವಿರುದ್ಧ ರೈತರ ಹಲವು ಗುಂಪುಗಳು ತಿಂಗಳು ಗಟ್ಟಲೆ ಕಮ್ಯೂನ್ ಗಳನ್ನು ಆಯೋಜಿಸಿದ್ದರು. ಆದಾಗ್ಯೂ, ಮಡುರೊ ಸರ್ಕಾರ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ಈ ಒಕ್ಕಲೆಬ್ಬಿಸುವ ಪ್ರಕ್ರಿಯೆ ಗಳು ಭೂಮಾಲೀಕರ ಆಜ್ಞೆಯ ಮೇರೆಗೆ ನಡೆದಿತ್ತು. ಈ ಪ್ರಕ್ರಿಯೆಯೊಂದಿಗೆ ಪ್ರಭುತ್ವದ ಎಲ್ಲಾ ಪದರಗಳು ಪ್ರತಿನಿಧಿಸುವ ಸ್ಥಳೀಯ ಆಡಳಿತ ಶಾಹಿಗಳು ಪಾಲ್ಗೊಂಡಿದ್ದರು. ಚುನಾವಣಾ ಪ್ರಚಾರದ ಸಂದರ್ಶನ ವೊಂದರಲ್ಲಿ "ಯಾವುದೇ ರೀತಿಯಲ್ಲಿ ಇನ್ನು ಮುಂದೆ ಒಕ್ಕಲೆಬ್ಬಿಸುವುದು ಇರುವುದಿಲ್ಲ ಅದನ್ನು ತಡೆಗಟ್ಟುತ್ತೇನೆ", ಎಂದು ಮಡುರೊ ಭರವಸೆ ನೀಡಿದ ಹಿನ್ನೆಲೆಯಲ್ಲಿ, ಮಡುರೊ ರವರಿಗೆ ವಿಶ್ವಾಸದಿಂದ ಮತ ಚಲಾಯಿಸಿದ್ದಾರೆ ಎನ್ನಲಾಗಿದೆ.

ಚುನಾವಣಾ ಪೂರ್ವ ಸನ್ನಿವೇಶ

ವೆನೆಜುವೆಲಾ ದ ಚುನಾವಣೆ ನಡೆಯುವ ಮುನ್ನಾ ಅಲ್ಲಿನ ಜನರು ತೀವ್ರ ಸಂಕಷ್ಟಗಳ ದಿನಗಳನ್ನು ಎದುರಿಸಿ ಕೊಂಡು ಜೀವನ ಸಾಗಿಸುತ್ತಿದ್ದಾರೆ ಎಂಬ ವಾಸ್ತವತೆಯನ್ನು ಯಾರು ಮರೆಯಬಾರದು. ಇಡೀ ದೇಶವನ್ನು ಅಮೆರಿಕಾದ ಬೆಂಬಲಿಗ ವಿರೋದ ಪಕ್ಷಗಳ ಹಲವು ಗುಂಪುಗಳು, ಆರ್ಥಿಕ ನಿರ್ಬಂಧ ದ ಬಿಕ್ಕಟ್ಟಿನಿಂದ ಉಂಟಾದ ಕಷ್ಟಗಳಿಂದ ಬಳಲಿ ಬೆಂದು ಹೋಗಿದ್ದ ಜನರನ್ನು, ಮಡುರೊ ವಿರುದ್ಧ ಬಾವನಾತ್ಮಕವಾಗಿ ಪ್ರಚೋದಿಸಿ, ಹಿಂಸಾಚಾರವೆಸಗಿ ವೆನೆಜುವೆಲಾ ಹೊತ್ತಿ ಉರಿಯುವಂತೆ ಮಾಡಿದ್ದರು. ಯು.ಎಸ್. ಆಡಳಿತವು ಒಬಾಮನಿಂದ ಮೊದಲುಗೊಂಡು, ಇತ್ತೀಚಿನ ಅದ್ಯಕ್ಷ ಟ್ರಂಪ್ ನ ವರೆವಿಗೂ, ವಿಧಿಸಿದ್ದ ತೀವ್ರ ಆರ್ಥಿಕ ನಿರ್ಬಂಧಗಳು ಒಂದು ವಿಧದ ಯುದ್ಧದ ಪರಿಸ್ಥಿತಿಯನ್ನು ಮೂಡಿಸಿತ್ತು. ಪರಿಸ್ಥಿತಿ ಉಲ್ಬಣಗೊಂಡು ಅಂದಿನ ಮಡುರೊ ಸರ್ಕಾರ ಕ್ಕೆ ನಿಭಾಯಿಸುವುದು ಸವಾಲಾಗಿ ಪರಿಣಮಿಸಿತ್ತು. ಆದರೂ, ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ. ಜೊತೆಗೆ ಸಮಸ್ಯೆಗಳ ಪರಿಹಾರಕ್ಕೆ ಚರ್ಚಿಸಲು ಮಡುರೊ ಮಾಡಿದ ಮೇಲ್ಮನವಿ ಯನ್ನು ವಿರೋಧ ಪಕ್ಷಗಳು ತಿರಸ್ಕರಿಸಿದ್ದರು. ಭಾರಿ ಹಿಂಸಾತ್ಮಕ ಘರ್ಷಣೆಗಳು, ದಂಗೆಗಳನ್ನು ನಡೆಸಿ, ಕಳೆದ ವರ್ಷ ನಡೆದ ಸಂಸತ್ ಚುನಾವಣೆಯಲ್ಲಿ ಅಕ್ರಮ–ದೊಂಬಿ ಗಲಭೆ ಗಳನ್ನು ಎಬ್ಬಿಸಿದ್ದರು

ಆ ನಂತರ ಪೋಪ್ ನ ಮಧ್ಯಸ್ಥಿಕೆ ಯಿಂದಾಗಿ, ಡೊಮಿನಿಕನ್ ಗಣರಾಜ್ಯ ಸರಕಾರದ ಆಶ್ರಯದಲ್ಲಿ ವಿರೋಧಿ ಗುಂಪು ಗಳೊಂದಿಗೆ ಮಡುರೊ ಸರಕಾರವು, ಹಿಂಸಾಚಾರ ಚಕ್ರ ವನ್ನು ಕೊನೆಗಾಣಿಸಲು ಹಾಗೂ ವೆನೆಜುವೆಲಾ ಜನರ ಜೀವನವು ಮತ್ತಷ್ಟು ಹದಗೆಡುವುದನ್ನು ತಡೆಯಲು, ವಿರೋಧಿ ಗುಂಪುಗಳೊಂದಿಗೆ ಮಾತುಕತೆ ನಡೆಸಲು ಒಪ್ಪಿಗೆ ಸೂಚಿಸಲಾಯಿತು. ಈ ಮಾತುಕತೆಗಳ ಮೂಲಕ ಎಲ್ಲರೂ ಹಿಂಸೆಯನ್ನು ಬಿಟ್ಟು ಚುನಾವಣೆ ನಡೆಸಲು ತಾತ್ಕಾಲಿಕ ಒಪ್ಪಂದಕ್ಕೆ ಮುಂದಾಗಿದ್ದರು. ಎಲ್ಲರೂ ಸಹಿ ಹಾಕಲು ಮಡುರೊ ಸರಕಾರ ಒಂದು ಸಾಮಾನ್ಯ ಒಪ್ಪಂದವನ್ನು ಸಿದ್ಧಗೊಳಿಸಿತ್ತು. ಕೊನೆಯ ಕ್ಷಣದಲ್ಲಿ ಯು.ಎಸ್. ನ ದಬ್ಬಾಳಿಕೆಯ ನೀತಿಯಿಂದಾಗಿ ಹಾಗೂ ಅದರ ಕಮ್ಯುನಿಸ್ಟ್ ವಿರೋಧಿ ನಿಲುವಿನಿಂದಾಗಿ, ಅವರ ಬೆಂಬಲಿತ ವಿರೋಧಿ ಗುಂಪುಗಳು ಸಹಿ ಹಾಕುವ ತಮ್ಮ ನಿರ್ಧಾರ ದಿಂದ ಹಿಂದಕ್ಕೆ ಸರಿದವು. ಇದು ಚುನಾವಣಾ ಪೂರ್ವ ದ ವೆನೆಜುವೆಲಾ ದ ಪರಿಸ್ಥಿತಿಯಾಗಿತ್ತು.

ಚುನಾವಣಾ ಬಹಿಷ್ಕಾರ, ಮಿಲಿಟರಿ ಹಸ್ತಕ್ಷೇಪ

ಈ ಮೊದಲು ಅಮೆರಿಕಾ ಅಧ್ಯಕ್ಷೀಯ ಚುನಾವಣೆ ಯನ್ನು ನಿಗದಿಪಡಿಸಿಲ್ಲವೆಂಬ ಆರೋಪವನ್ನು ವೆನೆಜುವೆಲಾದ ಮೇಲೆ ಹೊರಿಸಿತ್ತು. ನಂತರ ಚುನಾವಣೆ ವೇಳಾಪಟ್ಟಿ ನಿಗದಿಯಾದ ನಂತರ ದಿನಾಂಕದ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸಿತು. ಇದಾದನಂತರ ಇಡೀ ಚುನಾವಣಾ ಪ್ರಕ್ರಿಯೆ ಯನ್ನು ಸ್ವತಃ ಆಕ್ಷೇಪಿಸಿ, ಚುನಾವಣೆ ಗೆ ಮುಂಚೆಯೇ ಇದು ಮೋಸ ಮತ್ತು ಅಕ್ರಮ ಚುನಾವಣೆ ಎಂದು ಘೋಷಿಸಿತು. ಅಷ್ಟಕ್ಕೆ ಸುಮ್ಮನಾಗದೆ ಜನರು ಒಬ್ಬ 'ತಪ್ಪಾದ ಅಭ್ಯರ್ಥಿಗೆ' ಮತದಾನ ಮಾಡಬಾರದೆಂಬ ಘೋಷಣೆ ಮಾಡುವ ಮೂಲಕ ಮೂಗು ತೂರಿಸಲು ಪ್ರಯತ್ನಿಸಿತು.

1998 ರಿಂದಲೂ ಬೊಲಿವಿಯೀರಿಯನ್ ಕ್ರಾಂತಿಯನ್ನು ಸೋಲಿಸಲು ಅಮೆರಿಕಾವು, ತನ್ನ ಬೆಂಬಲಿತ ವಿರೋಧ ಪಕ್ಷಗಳ ಪ್ರಮುಖವಾಗಿ ಎಂ.ಯು.ಡಿ. ಯೊಂದಿಗೆ ಒಳಸಂಚು ನಡೆಸಿ ವೆನೆಜುವೆಲಾ ದಲ್ಲಿ ಹಿಂಸಾಚಾರ, ದೊಂಬಿಗಳನ್ನು ನಿರಂತರವಾಗಿ ನಡೆಸಲು ಕುಮ್ಮಕ್ಕು ಕೊಡುತ್ತಾ ಬಂದಿರುವುದು ಜಗತ್ತಿಗೆ ಗೊತ್ತಿರುವ ಸಂಗತಿ. ಈ ಬಾರಿಯು ಅಂತಹ ಹಿಂಸಾತ್ಮಕ ಪರಿಸ್ಥಿತಿ ಇರುವುದರಿಂದ ಚುನಾವಣೆ ಯನ್ನು ಬಹಿಷ್ಕರಿಸಲು ವಿರೋಧಿ ಗುಂಪಿನ ಎಂ.ಯು.ಡಿ. ಒಕ್ಕೂಟವು ನಿರ್ಧರಿಸಿತು. ಬಹಿಷ್ಕಾರದ ವಿಚಾರದಲ್ಲಿ ಎಂ.ಯು.ಡಿ ಒಕ್ಕೂಟ ಗೊಂದಲಕ್ಕೆ ಸಿಕ್ಕಿಹಾಕಿಕೊಂಡಿತ್ತು ಎಂಬುದನ್ನು ಮರೆಯಬಾರದು.

2015 ರಲ್ಲಿಯೇ, ಅಮೆರಿಕದ ಅಂದಿನ ಅಧ್ಯಕ್ಷ ಒಬಾಮ ವೆನೆಜುವೆಲಾವು ಅಮೆರಿಕದ ಭದ್ರತೆಗೆ ಬೆದರಿಕೆ ಯೊಡ್ಡುವ ದೇಶವೆಂದು ಘೋಷಿಸಿದ್ದರು. ಆ ಹಿನ್ನೆಲೆಯಲ್ಲಿಯೇ ತೀವ್ರವಾದ ಆರ್ಥಿಕ ದಿಗ್ಬಂದನ ಹೇರಲಾಗಿತ್ತು. ಇದರಿಂದಾಗಿ ವೆನೆಜುವೆಲಾದ ಆರ್ಥಿಕತೆ ತೀವ್ರವಾಗಿ ನರಳುವಂತೆ ಮಾಡಿತು. ಹಣದುಬ್ಬರವು ಹೆಚ್ಚಾಗಿ, ನೈಜ ವೇತನಗಳು ಕುಸಿದು ಜನರು ಸರಕಾರದ ಮೇಲೆ ಅಸಮಾಧಾನ ಹೊಂದುವಂತೆ ಮಾಡಿತು.

ಅಮೆರಿಕವು ತನ್ನ ಮಿಲಿಟರಿ ನೆಲೆಗಳನ್ನು ಕೊಲಂಬಿಯಾದ ಬೆಂಬಲದೊಂದಿಗೆ ವೆನೆಜುವೆಲಾದ ಪಶ್ಚಿಮದಲ್ಲ ಹೊಂದಿದೆ, ಹಾಗೆಯೇ ಡಚ್ ವಸಾಹತು ದ್ವೀಪಗಳಲ್ಲಿ ಅಂದರೆ ವೆನೆಜುವೆಲಾ ದ ಪೂರ್ವದಲಿಯೂ ಮಿಲಿಟರಿ ತುಕಡಿಗಳು ಬೀಡು ಬಿಟ್ಟಿವೆ. ಜೊತೆಗೆ ಇದರ ನಾಲ್ಕನೇ ಫ್ಲೀಟ್ ನೌಕಾಪಡೆಯು ನಿಯಮಿತವಾಗಿ ವೆನೆಜುವೆಲಾದ ಕೆರಿಬಿಯನ್ ಕರಾವಳಿಯಲ್ಲಿ ಗಸ್ತು ತಿರುಗುತ್ತಿದೆ. ವೆನೆಜುವೆಲಾ ದ ಸುತ್ತಣ ಇಷ್ಟೆಲ್ಲಾ ಮಿಲಿಟರಿ ಕಾರುಬಾರನ್ನು ಹೊಂದಿದ್ದರು, ವೆನೆಜುವೆಲಾದಿಂದ ಅಮೆರಿಕಾಕ್ಕೆ ಭದ್ರತಾ ಬೆದರಿಕೆ ಇದೆ ಎಂದು ಘೋಷಿಸಿರುವುದರ ಹಿಂದಿನ ತನ್ನ ಒಳಸಂಚಿನ ಅರಿವು ಜಗತ್ತಿಗೂ ಗೊತ್ತಿದೆ ಎಂದು ಅದು ಮರೆತಂತಿದೆ. ಅಷ್ಟೇ ಅಲ್ಲದೆ ತನ್ನ ರಾಷ್ಟ್ರೀಯ ತುರ್ತು ಕಾಯಿದೆ ಅಡಿಯಲ್ಲಿ ವೆನೆಜುವೆಲಾ ವಿರುದ್ಧ ಆರ್ಥಿಕ ನಿರ್ಬಂಧಗಳನ್ನು ಪ್ರತಿವರ್ಷ ತೀವ್ರಗೊಳಿಸುತ್ತಾ ಬರುತ್ತಿದೆ. ಕಳೆದ ವರ್ಷ ಅಧ್ಯಕ್ಷ ಟ್ರಂಪ್ ಬಹಿರಂಗವಾಗಿಯೇ ತನ್ನ ಮಿಲಿಟರಿ ಬಲದಿಂದ ಮಡುರೊ ಸರಕಾರವನ್ನು ಉರುಳಿಸುವುದಾಗಿ ಹೇಳಿಕೆ ನೀಡಿದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕಾಗಿದೆ. ಆದರೆ, ಲ್ಯಾಟಿನ್ ಅಮೆರಿಕದಲ್ಲಿರುವ ವಾಷಿಂಗ್ಟನ್ ಕಛೇರಿಯ ಡೇವಿಡ್ ಸ್ಮಿಲ್ಡೆ ಟ್ರಂಪ್ ನ ಮಿಲಿಟರಿ ಆಯ್ಕೆಯನ್ನು ವಿರೋಧಿಸಿದ್ದು, ಇದರ ಬದಲಿಗೆ ಮತ್ತಷ್ಟು ಗಾಡವಾದ ಆರ್ಥಿಕ ನಿರ್ಬಂಧಗಳನ್ನು ಹೇರುವ ಮೂಲಕ, ಆಡಳಿತದ ಬದಲಾವಣೆ ಕುರಿತಂತೆ ವಾದಿಸಿದ್ದರು.

ಆರ್ಥಿಕ ದಿಗ್ಬಂದನಗಳಿಗೆ ತೃಪ್ತಿಯಾಗದ ಅಧ್ಯಕ್ಷ ಟ್ರಂಪ್ ಕಳೆದ ಏಪ್ರಿಲ್ ತಿಂಗಳ ಆರಂಭದಲ್ಲಿ ಯು. ಎಸ್. ಸದರ್ನ್ ಕಮ್ಯಾಂಡ್' ಆಕ್ರಮಣವನ್ನು ಅನುಸರಿಸುವ ನಿಟ್ಟಿನಲ್ಲಿ ವೆನೆಜುವೆಲಾ ದ ಕರಾವಳಿಯಿಂದ ಕೇವಲ 10 ಮೈಲುಗಳಷ್ಟು ದೂರದಲ್ಲಿ "ಪ್ಯೂಸ್ಡ್ ರೆಸ್ಪಾನ್ಸ್' ಎಂಬ ಮಿಲಿಟರಿ ಕವಾಯತು ನಡೆಸಿದ್ದರು.

ಮಡುರೊ ಮುಂದಿರುವ ಕಠಿಣ ಸವಾಲುಗಳು

ಮುಂಬರುವ ಕಾಲಾವಧಿಯಲ್ಲಿ ಅಧ್ಯಕ್ಷ ಮಡುರೊಗೆ ಕಠಿಣ ಸವಾಲುಗಳು ಎದುರಾಗುವ ಸಾಧ್ಯತೆಯಿದೆ. ಚುನಾವಣಾ ಫಲಿತಾಂಶ ಹೊರಬೀಳುವ ಮೊದಲೆ ವಿರೋಧ ಪಕ್ಷದ ಹೆನ್ರಿ ಪಾಲ್ಕನ್ ರವರು ನಾನು ಫಲಿತಾಂಶವನ್ನು ಮಾನ್ಯ ಮಾಡುವುದಿಲ್ಲವೆಂದು ಹೇಳಿಕೆ ನೀಡಿದ್ದರು. ಚುನಾವಣೆ ನ್ಯಾಯ ಸಮ್ಮತವಾಗಿ ನಡೆದಿಲ್ಲ, ಹಾಗೂ ಅಂತರರಾಷ್ಟ್ರೀಯ ಮಟ್ಟದ ಎಲ್ಲಾ ಮಾನದಂಡಗಳನ್ನುಉಲಂಘಿಸಲಾಗಿದೆ ಹಾಗಾಗಿ ಮತ್ತೆ ಚುನಾವಣೆ ನಡೆಯಬೇಕಾಗಿದೆ ಎಂದಿದ್ದಾರೆ ಹಾಗೆಯೇ ಐರೋಪ್ಯ ದೇಶಗಳು, ಮತ್ತು ಲೀಮಾ ಗುಂಪಿನ ಲ್ಯಾಟಿನ್ ಅಮೆರಿಕದ ಕಮ್ಯೂನಿಸ್ಟ್ ವಿರೋಧಿ ಆಡಳಿತದ ಅನೇಕ ದೇಶಗಳು ವೆನೆಜುವೆಲಾದ ಚುನಾವಣಾ ಫಲಿತಾಂಶ ಗಳನ್ನು ಮತ್ತು ಪ್ರಕ್ರಿಯೆಗಳನ್ನು ತ್ವರಿತವಾಗಿ ಖಂಡಿಸಿವೆ. ಇವೆಲ್ಲ ಬಾಹ್ಯ ಸವಾಲುಗಳೊಂದಿಗೆ, ಆಂತರಿಕವಾದ ವೆನೆಜುವೆಲಾದ ಜನರ ಸಮಸ್ಯೆಗಳನ್ನು ಪರಿಹರಿಸುವ ದೊಡ್ಡ ಸವಾಲುಗಳನ್ನು ಎದುರಿಸಬೇಕಾಗಿದೆ.

ಮತ್ತೊಂದು ಕಡೆ, ಯು.ಎಸ್. ಕಾರ್ಯದರ್ಶಿ ಜಾನ್ ಸುಲೀವಾನ್‌ರವರು, ವೆನೆಜುವೆಲಾದ ಸರ್ಕಾರದ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಹೇರುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ. ತೈಲದ ಮೇಲಿನ ನಿರ್ಬಂಧ ಹೇರವುದಾಗಿ ಹೇಳಿಕೆ ನೀಡಿದ್ದಾರೆ. ಇವೆಲ್ಲಾ ಕ್ರಮಗಳು ವೆನೆಜುವೆಲಾದ ಆರ್ಥಿಕ ವ್ಯವಸ್ಥೆ ಮೇಲೆ ಅಗಾಧವಾದವಾದ ಪರಿಣಾಮ ಬೀರಿ ಪರಿಸ್ಥಿತಿಯನ್ನು ಮತ್ತಷ್ಟು ದುರ್ಬಲ ಗೊಳಿಸುತ್ತದೆ. ಯು.ಎಸ್.ನ ಈ ಘೋರ ಪ್ರಯತ್ನ ಗಳನ್ನು ದೃಢವಾಗಿ ಪ್ರತಿರೋಧಿಸಿ ಸೋಲಿಸ ಬೇಕಾಗಿದೆ. ಈ ದಿಸೆಯಲ್ಲಿ ಬಲಪಂಥೀಯ ವಿರೋಧಿಗಳು ಏನಾದರೂ ಯಶಸ್ವಿಯಾದರೆ, ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಗಳಿಗೆ ಹಾದಿ ಸುಗಮವಾಗುತ್ತದೆ. ಇದು ವೆನೆಜುವೆಲಾ ಬೊಲಿವಿಯೀರಿಯನ್ ಕ್ರಾಂತಿಯ ಮುನ್ನಡೆಗೆ ಅಡ್ಡಿಯಾಗುತ್ತದೆ. ಇದು ವಿಶ್ವದಾದ್ಯಂತ ಪ್ರಗತಿಶೀಲ ಚಳುವಳಿಗಳ ಮೇಲೆ ತುಂಬಾ ದುಷ್ಪರಿಣಾಮಗಳನ್ನು ಬೀರುವದರಲ್ಲಿ ಸಂಶಯವಿಲ್ಲ.

ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಮಡುರೊ ಅಧ್ಯಕ್ಷರಾಗಿ ವೆನೆಜುವೆಲಾವನ್ನು ಯಾವ ರೀತಿ ನಿಭಾಯಿಸಲು ಕಾರ್ಯೋನ್ಮುಖರಾಗುತ್ತಾರೆ ಕಾದುನೋಡಬೇಕಾಗಿದೆ. ಇವರ ಮುಂದಿರುವ ಸವಾಲುಗಳನ್ನು ನಿಭಾಯಿಸಲು ನಿರ್ಣಾಯಕ ವಾಗಿ ಆಡಳಿತ ವರ್ಗಗಳೊಂದಿಗೆ ವ್ಯವಹರಿಸಬೇಕು ಮತ್ತು ಕಾರ್ಯ ನಿರತ ಜನರಿಗೆ ಪ್ರಯೋಜನ ಕಾರಿಯಾದ ಪರಿಣಾಮಕಾರಿ– ಕ್ರಾಂತಿ ಕಾರಿ ಪರ್ಯಾಯ ವನ್ನು ನಿರ್ಮಿಸುವ ಕಡೆಗೆ ಸಾಗಬೇಕು. ಈ ನಡೆ ವೆನೆಜುವೆಲಾದ ಬೊಲಿವಿಯೀರಿಯನ್ ಕ್ರಾಂತಿಯ ರಕ್ಷಣೆ ಯ ಭವಿಷ್ಯದ ದೃಷ್ಟಿಯಿಂದ ಮಹತ್ವಪೂರ್ಣವಾಗಿದೆ. ಸರಕಾರವು ತನ್ನ ಚುನಾವಣಾ ಭರವಸೆ ಗಳನ್ನು ಪೂರೈಸುವ ಜೊತೆಗೆ, ವಿರೋಧಿಗಳ ಕಠಿಣ ಸವಾಲುಗಳನ್ನು ಎದುರಿಸಲು ಸೈದ್ಧಾಂತಿಕವಾಗಿಯೂ ಕೂಡ ಸನ್ನದ್ಧರಾಗಬೇಕಾಗಿದೆ. ●

JANASHAKTHI KANNADA VARA PATRIKE JUNE 4-10, 2018 Price: Rs. 10/- Date of Publication: 1 JUNE 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಮೇ 20, 2018 ರಂದು ಬೆಂಗಳೂರಿನ ಗಾಂಧಿಭವನದಲ್ಲಿ "ಮಾರ್ಕ್ಸ್200-ಕ್ಯಾಪಿಟಲ್150 ಮಾಲಿಕೆ"ಯ ಮೊದಲ ಕಂತಿನ ಪುಸ್ತಕ ಬಿಡುಗಡೆ ಮತ್ತು "ಜಾತಿದಮನ-ಅಸ್ಪೃಶ್ಯತೆಗಳ ವಿನಾಶ ಮತ್ತು ವರ್ಗ ಹೋರಾಟ – ಒಂದು ಮಾರ್ಕ್ಸ್ ವಾದಿ ಕಣ್ಣೋಟ" ಎಂಬ ವಿಷಯದ ಬಗೆಗಿನ ವಿಚಾರಸಂಕಿರಣ ಅತ್ಯಂತ ಸ್ಫೂರ್ತಿದಾಯಕವಾಗಿ ಮತ್ತು ಯಶಸ್ವಿಯಾಗಿ ನಡೆದಿದೆ. ಇಡೀ ದಿನದ ಸಮಾರಂಭದೊಂದಿಗೆ ಮಾರ್ಕ್ಸ್-200 ಸಂಭ್ರಮಾಚರಣೆ ಕರ್ನಾಟಕದಲ್ಲಿ ಆರಂಭವಾಗಿದೆ. ಪುಸ್ತಕ ಬಿಡುಗಡೆಯ ಗೋಷ್ಟಿಯ ವಿವರವಾದ ವರದಿ ಕಳೆದ ವಾರ ಪ್ರಕಟವಾಗಿದೆ. ವಿಚಾರಸಂಕಿರಣದ ವಿವರವಾದ ವರದಿ ಇಲ್ಲಿದೆ.

"ಜಾತಿ ಮೂಲರಚನೆ ಮತ್ತು ಸೈದ್ಧಾಂತಿಕ ಮೇಲ್-ರಚನೆಗಳ ಭಾಗ"

ವಸಂತರಾಜ ಎನ್.ಕೆ.

"ಜಾತಿವ್ಯವಸ್ಥೆಯು ಭಾರತದ ಸಮಾಜದಲ್ಲಿ ಉತ್ಪಾದಕ ಆಸ್ತಿಯ ಒಡೆತನಕ್ಕೆ ಅವಕಾಶ ಮತ್ತು ಕಸುಬಿನ ಆಯ್ಕೆಯನ್ನು ನಿಯಂತ್ರಿಸುವ ಮೂಲಕ ಉತ್ಪಾದನಾ ಸಂಬಂಧಗಳ (ಅಥವಾ ಮೂಲರಚನೆ ಎಂದು ಹೇಳಲಾಗುವುದರ) ಭಾಗ. ಅದು ದಮನಿತ ಜನತೆಯ ಪ್ರಜ್ಞೆಯ ಭಾಗವಾಗಿರುವ ಬ್ರಾಹ್ಮಣವಾದವನ್ನು ಹೇರುವ ಮೂಲಕ ಸೈದ್ಧಾಂತಿಕ ಮೇಲ್-ರಚನೆಯ ಭಾಗವೂ ಹೌದು" ಎಂದು ಭಾರತದಲ್ಲಿ ಜಾತಿಪದ್ಧತಿಯನ್ನು ವಿವರಿಸುತ್ತಾ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ. ವೆಂಕಟೇಶ ಆತ್ರೇಯ ಅವರು ಹೇಳಿದರು. ಅವರು "ಜಾತಿದಮನ-ಅಸ್ಪೃಶ್ಯತೆಗಳ ವಿನಾಶ ಮತ್ತು ವರ್ಗ ಹೋರಾಟ – ಒಂದು ಮಾರ್ಕ್ಸ್ ವಾದಿ ಕಣ್ಣೋಟ" ಎಂಬ ವಿಷಯದ ಬಗೆಗಿನ ವಿಚಾರಸಂಕಿರಣದ ದಿಕ್ಸೂಚಿ ಭಾಷಣ ಮಾಡುತ್ತಿದ್ದರು. ಈ ವಿಚಾರಸಂಕಿರಣವನ್ನು ನವಕರ್ನಾಟಕ ಮತ್ತು ಕ್ರಿಯಾ ಪ್ರಕಾಶನ ಸಂಸ್ಥೆಗಳು ಸಂಘಟಿಸಿದ್ದ ಮೇ 20ರಂದು ನಡೆದ "ಮಾರ್ಕ್ಸ್200-ಕ್ಯಾಪಿಟಲ್150"ಯ ಆಚರಣೆಯ ಭಾಗವಾಗಿ ಹಮ್ಮಿಕೊಳ್ಳಲಾಗಿತ್ತು.

ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ದಮನಗಳ ವಿರುದ್ಧ ಹೋರಾಟ ವರ್ಗಹೋರಾಟದ ಭಾಗ : ಆತ್ರೇಯ

ಹಲವು ಶತಮಾನಗಳ ದೀರ್ಘಕಾಲ ಗಟ್ಟಿಯಾಗಿ ಬೇರೂರಿ ಬೆಳೆದಿರುವ ಭಾರತದ ಜಾತಿ ವ್ಯವಸ್ಥೆಯ ವಿಶ್ಲೇಷಣೆ ಮತ್ತು ನಿಖರ ನಿರ್ವಚನೆ ಹಾಗೂ ವರ್ಗಗಳೊಂದಿಗೆ ಅವುಗಳ ಅಂತಸ್ಸಂಬಂಧಗಳ ಬಗ್ಗೆ ಎಡಪಂಥೀಯ-ಪ್ರಗತಿಪರರಲ್ಲೂ ಮಾರ್ಕ್ಸ್‌ವಾದಿಗಳಲ್ಲೂ ಒಮ್ಮತವಿಲ್ಲ ಎಂಬುದು ವಾಸ್ತವ. ವರ್ಗಹೋರಾಟ ಪ್ರಾಥಮಿಕ, ವರ್ಗಹೋರಾಟ ಬೆಳೆದಂತೆ ಜಾತಿಗಳು ದುರ್ಬಲಗೊಳ್ಳುತ್ತವೆ ಎಂದು ಕೆಲವರು ತಿಳಿದಿದ್ದಾರೆ. ಇನ್ನೂ ಕೆಲವರು ಭಾರತದಲ್ಲಿ ಜಾತಿಯೇ ಪ್ರಾಥಮಿಕ ವ್ಯವಸ್ಥೆ ಎನ್ನುತ್ತಾರೆ. ಮತ್ತೂ ಕೆಲವರು ವರ್ಗಗಳ ಅಸ್ತಿತ್ವವನ್ನು ಒಪ್ಪಿದರೂ ಜಾತಿವಿನಾಶವಾಗದೆ ವರ್ಗಹೋರಾಟ ಇಲ್ಲಿ ಸಾಧ್ಯವಿಲ್ಲ ಎನ್ನುತ್ತಾರೆ. ಈ ಧೋರಣೆಗಳು ಸ್ವಾತಂತ್ರ್ಯ ಚಳುವಳಿಯ ಕಾಲದಿಂದಲೂ ಇವೆ. ಕಳೆದ ಹಲವು ದಶಕಗಳ ಅನುಭವದಿಂದ ಇವೆರಡೂ ತಪ್ಪು ತಿಳುವಳಿಕೆಗಳು ಎಂಬುದು ಸ್ಪಷ್ಟ ಎಂದು ಪ್ರೊ. ಆತ್ರೇಯ ವಿವರಿಸುತ್ತಾ, ಮೇಲೆ ಹೇಳಿದಂತೆ ಜಾತಿವ್ಯವಸ್ಥೆಯು ಉತ್ಪಾದನಾ ಸಂಬಂಧಗಳ ಒಟ್ಟು ಮೊತ್ತದ ಮತ್ತು ಸೈದ್ಧಾಂತಿಕ ಮೇಲ್ ರಚನೆಗಳ ಎರಡರದ್ದೂ ಭಾಗ ಎಂದು ಒತ್ತಿ ಹೇಳಿದರು. ಭಾರತದ ಚರಿತ್ರೆಯಲ್ಲಿ ಜಾತಿಯ ವಿಕಾಸದ ಬಗ್ಗೆ ಪ್ರೊ, ಇರ್ಫಾನ್ ಹಬೀಬ್ ಅವರ ನಿರೂಪಣೆ ಮತ್ತು ಬಿ.ಟಿ.ರಣದಿವೆ ಅವರ "ಜಾತಿ, ವರ್ಗ ಮತ್ತು ಆಸ್ತಿ ಸಂಬಂಧ"ಗಳ ವಿಶ್ಲೇಷಣೆ ಜಾತಿವ್ಯವಸ್ಥೆಯನ್ನು ಮಾರ್ಕ್ಸ್ ವಾದಿ ಕಣ್ಣೋಟದಿಂದ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದರು.

ಭಾರತದಲ್ಲಿ ಸಾಮಾಜಿಕ ಬದಲಾವಣೆ ಮತ್ತು ಕ್ರಾಂತಿಯನ್ನು ತರುವ ದೃಷ್ಟಿಯಿಂದ ಜಾತಿಯ ವಿಶ್ಲೇಷಣೆ ಮಾಡುವುದಾದರೆ, ತಮ್ಮ ವರ್ಗ ಹಿತಾಸಕ್ತಿಗಳ ಬಗ್ಗೆ ರಾಜಿ ಮಾಡಿಕೊಂಡಿರುವ ಭಾರತದ ಆಳುವ ವರ್ಗಗಳಾದ ಬಂಡವಾಳಶಾಹಿ ಮತ್ತು ಭೂಮಾಲಕ ವರ್ಗಗಳಿಗೆ, ದುಡಿಯುವ ಜನರನ್ನು ಒಡೆಯುವ ದೃಷ್ಟಿಯಿಂದಲೂ ಗರಿಷ್ಟ ಆರ್ಥಿಕ ಶೋಷಣೆ ಮುಂದುವರೆಸುವ ದೃಷ್ಟಿಯಿಂದಲೂ ಜಾತಿವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದು ಅತ್ಯಂತ ಉಪಯುಕ್ತವಾದದ್ದು. ಇದರಿಂದಾಗಿಯೇ ಜಾತಿ ದಮನ ಮತ್ತು ಅಸ್ಪೃಶ್ಯತೆಗಳು ಏಳು ದಶಕಗಳ ನಂತರವೂ ಕಾನೂನು, ಚಳುವಳಿ, ಶಿಕ್ಷಣ-ಪ್ರಚಾರಗಳ ನಂತರವೂ ನಾಶವಾಗಿಲ್ಲ ಮಾತ್ರವಲ್ಲ, ಸಡಿಲ ಸಹ ಆಗದಿರುವುದಕ್ಕೆ ಮುಖ್ಯ ಕಾರಣ. ಇದರರ್ಥ ಜಾತಿ ಸಾವಿರಾರು ವರ್ಷಗಳಿಂದ ಬದಲಾಗಿಲ್ಲ ಎಂದಲ್ಲ. ಇದು ಕೆಲವರು ಅಂದುಕೊಳ್ಳುವಂತೆ ಬಂಡವಾಳಶಾಹಿ-ಪೂರ್ವ ಉತ್ಪಾದನಾ ವ್ಯವಸ್ಥೆಗಳ ಪಳೆಯುಳಿಕೆಯೂ ಅಲ್ಲ. ಉತ್ಪಾದನಾ ಸಂಬಂಧಗಳ ಭಾಗವಾಗಿರುವುದರಿಂದ ಅದು ಬಂಡವಾಳಶಾಹಿಯು ಪ್ರಧಾನ ಉತ್ಪಾದನಾ ವಿಧಾನವಾಗಿ ಮತ್ತು ಕಳೆದ ಮೂರು ದಶಕಗಳಲ್ಲಿ ನವ-ಉದಾರವಾದಿ ವ್ಯವಸ್ಥೆ ಎಲ್ಲಾ ಕ್ಷೇತ್ರಗಳಿಗೆ ಹರಡುತ್ತಿದ್ದಂತೆ, ಆಳುವ ವರ್ಗಗಳ ಅಗತ್ಯಕ್ಕೆ ತಕ್ಕಂತೆ ಬದಲಾಗುತ್ತಾ ಬಂದಿದೆ. ಈ ಎಲ್ಲಾ ಬದಲಾವಣೆಗಳಿಗೆ ಹೊಂದಿಕೊಂಡು ಬೇರೂರಿದೆ. ಗ್ರಾಮೀಣ ಪ್ರದೇಶದಲ್ಲಿ ಬೆಳೆದು ಬಂದಿರುವ ಹಳೆಯ ಪಾಳೆಯಗಾರಿ ಭೂಮಾಲಕರು, ಹೊಸ ಬಂಡವಾಳಶಾಹಿ ಭೂಮಾಲಕರು, ಶ್ರೀಮಂತ ಬಂಡವಾಳಶಾಹಿ ರೈತರು, ಕಾಂಟ್ರಾಕ್ಟರುಗಳು, ಲೇವಾದೇವಿಗಾರರು ಮುಂತಾದ ಗ್ರಾಮೀಣ ಶ್ರೀಮಂತರ ಕೂಟ ಜಾತಿಯನ್ನು ಅತ್ಯಂತ ವ್ಯವಸ್ಥಿತವಾಗಿ ಮತ್ತು ಪರಿಣಾಮಕಾರಿಯಾಗಿ ತಮ್ಮ ಯಜಮಾನಿಕೆಯನ್ನು ಗಟ್ಟಿಗೊಳಿಸಲು ಬಳಸುತ್ತಿದೆ. ಆಧುನಿಕ ಜಾತಿವ್ಯವಸ್ಥೆ ಇಂದಿನ ಭಾರತದ ಆಳುವ ವರ್ಗಗಳ ಒಳಗಿನ ರಾಜಿ, ಸಾಮ್ರಾಜ್ಯಶಾಹಿಗಳ ಜತೆ ಅವರ ಸಂಘರ್ಷ-ರಾಜಿಯ ಸನ್ನಿವೇಶದ ಸಂಕೀರ್ಣ ಅಗತ್ಯಗಳಿಗೆ ರೂಪುಗೊಂಡ ಸಂಕೀರ್ಣ ವ್ಯವಸ್ಥೆ. ಅದು ಗ್ರಾಮೀಣ ಭಾರತದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಸ್ವರೂಪದ ಮೇಲೆ ಪರಿಣಾಮ ಬೀರುವಷ್ಟು ಪ್ರಬಲವಾಗಿದೆ ಎಂದು ಭಾರತದ ಜಾತಿವ್ಯವಸ್ಥೆಯ ಸಂಕೀರ್ಣತೆಯನ್ನು ಅವರು ಮನದಟ್ಟು ಮಾಡಿದರು.


ಈ ಪರಿಸ್ಥಿತಿಯನ್ನು ಬದಲಿಸಬೇಕಾದರೆ ಆರ್ಥಿಕ ಶೋಷಣೆಯ ವಿರುದ್ಧದ ಮತ್ತು ಜಾತಿ-ದಮನ ಹಾಗೂ ಅಸ್ಪೃಶ್ಯತೆಗಳ ಸಾಮಾಜಿಕ ದಮನಗಳ ವಿರುದ್ಧ ಹೋರಾಟ ಜತೆಜತೆಗೆ ಸಾಗಬೇಕು. ಇವೆರಡೂ ವ್ಯಾಪಕ ಅರ್ಥದಲ್ಲಿ ವರ್ಗಹೋರಾಟದ ಭಾಗವೇ. ಒಂದು ವರ್ಗ ಹೋರಾಟ ಇನ್ನೊಂದು ಜಾತಿ-ಹೋರಾಟ ಎಂದು ಅವನ್ನು ಪ್ರತ್ಯೇಕಿಸುವುದಾಗಲಿ, ಒಂದರ ನಂತರ ಇನ್ನೊಂದು ಮಾಡೋಣ ಎನ್ನುವುದಾಗಲಿ ಸಾಧ್ಯವಿಲ್ಲ. ಅದೇ ಸಮಯದಲ್ಲಿ ದೇಶದ ಪ್ರಧಾನ ಉತ್ಪಾದನಾ ಸಂಬಂಧ ಬಂಡವಾಳಶಾಹಿ ಕೂಲಿ-ಕೆಲಸದ್ದಾಗಿದ್ದು ಎಲ್ಲಾ ಜಾತಿಗಳ ದುಡಿಯುವ ವರ್ಗವನ್ನು ಒಂದುಗೂಡಿಸುವ ಅಗತ್ಯವೂ ಇದೆ. ಬಹುಸಂಖ್ಯಾತ ದುಡಿಯುವ ಜನರು ದಲಿತ, ಹಿಂದುಳಿದ ಜಾತಿಗಳಿಗೆ ಸೇರಿದ್ದು ಆರ್ಥಿಕ ಶೋಷಣೆ ಮತ್ತು ವಿವಿಧ ರೀತಿಯ ತೀವ್ರತೆಯ ಜಾತಿ-ದಬ್ಬಾಳಿಕೆ, ಅಸ್ಪೃಶ್ಯತೆ ಸೇರಿದಂತೆ ವಿವಿಧ ಹೊರಗಿಡುವಿಕೆಗಳ ರೂಪದ ಸಾಮಾಜಿಕ ದಮನವನ್ನು ಎದುರಿಸುತ್ತಿದ್ದಾರೆ. ಅವುಗಳನ್ನು ಜತೆಗೇ ಎತ್ತಿಕೊಳ್ಳುವ ವರ್ಗಹೋರಾಟದಿಂದ ಮಾತ್ರ ಸಾಧ್ಯ ಇದು ಎಂದು ಪ್ರೊ. ಆತ್ರೇಯ ಹೇಳಿದರು.

ಜಾತಿ ವ್ಯವಸ್ಥೆ ವರ್ಗವ್ಯವಸ್ಥೆಯ ಒಂದು ರೂಪ : ಜಿ.ಎನ್.ನಾಗರಾಜ್

ಇತ್ತೀಚಿನ ಚುನಾವಣೆಯ ಫಲಿತಾಂಶದ ವಿಶ್ಲೇಷಣೆಯ ಉದಾಹರಣೆಯೊಂದಿಗೆ ಜಿ.ಎನ್. ನಾಗರಾಜ್ ಆಧುನಿಕ ಜಾತಿ ಮತ್ತು ವರ್ಗವ್ಯವಸ್ಥೆಗಳು ಮಿಳಿತವಾಗಿ ಸಂಕೀರ್ಣವಾಗಿರುವ ಬಗೆಯನ್ನೂ, ಚುನಾವಣೆಯ ಫಲಿತಾಂಶದ ವಿಶ್ಲೇಷಣೆಯನ್ನೂ ಬರಿಯ ಜಾತಿ ಅಥವಾ ವರ್ಗದ ಕಣ್ಣೋಟದಿಂದ ನೋಡುವುದು ಹೇಗೆ ಸೀಮಿತ ಒಕ್ಕಣ್ಣ ದೃಷ್ಟಿಯಾಗುತ್ತದೆ ಎಂಬುದನ್ನೂ ತಮ್ಮ ವಿಚಾರಮಂಡನೆಯಲ್ಲಿ ವಿವರಿಸಿದರು. ಜಾತಿ ವ್ಯವಸ್ಥೆ ಎನ್ನುವುದು ಸಾವಿರಾರು ವರ್ಷಗಳ ಕಾಲ ಭಾರತದಲ್ಲಿದ್ದ ವರ್ಗವ್ಯವಸ್ಥೆಯ ಒಂದು ರೂಪ. ಇದನ್ನು ಬರಿಯ ಮಾರ್ಕ್ಸ್‌ವಾದಿಗಳು ಮಾತ್ರವಲ್ಲ, ಡಾ. ಅಂಬೇಡ್ಕರ್ ಸೇರಿದಂತೆ ಹಲವು ಚಿಂತಕರು ಗುರುತಿಸಿದ್ದರು. ಗಂಗಾನದಿಯ ತೀರದ ವೇದಕಾಲದ ಆರ್ಯನ್ ಸಮಾಜದಲ್ಲಿದ್ದ ತ್ರಿವರ್ಣಗಳಿದ್ದ ವರ್ಣ ವ್ಯವಸ್ಥೆ ಕರ್ನಾಟಕ ಸೇರಿದಂತೆ ಇತರ ಪ್ರದೇಶಗಳಿಗೆ ಹರಡಿದಂತೆ ಆರ್ಯೇತರ ಜನರನ್ನು ನಾಲ್ಕನೇಯ ಅಂದರೆ ಶೂದ್ರ ವರ್ಣವಾಗಿ ಸೇರಿಸಿಕೊಳ್ಳುವುದರೊಂದಿಗೆ ಚತುರ್ವರ್ಣ ವ್ಯವಸ್ಥೆ ಸ್ಥಾಪಿತವಾಯಿತು. ಹಿಂದೆ ರೈತರು ದುಡಿಯುವ ಜನರು ಆಗಿದ್ದ ವೈಶ್ಯ ವರ್ಣಕ್ಕೆ ಬಡ್ತಿ ದೊರೆತು ಎಲ್ಲಾ ದುಡಿಮೆಯ ಜವಾಬ್ದಾರಿ ಶೂದ್ರರದಾಯಿತು. ಚರಿತ್ರೆಯ ಉದ್ದಕ್ಕೂ ಇಂತಹ ಯಾವುದೇ ಸನ್ನಿವೇಶಕ್ಕೂ ಹೊಂದಿಕೊಳ್ಳುವ ಅಗಾಧ ನಮ್ಯತೆ ಮತ್ತು ಸುಭದ್ರತೆ ಎರಡನ್ನೂ ಜಾತಿ ವ್ಯವಸ್ಥೆ ಪ್ರದರ್ಶಿಸಿದೆ ಎಂದು ಕರ್ನಾಟಕದಲ್ಲಿ ಜಾತಿವ್ಯವಸ್ಥೆಯ ಆರಂಭವನ್ನು ಜಿ.ಎನ್. ವಿವರಿಸಿದರು.

ಕರ್ನಾಟಕದಲ್ಲಿ ವ್ಯವಸಾಯದಲ್ಲಿ ತೊಡಗಿದ್ದ ಕುಲಗಳು, ಕುಲಪ್ರಭುತ್ವಗಳು ಮುಂದೆ ರಾಜಪ್ರಭುತ್ವಗಳಾಗಿ ಉದಯಿಸುತ್ತಿದ್ದಂತೆ ಅವು ವೈದಿಕ ವರ್ಣವ್ಯವಸ್ಥೆಯನ್ನು ಅಂಗೀಕರಿಸಿದವು, ಕರ್ನಾಟಕದಲ್ಲಿ ಆಗಲೇ ವೈದಿಕ, ಬೌದ್ಧ, ಜೈನ ಈ ಮೂರು ಧರ್ಮಗಳು ಪ್ರಚಲಿತವಿದ್ದರೂ ವೈದಿಕ ವರ್ಣವ್ಯವಸ್ಥೆಯನ್ನು ಅಂಗೀಕರಿಸಿದವು ಎಂಬುದು ವಿಶೇಷ. ವರ್ಣವ್ಯವಸ್ಥೆಯನ್ನು ರಕ್ಷಿಸುವುದು, ವಿವಿಧ ಉದ್ಯೋಗಗಳನ್ನು ಮಾಡುವವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡುವುದು, ಅವರರವರಿಗೆ ಕೊಟ್ಟ ಉದ್ಯೋಗಗಳ ನಿಯಮಗಳನ್ನು ಉಲ್ಲಂಘಿಸುವವರಿಗೆ ಶಿಕ್ಷಿಸುವುದು ರಾಜನ ಕರ್ತವ್ಯಗಳೆಂದು ಕದಂಬನಿಂದ ಇತ್ತೀಚಿನ ಮೈಸೂರು ರಾಜರ ದಾಖಲೆಗಳು ಹೇಳುತ್ತವೆ. ಇಂತಹ ಜಾತಿ-ವರ್ಣ ವ್ಯವಸ್ಥೆ ಆಧಾರಿತ ಪಾಳೆಯಗಾರಿ ವ್ಯವಸ್ಥೆಯನ್ನು ನಾಶ ಮಾಡದೆ ವಸಾಹತುಶಾಹಿ ಮತ್ತು ಭಾರತದ ಬಂಡವಾಳಶಾಹಿ ವರ್ಗ ಬಂಡವಾಳಶಾಹಿ ವರ್ಗವ್ಯವಸ್ಥೆಯನ್ನು ಹೇರಿದೆ. ಈ ಹೇರಿಕೆ ಕನಾಟಕದ ವಿವಿಧ ಪ್ರದೇಶಗಳಲ್ಲಿ ವಿವಿಧ ರೀತಿಯಲ್ಲಿ ಬೇರೆ ಬೇರೆ ತೀವ್ರತೆಯಲ್ಲಿ ಇವೆ. ಇವು ಕರ್ನಾಟಕದ ವಿವಿಧ ಪ್ರದೇಶಗಳ ವರ್ಗ-ಜಾತಿ ವ್ಯವಸ್ಥೆಯ ವಿಶಿಷ್ಟತೆಗೆ ಕಾರಣವಾಗಿದೆ. ಈ ವ್ಯತ್ಯಾಸಗಳ ಜತೆ ಈ ಪ್ರದೇಶಗಳ ನಿರ್ದಿಷ್ಟ ಅಧ್ಯಯನ ಮಾಡದೆ

ಪುಟ 11 ಕ್ಕೆ



ಆತ್ರೇಯ



ಗಾಯತ್ರಿ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**